ಶ್ರೀ ನಜಾಶಿವಪ್ಪ ಪಾಟೀರ್.—ನೀವು ನಾವು ಏನಾದರೂ ಕೇಳಿದರೆ ಮಿನಿಸ್ಟರ್ ಇಲ್ಲ ಎಂದು ಬಹು ಸುಲಭವಾಗಿ ಹೇಳುತ್ತೀರಿ. ನಾವು ಹೇಳುವುದರಲ್ಲಿ ಏನಾದರೂ ಹೆಚ್ಚು ಕಡಿಮೆ ಆದರೆ ನಮ್ಮ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ.

ಉಪಾಧ್ಯಕ್ಷರು.—ಇದಕ್ಕೆ ಸಮಯ ಕಳೆಯುವುದು ಸರಿಯಲ್ಲ.

ಶ್ರೀ ಎಂ. ನಾಗಪ್ಪ.—ನಾವು ಸಮಯ ಕಳೆಯಬೇಕೆಂದಿಲ್ಲ. ಸ್ಟೇಟ್‌ಮೆಂಟ್ ಯಾವಾಗ ಮಾಡುತ್ತಾರೆಂಬುದನ್ನು ಹೇಳಿ ಅಷ್ಟಾದರೂ ಭರವಸೆಯನ್ನು ಕೊಡುವುದಿಲ್ಲವೇ, ಸ್ವಾಮಿ ?

ಉಪಾಧ್ಯಕ್ಷರು.—ನಾನು ತಿಳಿದುಕೊಂಡು ಹೇಳುತ್ತೇನೆ.

Sri B. P. GANGADHAR.—May I know what happened to the privilege motion against the Press?

ಉಪಾಧ್ಯಕ್ಷರು.—ಕಾರ್ಯಕಲಾಪಗಳ ಸಲಹಾ ಸಮಿತಿ ಇಂದು ಸೇರಿ ಯಾವಾಗ ಆ ವಿಷಯಗಳಿಗೆ ಅವಕಾಶ ಕೊಡಬೇಕು ಎಂದು ತೀರ್ಮಾನ ಮಾಡುತ್ತದೆ.

Mysore Land Revenue (Second Amendment) Bill, 1969

Motion to Consider—(Debate Contd).

† ಶ್ರೀ ಎಸ್. ಗೊಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಉಪಾಧ್ಯಕ್ಷರೇ, ನಿನ್ನೆ ರಾಜಸ್ವ ಮಂತ್ರಿಗಳು ಸಭೆಯ ಮುಂದೆ ಮಂಡಿಸಿದ ಭೂಕಂದಾಯದ ಎರಡನೇ ತಿದ್ದುಪಡಿ ವಿಧೇಯಕದ ಬಗ್ಗೆ ಕೆಲವು ಮಾತುಗಳನ್ನು ಹೇಳಿದ್ದೇನೆ. ಅದಷ್ಟು ಬೇಗ ಭಾಷಣ ಮುಗಿಸಬೇಕು ಎನ್ನುವ ಆಸೆ ನನಗೂ ಇದೆ. ಆದರೆ ಏನು ಹೇಳಬೇಕು, ಏನು ಹೇಳಬಾರದು ಎನ್ನುವುದರ ಬಗ್ಗೆ ನನಗೆ ತೀರ್ಮಾನಕ್ಕೆ ಬರುವುದು ಬಹಳ ಕಷ್ಟವಾಗಿದೆ. ಮೇಲಿಂದ ಮೇಲೆ ಸರ್ಕಾರದವರು ಕೆಲವು ಮಾತುಗಳನ್ನು ಇಲ್ಲಿ ಹೇಳುತ್ತಿರುತ್ತಾರೆ. ಅದು ಯಾವ ವಿಚಾರವಂತನಿಗೇ ಆಗಲಿ ಅವನ ಮನಸ್ಸನ್ನು ಪ್ರಚೋದನೆ ಮಾಡದೆ ಇರರಾರದು, ಕಳವಳವನ್ನು ಉಂಟುಮಾಡದೆ ಇರರಾರದು ಎಂದು ನನಗನ್ನಿಸುತ್ತದೆ. ಈಗತಾನೇ ಭಾರಿ ನೀರಾವರಿ ಮತ್ತು ವಿದ್ಯುಚ್ಛಕ್ತಿ ಇರಾಖೆಯನ್ನು ನಿರ್ವಹಿಸುತ್ತಿರುವ ಮಾನ್ಯ ಸಚಿವರೊಬ್ಬರು ಈಚೆಗೆ ರಾಜ್ಯವಿದ್ಯುಚ್ಛಕ್ತಿ ಮಂಡಲಿಯವರು ಏನು ದರ ಏರಿಸಿದ್ದಾರೆ ಅದು ಹೆಚ್ಚೇನೂ ಆಗುವುದಿಲ್ಲ, ಅದರಿಂದ ರೈತರಿಗೆ ತೊಂದರೆಯಾಗುವುದಿಲ್ಲ ಎನ್ನುವ ಅರ್ಥದಲ್ಲಿ ಅವರು ಮಾತನಾಡಿದರು. ಮಾನ್ಯ ಸಭೆಯ ಸದಸ್ಯರಿಗೆ ಈಗಾಗಲೇ ತಿಳಿದಿದೆ, ಕೇಂದ್ರ ಸರ್ಕಾರದವರು ಈ ವರ್ಷದ ಆಯವ್ಯಯದಲ್ಲಿ ಭೂಸಂಪತ್ತಿನ ಮೇಲೆ ತೆರಿಗೆಯನ್ನು ವಿಧಿಸಬೇಕು ಎಂತಲೂ, ಪಂಪ್‌ಸೆಟ್‌ಗಳ ಮೇಲೆ ತೆರಿಗೆಯನ್ನು ವಿಧಿಸಬೇಕು ಎಂತಲೂ, ರಾಸಾಯನಿಕ ಗೊಬ್ಬರಗಳ ಮೇಲೆ ಹೆಚ್ಚಿನ ಬೆರೆಯನ್ನು ನಿಗದಿ ಮಾಡಬೇಕು ಎಂತಲೂ ತೀರ್ಮಾನ ಮಾಡಿದ್ದಾರೆ. ಇದೆಲ್ಲ ಹೊರೆ ಬೀಳುವುದು ರೈತರ ಮೇಲೆ. ಈಗಾಗಲೇ ರಾಜ್ಯದ ರಾಜಸ್ವ ಮಂತ್ರಿಗಳು ತಿದ್ದುಪಡಿ ಮಾಡಿ ಪಡೆದುಕೊಳ್ಳತಕ್ಕ ಅಧಿಕಾರ ವ್ಯಾಪ್ತಿಯಲ್ಲಿ ಈ ಅನಿಷ್ಟಗಳನ್ನೆಲ್ಲ ತಡೆಗಟ್ಟುವಂಥ ಶಕ್ತಿ ಬರುವುದಿಲ್ಲ. ಹೆಣದ ಮೇಲೆ ಏನನ್ನಾದರೂ ಹೇರ ಬಹುದು. ಹಾಗೆಯೇ ರೈತರ ಮೇಲೆ ಹೇರುತ್ತ ಹೋಗತಕ್ಕ ಕರಭಾರಗಳು. ಅವರು ಈಗಾಗಲೇ ನೆಲ ಹಿಡಿದಿದ್ದಾರೆ. ಗ್ರಾಮ ಪಂಚಾಯತಿಗಳ ಮಟ್ಟದ ಸೆಸ್‌ಗಳಿಂದ ಹಿಡಿದು ಮೊರಾರ್ಜಿ ಸರ್ಕಾರದ ಹೊಸ ತೆರಿಗೆಗಳ ತನಕ ಇದು ಅವನನ್ನು ಮಣ್ಣು ಮಾಡುತ್ತಿದೆ. ಇದನ್ನು ತಾವು ಗಣನೆಗೆ ತೆಗೆದುಕೊಳ್ಳಬೇಕು. ಈಗ ವಿದ್ಯುಚ್ಛಕ್ತಿ ಮಂಡಲ ದರವನ್ನು ಏರಿಸಿರುವುದರಿಂದ ರೈತರಿಗೆ, ಬಳಕೆದಾರರಿಗೆ, ದೀಪ ಉರಿಸುವವರಿಗೆ ತೊಂದರೆಯಾಗುವುದಿಲ್ಲವೆಂದು ಹೇಳಿದರು, ಇದರ ಒಗ್ಗೆ ವಿಷಾದದಿಂದ ಪ್ರತಿಭಟಿಸಬೇಕಾಗಿದೆ. ಈಗ ಅನೇಕ ಕಡೆಗಳಿಂದ ವಿರೋಧ ವ್ಯಕ್ತವಾಗಿದೆ. ಹಳ್ಳಿಗಳವರಿಗೆ ಬಾಕಿ ಕಟ್ಟದಿದ್ದರೆ ಕನೆಕ್‌ಷನ್ ತಪ್ಪಿಸುವುದಾಗಿ ನೋಟೀಸು ಕೊಟ್ಟಿರುವುದನ್ನು ಗಮನಿಸಬೇಕು. ರೈತರಿಗೆ ಪಂಪುಸೆಟ್ಟು, ನೀರಾವರಿ ಸೌಲಭ್ಯ, ಗೊಬ್ಬರ, ತಕಾವಿ ಸಾಲ, ಒಳ್ಳೆಯ ಬೀಜ, ಒಳ್ಳೆಯ ಹೋರಿ ಕೊಡುತ್ತೇವೆಂದು ಹೇಳುತ್ತಿದ್ದೀರಿ. ಇದಕ್ಕೆ ಒಂದು ಯಂತ್ರವಿದೆ, ಲಕ್ಷಾಂತರ ಜನರು ಕೆಲಸಮಾಡುತ್ತಿದ್ದಾರೆ, ಕೋಟಿಗಟ್ಟಲೆ ಸಂಬಳ ಕೊಡುತ್ತಿದ್ದಾರೆ. ಅದುದರಿಂದ ಈ ಕಾರ್ಯ ನಡೆಯುವುದು. ವಾಸ್ತವವಾಗಿ ಸರಕಾರ ಹೇಗೆ ನಡೆಸುತ್ತಿದ್ದೀರೆಂಬ ಅರಿವು ಆಗಿರುವ ಅಗೆ ಕಾಣುವುದಿಲ್ಲ. ಇಷ್ಟೆಲ್ಲಾ ಹಣ ಖರ್ಚುಮಾಡಿ ನಾಲ್ಕೈದು ವರ್ಷಕಾಲ ಅಧಿಕಾರಿಗಳು ಸರಕಾರದವರು ನೀಡಿದ ಆದೇಶದಮೇಲೆ ವರದಿ ಕೊಟ್ಟಮೇಲೆ ಹೊಸ

5 ವರ್ಷಗಳಲ್ಲಿ ರೈತನಿದ್ದ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂಡು ಈ ಬಗ್ಗೆ ಒಂದು ಅಭಿಪ್ರಾಯಕ್ಕೆ ಬಂದಿದ್ದಾರೆ. ಸರ್ಕಾರದವರು ಇಂಥ ಒಂದು ಅಭಿಪ್ರಾಯಕ್ಕೆ ಬರಬೇಕಾಗಿದ್ದರೆ ಇನ್ನೂ ಏನೇನು ವಿಷಯಗಳನ್ನು ಅವರು ಗಣನೆಗೆ ತೆಗೆದುಕೊಂಡಿದ್ದಾರೆಂದರೆ ಮಳೆ ಬೀಳುವುದು, ಮಾರು ಕಚ್ಚೆಗಳು, ರೈತ್‌ಗೇಜುಗಳು ಕೆಲವು ಕಡೆ ಅವು ಇಲ್ಲದಿದ್ದರೂ ಇದ್ದಂತೆ ಲೆಕ್ಕಕ್ಕೆ ತೆಗೆದುಕೊಂಡು ಅದರ ಜೊತೆಗೆ ಆಸ್ಪತ್ರೆ, ಪೋಸ್ಟಾಫೀಸು, ಅಲ್ಲಿರತಕ್ಕ ಶಿಬ್ಬಂದಿ ಮತ್ತು ರಸ್ತೆ ಹಾಗೂ ಸಹಕಾರ ಸಂಘ ಇವುಗಳನ್ನೆಲ್ಲಾ ಗಣನೆಗೆ ತೆಗೆದುಕೊಂಡಿದ್ದಾರೆ. ಅಂದರೆ ಇವುಗಳ ಮೂಲಕ ಆ ರೈತ ಪ್ರಾಣಿಗೆ ನಾನಾ ಮುಖವಾಗಿ ಸಹಕಾರ ನೀಡಿ ಅವನ ಪ್ರಗತಿ ಸಾಧನೆಗೆ ನಾನಾ ಮುಖವಾಗಿ—ಬಹುಮುಖವಾಗಿ ಆಗುವುದಕ್ಕೆ ಸಹಾಯ ಮಾಡಿದ್ದಾರೆಂದೂ ಅವರ ಜೀವನವನ್ನು ಒಂದಲ್ಲಾ ಒಂದು ರೀತಿಯಲ್ಲಿ ಅಂದ ಚೆಂದಗಳನ್ನು ಉಂಟು ಮಾಡಿದ್ದಾರೆಂದೂ ಹೇಳಿ ಪ್ರತಿಯೊಂದು ಜಿಲ್ಲೆಗೂ ಒಂದೊಂದು ಪುಸ್ತಕವನ್ನು ಬರೆಸಿ, ಆ ಪುಸ್ತಕವನ್ನು ಬರೆದ ವ್ಯಕ್ತಿಗೆ 500 ಅಥವಾ ಸಾವಿರವೋ ಹಣವನ್ನು ಸುರಿದುದರಿಂದ ಇವರ ಜೀವನ ಬಹಳ ಸುಗಮವಾಗಿ ಸಾಗುತ್ತಿದೆ ಎಂದು ಭಾವಿಸಿದ್ದಾರೆ. ಹಾಗೆ ಹಣವನ್ನು ಸುರಿದ ಮಾತ್ರಕ್ಕೇ ಆ ಪುಸ್ತಕಗಳ ಮೇಲೆ ಜೋಳ ರಾಗಿಯನ್ನು ಬೆಳೆಯುವುದ ಕ್ಯಾಗುತ್ತದೆಯೇನು ? ಅದು ಸಾಧ್ಯವಿಲ್ಲ. ಆ ಕಾಗದ ಗೊಬ್ಬರಕ್ಕೂ ಕೂಡ ಆ ಹಳ್ಳಿಯ ಜನಕ್ಕೆ ಉಪಯೋಗವಾಗುವುದಿಲ್ಲ. ಏಕೆಂದರೆ ಇಲ್ಲಿಯವರೆಗೂ ಇನ್ನೂ ಕಾಗದದ ಗೊಬ್ಬರವನ್ನು ಕಂಡು ಹಿಡಿದಿಲ್ಲ. ಆ ಕಾಗದವನ್ನು ಹೊಟ್ಟೆಗೇನೂ ಸಿಕ್ಕದಿದ್ದರೆ ಕತ್ತೆ ಮಾತ್ರ ತಿನ್ನುತ್ತದೆ. ಅದರೆ ಇದೆಲ್ಲಾ ಏನನ್ನು ಸೂಚಿಸುತ್ತಿದೆ ಎಂದರೆ ಸರ್ಕಾರದವರಿಗೆ ಯಾವುದು ಬೇಡವೋ ಅದನ್ನು ಬಹಳ ಕೂಲಂಕಷವಾಗಿ ಪರಿಶೀಲನೆ ಮಾಡುವುದು ಒಂದು ಅಭ್ಯಾಸವಾಗಿ ಬಂದು ಬಿಟ್ಟಿದೆ. ಕೇವಲ 5 ವರ್ಷಗಳ ಒಂದು ಮಳೆ ಗೇಜನ್ನು ಬರೆದುಕೊಂಡು—ಅಲ್ಲಿ ಮಳೆಗೇಜುಗಳು ಇರಲಿ ಇಲ್ಲದಿರಲಿ ಅವುಗಳು ಅಲ್ಲಿ ಇದ್ದಂತೆ ಲೆಕ್ಕವನ್ನು ಬರೆದುಕೊಂಡು, ರೈತನಿಗೆ ಈಗ ಬಹಳ ಒಳ್ಳೆಯ ದರ ಸಿಕ್ಕುತ್ತಿದೆ, ಆದ್ದರಿಂದ ಒಬ್ಬ ತೋಟಗಾರನಿಗೆ ಒಂದು ಎಕರೆ ತೋಟವಿದ್ದರೆ ಒಂದು ನೂರು ರೂಪಾಯಿ ಕಂದಾಯ ಕೊಡು ಎಂದರೆ ಕೊಡುತ್ತಾನೆ, ಅದರಲ್ಲಿ ತೊಂದರೆ ಏನೂ ಇಲ್ಲ ಎಂಬ ಭಾವನೆ ಸರ್ಕಾರದವರಿಗೆ ಬಂದಿದೆ. ಇಂಥ ಒಂದು ಭಾವನೆ ಬರುವುದಕ್ಕೆ ದಾರಿಯನ್ನು ಮಾಡಿದವರು ಮಿರಾನಿಯವರು. ಅವರು ಯಾವರೀತಿ ಹೇಳಿ ಇನ್‌ಸ್ಪೆಕ್ಷನ್ ಕೊಟ್ಟಿದ್ದರೋ ಅದರಂತೆ ಆ ಅಧಿಕಾರಿಗಳು ಸರ್ಕಾರಕ್ಕೆ ಒಂದು ವರದಿಯನ್ನು ಒಪ್ಪಿಸಿದ್ದಾರೆ. ಅವರು ಹೇಳಿದ್ದೇ ವೇದವಾಕ್ಯ. ಶಿಕಾರಿಪುರದ ತಾಲ್ಲೂಕ್ ಮಲೆನಾಡಿನಲ್ಲಿದ್ದರೂ ಅದನ್ನು ಮೈದಾನ ಎಂದು ನಿಗದಿಮಾಡಿದ್ದಾರೆ, ಅದನ್ನು ಬಯಲು ಸೀಮೆ ಎಂದು ಮಾಡಿದ್ದಾರೆ. ಅದರ ಬಗ್ಗೆ ನಾನೀಗ ಆಕ್ಷೇಪಣೆ ಮಾಡುವುದಕ್ಕೆ ಅವಕಾಶವಿಲ್ಲ. ಹೀಗೇ ಅವರು ಕೊಟ್ಟ್ರರಕ್ಕ ಕೆಲವು ರಿಪೋರ್ಟುಗಳನ್ನು ನಾನು ವಿಮರ್ಶಾತ್ಮಕ ದೃಷ್ಟಿಯಿಂದ ನೋಡಿದ್ದೇನೆ. ಹಾಗೆ ನೋಡಿದ್ದರಲ್ಲಿ ನನಗೆ ಕಂಡುಬಂದ ಅಂಶಗಳೇನೆಂದರೆ—ಇಲ್ಲಿ ಎಷ್ಟು ಕಬ್ಬಿಣದ ನೇಗಿಲುಗಳು ಇವೆ, ಮರದ ನೇಗಿಲುಗಳು ಎಷ್ಟು ಇವೆ, ನೊಗ, ಭೂಮಿಯನ್ನು ರೆವರ್ ಮಾಡತಕ್ಕ ಮಿಷಿನ್‌ಗಳು, ಮಮಟಿ, ಕೊಡಲಿ, ಗುದ್ದಲಿ ಇತ್ಯಾದಿಗಳೆಲ್ಲಾ ಎಷ್ಟೆಷ್ಟಿವೆ ಎಂಬ ಲೆಕ್ಕವನ್ನು ಅದರಲ್ಲಿ ಅವರು ಬರೆಸಿರುತ್ತಾರೆ. ಆದರೆ ಅವರು ಹಾಗೆ ಅದರಲ್ಲಿ ಬರೆಸಿರತಕ್ಕ ಸಾಮಗ್ರಿಗಳು ಇರುತ್ತವೆಯೋ ಇಲ್ಲವೋ ಅದು ಬೇರೆ ವಿಷಯ. ಅಂತೂ ಸರಿಯೋ ತಪ್ಪೋ ಒಂದು ರೀತಿಯಲ್ಲ ಅಂಕಿ ಅಂಶಗಳನ್ನು ಇಡತಕ್ಕದು ಅಗತ್ಯ ಎಂಬುದನ್ನು ನಾನು ಒಪ್ಪುತ್ತೇನೆ. ಸರ್ಕಾರದವರು ಹಿಂದಿನಿಂದಲೂ ಏನು ಒಂದು ನೀತಿಯನ್ನು ಅನುಸರಿಕೊಂಡು ಬರುತ್ತಿದ್ದಾರೋ ಅದನ್ನು ಅನುಸರಿಸಿಕೊಂಡು ಹೋಗುತ್ತಿರುವುದಾಗಿ ಶ್ರೀ ಪುಟ್ಟಸ್ವಾಮಿಯವರು ಹೇಳಿದ್ದಾರೆ. ನಾವು ಕೇಳಿದಂತೆಲ್ಲಾ ಅವರು ಪದೇ ಪದೇ ರಾಜೀನಾಮೆ ಕೊಡುವುದು ಸಭೆಗೆ ಘನತೆ ಗೌರವಗಳನ್ನು ತರುವುದಿಲ್ಲ ಎಂದು ಹೇಳಿದರು. ಅದರೆ ಶ್ರೀ ಪುಟ್ಟಸ್ವಾಮಿಯವರು ಇಲ್ಲಿ ಹೇಳಿರತಕ್ಕ 8—9 ಲಕ್ಷ ರೂಪಾಯಿಗಳು ಖರ್ಚು ಏನಿದೆ ಅದನ್ನು ನಾನ್ ರೆಕರಿಂಗ್ ಖರ್ಚು ಎಂದು ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ 174 ತಾಲ್ಲೂಕುಗಳಿವೆ. ಈ ಎಲ್ಲಾ ತಾಲ್ಲೂಕುಗಳಲ್ಲೂ ಅವರು ಈ ಕೆಲಸವನ್ನು ಕೇವಲ ಒಂದು ವರ್ಷದೊಳಗಾಗಿ ಮುಗಿಸುವುದ ಕ್ಯಾಗುತ್ತದೆಯೇ ! ಹೀಗೆ ಅವರು ಹೇಳಿದರೆ ನಾವು ಅದನ್ನು ಹಸೀ ಸುಳ್ಳು ಎಂದು ಕರೆಯುತ್ತೇವೆ. ಈ ತಿದ್ದುಪಡಿಯನ್ನು ರಾಜಸ್ವ ಮಂತ್ರಿಗಳು ಏಕೆ ತಂದಿದ್ದಾರೆ ಎಂಬುದನ್ನು ಬಹಳ ಜಾಣ್ಮೆಯಿಂದ ಹೇಳಿಕೊಂಡಿದ್ದಾರೆ. ಈ ಭೂಕಂದಾಯದಿಂದ ಬರತಕ್ಕ ಹಣದಲ್ಲಿ ನೂರಕ್ಕೆ ನೂರರಷ್ಟು ಹಣವನ್ನು ಗ್ರಾಮಪಂಚಾಯತಿಗಳಿಗೂ ತಾಲ್ಲೂಕ್ ಅಭಿವೃದ್ಧಿಮಂಡಲಗಳಿಗೂ ಕೊಡುತ್ತೇವೆ ; ಹಾಗೆ ನಾವು ಇದನ್ನು ನಮ್ಮ ಮನಸ್ಸಿನಲ್ಲಿ ಇಟ್ಟುಕೊಂಡಿದ್ದೇವೆ. ಈ ಹಣದಲ್ಲಿ ಸ್ಥಳೀಯ ಸಂಸ್ಥೆಯ ನೌಕರರ ಸಂಬಳಸಾರಿಗೆ ಕೊಡಬೇಕಾಗುತ್ತದೆ. ಹಾಗಿರುವಾಗ ಶ್ರೀಮಾನ್ ಗೋಪಾಲಗೌಡರು ರೈತರಿಗೆ ನೀವು ಕಂದಾಯ ಕೊಡಬೇಡಿ ಎಂದು ಹೇಳಿದರೆ ಸರ್ಕಾರದವರು ಈ ಗ್ರಾಮಪಂಚಾಯತಿ ಮತ್ತು ತಾಲ್ಲೂಕ್ ಬೋರ್ಡುಗಳ ನೌಕರರಿಗೆ ಸಂಬಳ ಎಲ್ಲಿಂದ ತಂದುಕೊಡಬೇಕು ? ಅವರು ಕಂದಾಯ

(ಶ್ರೀ ಎಸ್. ಗೋಪಾಲಗೌಡ)

ವನ್ನು ಇಂಥ ಸಂದರ್ಭದಲ್ಲಿ ಕೊಡಬೇಡಿ ಎಂದು ಹೇಳುವುದು ಯಾವ ನ್ಯಾಯ ? ಇದೇ ವಿಚಾರದಲ್ಲಿ ನನಗೆ ಒಬ್ಬ ಮಹನೀಯರು ಒಂದು ಪತ್ರವನ್ನು ಬರೆದಿದ್ದಾರೆ, ಸಾರಾಂಶ ಹೀಗಿದೆ :—

"In the event of the abolition of land revenue by the Government, which seriously affects the financial position of the Taluk Development Boards, it is necessary that the grants due to the Taluk Boards are regularly paid. This you are aware of and I do not want to explain it further."

ಅದಕ್ಕೆ ಹೆಲ್ತ್ ಸೆಸ್ ಅಂತ ಜನತೆಯ ಹತ್ತಿರ ಆಕಾರ ಮಾಡಿಕೊಂಡು ಅದನ್ನು ತಾಲ್ಲೂಕ್ ಡೆವಲಪ್‌ಮೆಂಟ್ ಬೋರ್ಡುಗಳಿಗೆ ಕೊಡುತ್ತಿದ್ದೇವೆ ಎಂದು ಹೇಳಿರುವುದಕ್ಕೂ ಇಲ್ಲಿ ಸಾಕ್ಷ್ಯ ಇದೆ.

"The Taluk Board has not been paid by the Government since 1960 ?" Is this true ?

"Although it is obligatory under the Act to pay this due to Taluk Boards, for reasons unknown, this has not been paid, though the Minister concerned promised. (Sd.) A. S. Guruswamy, B. Sc., M. A., B. L., etc."

ಹೀಗೆ ಈ ಕಂದಾಯದಿಂದ ಬರತಕ್ಕ ಹಣವನ್ನೆಲ್ಲಾ ತಾಲ್ಲೂಕ್ ಬೋರ್ಡುಗಳಿಗೇ ಕೊಡುತ್ತೇವೆಂದು ಏನೂ ತಿಳಿಯದ ಆ ಹಳ್ಳಿಯ ಜನರಿಗೆ, ಮುಗ್ಧ ಜನರಿಗೆ, ಈ ಸರ್ಕಾರದಲ್ಲಿ ಹಣವನ್ನು ಹೇಗೆ ಯಾವ ಯಾವ ಬಾಬಿಗೆ ಎಷ್ಟೆಷ್ಟು ಹಣ ಖರ್ಚಾಗುತ್ತಿದೆ ಎಂಬುದನ್ನು ಅರ್ಥಮಾಡಿಕೊಳ್ಳದ ಆ ಜನರಿಗೆ ಸರ್ಕಾರದವರು ಮುಂಕುಬೂಬಿಯನ್ನು ಊದಿ ಈ ಸಭೆಯಲ್ಲಿ ವಿರೋಧಪಕ್ಷದವರು ತಾಲ್ಲೂಕ್ ಬೋರ್ಡುಗಳಲ್ಲಿ ಮತ್ತು ಗ್ರಾಮಪಂಚಾಯಿತಿಗಳಲ್ಲಿ ಕೆಲಸಮಾಡತಕ್ಕ ನೌಕರರ ಹೊಟ್ಟೆಯ ಮೇಲೆ ಹೊಡೆಯುವುದಕ್ಕೆ ರೈತರಿಗೆ ಭೂಕಂದಾಯ ಕೊಡಬೇಡಿ ಎಂದು ಅದನ್ನು ವಿರೋಧಿಸುತ್ತಿದ್ದಾರೆ ಎಂದು ಏನು ಸರ್ಕಾರದವರು ರಾಜ್ಯದಲ್ಲಿ ಅಲ್ಲಲ್ಲೇ ಈ ಸುದ್ದಿಯನ್ನು ಹರಡಿದ್ದಾರೆ ಅದು ಸತ್ಯಕ್ಕೆ ಬಹಳ ದೂರವಾದ್ದು ಎಂದು ನಾನು ಒತ್ತಿಹೇಳುತ್ತಿದ್ದೇನೆ. ಈ ವರ್ಷದ ಸರ್ಕಾರದ ಬೊಕ್ಕಸಕ್ಕೆ ಜನರು 190 ಕೋಟಿಯನ್ನೋ ಏನೋ ಕೊಡುತ್ತಿದ್ದಾರೆ. ಅದರಲ್ಲಿ ಮುನಿಸಿಪಾಲಟಿಗಳಿಗೆಷ್ಟು ಕೊಡುತ್ತೀರಿ, ವಿದ್ಯಾ ಇರಾಖೆಗೆಷ್ಟು ಕೊಡುತ್ತೀರಿ ಆಯಾಗ್ರಾಮಗಳಲ್ಲಿ ಹೆಂಡವನ್ನು ಮಾರಾಟ ಮಾಡಿದ್ದರಲ್ಲಿ ಬರತಕ್ಕ ಹಣದಲ್ಲಿ ಆ ಗ್ರಾಮಕ್ಕೆ ಎಷ್ಟು ಕೊಡುತ್ತೀರಿ, ಅದರಿಂದ 13 ಕೋಟಿಯೋ ಏನೋ ಬರುತ್ತಿದೆ. ಹಾಗೆ ಆ ಮಾರಾಟ ತೆರಿಗೆಯಿಂದ ಯಾವ ಯಾವ ಗ್ರಾಮದಿಂದ ಎಷ್ಟೆಷ್ಟು ಹಣ ಬರುತ್ತಿದೆ ಅದರಲ್ಲಿ ಎಷ್ಟನ್ನು ಕೊಡುತ್ತಿದ್ದಾರೆ ಅದನ್ನು ತಿಳಿಸಲಿ. ಇನ್ನು ಇವರು ಪಂಚಾಯ್ತಿ ಎಲೆಕ್ಷನ್ ಮಾಡುವುದಕ್ಕೆ ಎಷ್ಟು ಕಾಲ ತೆಗೆದುಕೊಂಡರು, ತಾಲ್ಲೂಕ್ ಬೋರ್ಡುಗಳ ರಚನೆಯಲ್ಲಿ ಏನು ಮಾಡಿದ್ದಾರೆ ಇದೆಲ್ಲಾ ಬಹಳ ದೊಡ್ಡ ಕಥೆ; ಏಕೆಂದರೆ, ನೀವು ವಾದ ಮಾಡುತ್ತೀರಿ. ಕಂದಾಯವನ್ನು ಕೊಡಬೇಡಿ, ಕಡಿಮೆಮಾಡಿ 1964ನೇ ಇಸವಿಯಲ್ಲಿ ಇದ್ದಂತೆ ಕಂದಾಯ ವಸೂಲುಮಾಡಿ ಎಂದು ಹೇಳಿದರೆ ನಮ್ಮ ಕಮಿಟ್‌ಮೆಂಟ್ ಜಾಸ್ತಿಯಾಗಿದೆ, ತಾಲ್ಲೂಕು ಬೋರ್ಡುಗಳಿಗೆ ಮತ್ತು ಪಂಚಾಯಿತಿಗಳಿಗೆ ಕೊಡ ಬೇಕೆಂದು ಹೇಳುತ್ತೀರಿ. ಬಹಳ ಕಮಿಟ್‌ಮೆಂಟ್ಸ್ ಇರುವುದರಿಂದ ಹೊಸ ಕಂದಾಯ ದರದಲ್ಲಿ 8—9—13 ಕೋಟಿ ರೂಪಾಯಿಗಳಷ್ಟು ಹಣ ವಸೂಲಿ ಮಾಡಿಕೊಂಡು ನಾವು ಸರ್ಕಾರ ನಡೆಸಬೇಕಾಗುತ್ತದೆಂದು ಉತ್ತರದಲ್ಲಿ ಹೇಳುತ್ತೀರಿ. ಆದರೆ ಅದು ಸಮಂಜಸವಾದ ಉತ್ತರವಾಗುವುದಿಲ್ಲ. ಗ್ರಾಮಪಂಚಾಯಿತಿ, ತಾಲ್ಲೂಕ್ ಬೋರ್ಡ್ ಹಾಗೂ ಭೂಕಂದಾಯ ಆಕ್ಟ್‌ಗೆ ತಿದ್ದುಪಡಿ ತಂದಿಲ್ಲ.

ಇನ್ನು ಅಂಕಿ ಅಂಶಗಳನ್ನು ಹೇಳುತ್ತೇನೆ. 20 ವರ್ಷಗಳ ಹಿಂದೆ ಇದರ ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ. ಅದು ಈ ರೀತಿ ಇದೆ:

"The original land revenue assessment in the year 1964–65 was Rs. 4 with cess of Rs. 1.20. A total of Rs. 2·50 per acre was fixed for both wet lands under the channel and above the channel and water rate of Rs. 3 with cess of 90 paise to the

lands under channel making a total of Rs. 9.10 was fixed in the year 1964-65. During 1965-66, water rate for lands under channel was raised to Rs. 16 as against Rs. 3 in the previous year. In addition, maintenance charges of Rs. 2 per acre was fixed for all wet lands both under the channel and above the channel making a total from all these of Rs. 29.28 per acre as against Rs. 9.10 in the previous year. During 1966-67, along with this cess of Rs. 29.28 fixed in the previous year, surcharges of Rs. 7.33 and maintenance charges of Rs. 4 per acre making a total of Rs. 38.61 per acre was fixed as against 29.28 of the previous year."

ಇನ್ನೂ ಬಹಳವಿದೆ. ಇದನ್ನು ತಾವು ಓದಬೇಕು. ಇದಕ್ಕೆ ಕಾಂಗ್ರೆಸ್ ನದಸ್ಯರು ರುಜುಮಾಡಿದ್ದಾರೆ. ಅದನ್ನು ನಭೆಯ ಮುಂದೆ ಇಡುತ್ತೇನೆ. ನಾವೇನೋ ನಂಜನಗೂಡು ಡಿವಿಜನ್ನಿನಲ್ಲಿ ಡ್ರೈಲ್ಯಾಂಡಿಗೆ ಬಹಳ ಕಡಿಮೆಮಾಡಿದ್ದೇವೆಂದು ಮಾನ್ಯ ನಚಿವರು ಒತ್ತಿ ತಿಳಿಸಿದ್ದಾರೆ. ಕೆಲವು ಕಡೆಗಳಲ್ಲಿ 16 ಲಕ್ಷದಿಂದ 14 ಲಕ್ಷವಾಗಿದೆ ಮತ್ತೆ ಕೆಲವು ಕಡೆಗಳಲ್ಲಿ 16 ಲಕ್ಷದಿಂದ 18 ಲಕ್ಷಕ್ಕೆ ಹೋಗಿದೆ. ಹುಣಸೂರಿಗೆ ಸ್ವಲ್ಪ ಕಡಿಮೆಯಾಗಿರಬಹುದು, ಇದರ ಹಿಂದೆ ಅನೇಕ ಕೈವಾಡಗಳನ್ನು ನರ್ಕಾರದವರು ಮಾಡಿದ್ದಾರೆ. ಇದರಲ್ಲಿ ಕಂದಾಯದ ಒಂದೇ ಪ್ರಶ್ನೆಯಾಗಿದ್ದರೆ ಬಹುಶಃ ನೀವು ಹೇಳಿದಷ್ಟು ಕಂದಾಯಿಕೊಟ್ಟು ಬಿಡುತ್ತಿದ್ದರು. 1964ನೇ ಇಸವಿಯ ಹಿಂದಿನ 2ರಷ್ಟು ಕಂದಾಯ ಕೊಡಲು ಸಿದ್ಧರಿದ್ದೇವೆಂದು ಕೆಲವು ಕಡೆ ಒಪ್ಪಿದ್ದಾರೆಂದು ನಾನು ಕೇಳಿದೆ. ಆದರೆ ಇದರ ಜೊತೆಗೆ ಇನ್ನೇನೋ ರೈತರ್‌ಗಳನ್ನು ಹಾಕುತ್ತಿದ್ದಾರೆ. ಇದು ಬರೀ ಕಂದಾಯದ ಪ್ರಶ್ನೆ ಆಗಿದ್ದರೆ, ಕಂದಾಯದ ಖಾತೆ ಪಟ್ಟಿಯಲ್ಲಿ 10 ಕೊಡುವವರು 20 ಕೊಡಬೇಕೆಂದು ಅಷ್ಟೇ ಇದ್ದಿದ್ದರೆ ಈ ತೊಂದರೆಯೇ ಬರುತ್ತಿರಲಿಲ್ಲ. ಇವತ್ತು ಖುಷ್ಕಿ ಕಂದಾಯ ಹಾಕಿ ಅದರಮೇಲೆ ಮನಸ್ಸಿಗೆ ಬಂದಷ್ಟು ನೀರಿನ ತೆರಿಗೆ ಹಾಕಿದ್ದಾರೆ.

"Work means an irrigation or drainage work, whether completed or not."

ಇದನ್ನು ಪುಟಪ್ರಭಾದವರು, ಮಲಪ್ರಭಾದವರು ಹಾರಂಗಿ, ಕಂಬದಕಡದವರು ಚೆನ್ನಾಗಿ ಗಮನಿಸಬೇಕು. ಎಷ್ಟು ಚೆನ್ನಾಗಿದೆ ಈ ಕಾನೂನು; ವರ್ಕ್ ಅಂದರೆ ಕನ್ನಡದಲ್ಲಿ ಕೆಲಸವೆಂದರ್ಥ. ಎದ್ದು ನಿಂತು ನಡೆಯುವುದಕ್ಕಾಗದೆ ಇರುವವ ಮೊಣಕಾಲೂರಿ ತೆವಳಿಕೊಂಡು ಹೋಗುತ್ತಾನಂಬ ಹಾಗೆ ಆಯಿತು. ಇದರ ಮೇಲೆ ನಾನು ವಿಶೇಷವಾಗಿ ಕಮೆಂಟ್ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಇವತ್ತು ನರ್ಕಾರ ರೈತರಲ್ಲಿ ಉಳಿದಿರತಕ್ಕ ಚರ್ಮವನ್ನು ಸುಲಿಯುವುದಕ್ಕೆ ಚಾಕು ತೆಗೆದುಕೊಂಡು ಹೋಗಿದ್ದಾರೆ. ಈ ತಿದ್ದುಪಡಿ ಮಾಡಿದಮೇಲೆ ಇವರು ಕುತ್ತಿಗೆಯನ್ನು ಕೊಯ್ಯುವುದಿಲ್ಲ ಎಂದು ನನ್ನ ಶಂಕೆ. ಆದ್ದರಿಂದ ನಾನು ಮಾನ್ಯ ವಿರೋಧಪಕ್ಷದ ಮಾನ್ಯ ನದಸ್ಯರನ್ನು ಕೇಳಿಕೊಂಡೆ, ನಾನು ಈ ವಿಷಯದಲ್ಲಿ ಮಾತನಾಡಬೇಕಾಗುತ್ತದೆಂದು. ಅದಕ್ಕೆ ಅವರು ನಮ್ಮತಿ ಕೊಟ್ಟಿದ್ದಾರೆ. ತಮಗೆ ಅವಸರ ಇದ್ದರೆ, ಈ ನಭೆಯನ್ನು ಮುಂದೆಹಾಕಿ. ಮುಂದೆ ಮತ್ತೊಂದುಸಾರಿ ವಿೂಟಿಂಗ್ ಕರೆಯಿರಿ. ಆಗ ಕೂಲಂಕಷವಾಗಿ ಇದನ್ನು ವಿಚಾರಮಾಡೋಣ. ನಾನೂ ಸಹ ತಿದ್ದುಪಡಿ ತರುತ್ತೇನೆ. ಈ ಮನೂದೆ ಹೇಗಿರಬೇಕು ಎಂದು ಆಗ ಚರ್ಚೆಮಾಡೋಣ.

4.00 P.M.

ಸ್ವಾಮಿ, ಕಂದಾಯದ ಹೊರೆ ಏನಿದೆ ಇದು ಪ್ರತ್ಯೇಕ ಹೊರೆಯಲ್ಲ. ನರ್ಕಾರದವರು ಪೋಲೀಸಿನವರನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ ಹಗಲು ಧಕಾಯಿತಿ ದರೋಡೆ ಮಾಡಿದ್ದಾರೆ, ರೈತರನ್ನು ಲೂಟಿ ಮಾಡಿದ್ದಾರೆ. ಈ ರೀತಿಯಾಗಿ ನಡೆಯುತ್ತಿದೆ ಎಂದು ಕೆಲವರು ನನಗೆ ಪತ್ರವನ್ನು ಕೂಡ ಬರೆದಿದ್ದಾರೆ. ನಾಗರದಲ್ಲಿ ರೆವಿನ್ಯೂ ಅಧಿಕಾರಿಗಳು ಮತ್ತು ಮಿರ್ ಮಾಲೀಕರು ಸೇರಿಕೊಂಡು ರೈತರ ಮನೆಗೆ ನುಗ್ಗಿ ರೆವಿಯನ್ನು ಬಲಾತ್ಕಾರವಾಗಿ ವಸೂಲು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂದು ನನಗೆ ತಿಳಿದುಬಂದಿದೆ. ಇದು ಕೊನೆಗೆ ಏನಾಗುತ್ತದೆ ಎಂದರೆ ರೈತರು ಏನಾದರೂ ತಿರುಗಿ ಬಿದ್ದರೆ, ಒಲೆ ಹೊತ್ತಿ ಉರಿದೊಡೆ ನಲಬಹುದು, ನಹಿಸಿಕೊಳ್ಳಬಹುದು; ನಲಹೊತ್ತಿ ಉರಿದೊಡೆ ನಲಬಹುದೇ, ಅದನ್ನು ನಹಿಸಿಕೊಳ್ಳುವುದಕ್ಕಾಗು

(ಶ್ರೀ ಎಸ್. ಗೋಪಾಲಗೌಡ)

ವುದಿಲ್ಲ. ಇನ್ನೊಂದು ವಿಷಯ ಏನೆಂದರೆ ಸಾಗರದಿಂದ ಶ್ರೀಮಾನ್ ಸತ್ಯ ಎನ್ನುವವರು ನನಗೆ ಒಂದು ಕಾಗದವನ್ನು ಬರೆದಿದ್ದಾರೆ. ಅವರು ಬರೆದಿರುವುದು ಸತ್ಯ ಎಂದು ನಾನು ತಿಳಿದುಕೊಂಡಿದ್ದೇನೆ, ಅಲ್ಲಿ ರೈತರಿಗೆ ಲೆವಿ ನೋಟೀಸ್ ಜಾರಿಯಾಗಿಲ್ಲ. ಆವರೂ ಸಹ ಅಲ್ಲಿ ಬಲಾತ್ಕಾರವಾಗಿ ಲೆವಿಯನ್ನು ವಸೂಲು ಮಾಡಿದ್ದಾರೆ. ಮತ್ತು ಒಬ್ಬರಿಗೆ ಲೆವಿ ನೋಟೀಸ್ ಕೊಡದೆ ಅವರ ಕಣಜದ ಮೇಲೆ ಧಾಳಿ ಮಾಡಿದ್ದಾರೆ. ಅಲ್ಲಿ ರೈತರು ಪಣತ ಕೊಟ್ಟಿರುವುದಕ್ಕೆ ಎಂದರೆ ಲೆವಿ ಕೊಟ್ಟಿರುವುದಕ್ಕೆ ಅಲ್ಲಿನ ಮಿಲ್ ಮಾಲೀಕರು ಪಾವತಿ ಕೊಟ್ಟಿಲ್ಲ. ಈ ಸಂದರ್ಭದಲ್ಲಿ ಶ್ರೀಮಾನ್ ವಿಠಲ್‌ದಾಸ್ ಶೆಟ್ಟರನ್ನು ಕರೆಸಿದ್ದರೆ ಅವರಿಗೆ ಸ್ವಲ್ಪ ಹೇಳಬಹುದಾಗಿತ್ತು. ಶ್ರೀಮಾನ್ ಸತ್ಯ ಎನ್ನುವವರು ನನಗೆ ಏನು ಪತ್ರವನ್ನು ಬರೆದಿದ್ದಾರೆ ಅದನ್ನು ನಾನು ಅಧ್ಯಕ್ಷರ ಕಡೆಗೆ ಕಳುಹಿಸಿ ಕೊಡುತ್ತೇನೆ. ಇದರ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಸತ್ಯಾಂಶವನ್ನು ಪರಿಶೀಲನೆ ಮಾಡಬೇಕು ಎಂದು ನಾನು ಹೇಳುತ್ತೇನೆ.

ಇನ್ನೊಂದು ವಿಷಯ. ಪಾಣೆ ಮಂಗಳೂರಿನಿಂದ ನನ್ನ ಸ್ನೇಹಿತರು ಒಬ್ಬರು ನನಗೆ ಒಂದು ಪತ್ರವನ್ನು ಬರೆದಿದ್ದಾರೆ. ಅದರಲ್ಲಿ ಮಾನ್ಯ ಆಹಾರ ಶಾಖೆಯ ಮಂತ್ರಿಗಳಾದ ಶ್ರೀ ವಿಠಲದಾಸ್ ಶೆಟ್ಟರು ತುಂಬಾ ನೀಚ ಕೃತ್ಯದಲ್ಲಿ ತೊಡಗಿದ್ದಾರೆ ಎಂದು ಬರೆದಿದ್ದಾರೆ. ಅವರು ಮಂತ್ರಿಗಳಾಗಿ ಮಾಡಬಾರದ ಕೆಲಸದಲ್ಲಿ ತೊಡಗಿದ್ದಾರೆ ಎಂದು ಬರೆದಿದ್ದಾರೆ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಅವರು ಆಹಾರ ಖಾತೆಯನ್ನು ವಹಿಸಿಕೊಂಡಮೇಲೆ ಅವರು ಮಾಡಿದ ಭಾಷಣಗಳಿಗೂ, ನಮಗೆ ಕೊಟ್ಟ ಕೆಲವು ಭರವಸೆಗಳಿಗೂ, ಮತ್ತು ಈಗ ಅವರು ಎಲ್ಲಾ ತಹಶೀಲ್ದಾರರಿಗೂ ಲೆವಿ ವಸೂಲು ಮಾಡಲೇ ಬೇಕು, ಅದಷ್ಟು ಜಾಸ್ತಿ ಲೆವಿ ವಸೂಲು ಮಾಡಬೇಕು ಎಂದು ಹೇಳಿದ ಮಾತುಗಳನ್ನು ನೋಡಿದರೆ ಅವರು ಯಾವರೀತಿ ನಡೆದುಕೊಳ್ಳುತ್ತಿದ್ದಾರೆಂದು ಗೊತ್ತಾಗುತ್ತದೆ. ಕೇರಳದ ಗಡಿಯಲ್ಲಿ ಅಕ್ಕಿಯ ಕಳ್ಳಸಾಗಾಣಿಕೆ ಯಾವರೀತಿ ನಡೆಯುತ್ತಿದೆ ಎಂಬುದು ಶ್ರೀಮಾನ್ ಭಾಸ್ಕರ ಶೆಟ್ಟರಿಗೂ ಗೊತ್ತಿದೆ. ನಮ್ಮ ವೈಯಕ್ತಿವಾದ ಲೋಪದೋಷಗಳು ಏನೇ ಇದ್ದರೂಕೂಡ ಸರ್ಕಾರದ ಕೆಲಸ ದೇವರ ಕೆಲಸ ಎಂದು ತಿಳಿದುಕೊಂಡು ಸ್ವಲ್ಪ ಜವಾಬ್ದಾರಿಯಿಂದ ಕೆಲಸವನ್ನು ಮಾಡಬೇಕಾಗುತ್ತದೆ. ಈಗ ಸರ್ಕಾರದ ವಿಷಯದಲ್ಲಿ ಜನ ಏನು ಅನುಮಾನ ಪಟ್ಟಿದ್ದಾರೆ ಅದನ್ನು ಪರಿಹಾರ ಮಾಡಿಕೊಳ್ಳಬೇಕಾದ್ದು ಬಹಳ ಅಗತ್ಯ ಇದೆ.

ಕಂದಾಯದ ವಿಷಯದಲ್ಲಿ ಕಂದಾಯವನ್ನು ಕೊಡಬೇಕಾದರೆ ಗೇಣಿದಾರ ಬತ್ತವನು ಮಾರಾಟ ಮಾಡಿ ಕಂದಾಯವನ್ನು ಕೊಡಬೇಕು ಎಂದು ಮೊನ್ನೆ ಒಂದು ಆರ್ಡರನ್ನು ಕಳುಹಿಸಿದ್ದಾರೆ. ಇದರಿಂದ ಗೇಣಿದಾರರಿಗೆ ಏನೂ ತೊಂದರೆಇಲ್ಲ ಎಂದು ಹೇಳಿದ್ದಾರೆ. ಬತ್ತ ಬೆಳೆಯುವ ಭೂಮಿ ಚೆನ್ನಾಗಿದ್ದು, ಚೆನ್ನಾಗಿ ಬತ್ತವನ್ನು ಬೆಳೆದರೆ ಅದರಿಂದ ತೊಂದರೆಯಾಗುವುದಿಲ್ಲ. ಬತ್ತ ಬೆಳೆಯುವ ಭೂಮಿ ಚೆನ್ನಾಗಿಲ್ಲದೆ, ಬತ್ತವನ್ನು ಚೆನ್ನಾಗಿ ಬೆಳೆಯದೆ ಇದ್ದರೆ ಅವರಿಂದ ತೊಂದರೆಯಾಗುತ್ತದೆ. ಈಗ ಪುತ್ತೂರು ಪಾಣೆಮಂಗಳೂರು ಮತ್ತು ಬೆಳ್ತಂಗಡಿ ಈ ಪ್ರದೇಶದಲ್ಲಿ ಬತ್ತ ಅಷ್ಟು ಚೆನ್ನಾಗಿ ಬೆಳೆಯುವುದಿಲ್ಲ. ಅಲ್ಲಿ ಬತ್ತ ಬೆಳೆಯುವ ಕನಿಷ್ಟ ತರಗತಿಯ ಭೂಮಿಯಮೇಲೆ ಸ್ವಲ್ಪ ಹೆಚ್ಚಿಗೆ ತರಿಗೆಯನ್ನು ಹಾಕಿದರೆ ಅವರಿಗೆ ಬತ್ತ ಬೆಳೆಯುವುದಕ್ಕೆ ಮನಸ್ಸು ಬರುವುದಿಲ್ಲ. ಅವರು ಕಂದಾಯವನ್ನು ಕೊಡುವುದಕ್ಕೆ ಮೇಲೆ ಬೀಳುತ್ತಾರೆ. ರಾಜ್ಯಗಳ ಪುನರ್‌ವಿಂಗಡಣೆ ಆಗುವುದಕ್ಕೆ ಮುಂಚೆಯೇ ಬೊಂಬಾಯಿಪ್ರಾಂತದಲ್ಲಿ ಬಹಳ ಪ್ರಗತಿಪರವಾದ ಒಂದು ಭೂಸುಧಾರಣಾ ಕಾನೂನನ್ನು ಜಾರಿಗೆ ತಂದಿದ್ದರು.

ಭೂಸುಧಾರಣೆ ತಂದುದನ್ನು ಹಿಂದೆ ಹಾಕಿ ಇವತ್ತು ಇಡೀ ಮುಂಬಯಿ ಕರ್ಣಾಟಕದಲ್ಲಿ ನೀವು ಭೂಸುಧಾರಣಾ ಕಲಮುಗಳನ್ನು ಜಾರಿಗೆ ತರದೆ, ಇರಿಗೇಶನ್ ಸೆಸ್, ಬೆಟರ್‌ಮೆಂಟ್ ಲೆವಿ ಇತ್ಯಾದಿಗಳನ್ನು ಮನ್ನಾಮಾಡದೆ ಎಷ್ಟೋಲೈಜನ ಜಮೀನುದಾರರು ಉಪವಾನ ಬೀಳುವ ಸ್ಥಿತಿಗೆ ಬಂದಿದ್ದಾರೆಂದು ಹೇಳಿದರು. ಅದು ನಡೆಯುತ್ತದೆ. ನೀವು ಮಾಡುತ್ತಾ ಇರುವುದು ಹೇಗೆ ಇವೆಯೆಂದರೆ, ಹುಲ್ಲನಲ್ಲಿ ಹಲಸಿನಕಾಯಿಯನ್ನು ಕೊಯ್ದು ಹಾಗೆ ಇದೆ. ಹಲಸಿನ ಕಾಯಿಯನ್ನು ಹುಲ್ಲಿನಲ್ಲಿ ಕೊಯ್ದರೆ, ಹುಲ್ಲಿನಲ್ಲಿ ಮೇಣಹತ್ತಿಕೊಂಡು ತೊಳೆ ತೆಗೆಯುವುದಕ್ಕೆ ಕಷ್ಟವಾಗುತ್ತದೆ. ಅವೇ ರೀತಿ ರೈತನಲ್ಲಿ ಇದ್ದ ರಕ್ತವನ್ನು ನೀವು ಕೊಚ್ಚಿ ಕೊಚ್ಚಿ ತೊಳೆ ತೆಗೆವಹಾಗೆ ಆಗಿದೆ. ರೈತನು ಉದ್ಧಾರವಾಗಿರುವುದು ಹೇಗೆ? ನೀವು ಮಾಡಿರುವ ಭೂಸುಧಾರಣಾ ಭೂಕಂದಾಯ ತಿದ್ದುಪಡಿ ಮತ್ತು ಸರ್ವೆ ಸೆಟ್ಲ್‌ಮೆಂಟ್, ಹುಲ್ಲಿನಲ್ಲಿ ಹಲಸಿನಕಾಯಿಯನ್ನು ಕೊಯ್ದ ಹಾಗೆ ಆಗಿದೆ. ಆದ್ದರಿಂದ ನೀವು ನಿರೀಕ್ಷಿಸಿದ ತೊಳೆ ತೆಗೆದುಕೊಳ್ಳುವುದು ಬಹಳ ಕಷ್ಟವಾಗಿದೆ. ನಿಜವಾಗಿಯೂ ರೈತರು ಅಭಿವೃದ್ಧಿ ಹೊಂದಿದ್ದರೆ, ನಿಜಕ್ಕೂ ಬೆಳೆಗಾದರ ಸ್ಥಿತಿಯನ್ನು ನೀವು ಸುಧಾರಿಸಿದ್ದರೆ, ಈ ಪ್ರಶ್ನೆ

ಇವತ್ತಿನ ದಿವಸ ಬರುತ್ತಾ ಇರಲಿಲ್ಲ. ಡಾ. ನಾಗೆನ್‌ಗೌಡರು, ಕಾಂಗ್ರೆಸ್ ಪಕ್ಷದವರು, ರಸಾಯನಿಕ ಗೊಬ್ಬರದ ಮೇಲೆ ಹೆಚ್ಚು ತೆರಿಗೆ ಹೇರುವುದನ್ನು ವಿರೋಧಿಸುತ್ತಾ ಇರಲಿಲ್ಲ; ಮತ್ತು ಅನೇಕ ತಿದ್ದುಪಡಿಗಳನ್ನು ತಮ್ಮ ಭಾಷಣದಲ್ಲಿ ಸೂಚಿಸುತ್ತಾ ಇರಲಿಲ್ಲ. ಅವರು ಒಳ್ಳೆಯ ರೈತರು. ಬೇಕಾದಷ್ಟು ಡಿಗ್ರಿ ಪಡೆದಿದ್ದಾರೆ; ಮತ್ತು ಒಳ್ಳೆಯ ಅನುಭವೀ ನಡಸ್ಯರು. ಅವರ ಮಾತನ್ನು ಕೇಳೋಣ. ಅವರ ಭಾಷಣಕ್ಕೆ ಮಾನ್ಯತೆಯನ್ನು ಕೊಡೋಣ. ಅವರಿಗೆ ಎಷ್ಟು ಮಾನ್ಯತೆ ಕೊಟ್ಟಿದ್ದೀರಿ? ಅವರು ಹೇಳಿದ್ದನ್ನು ಕೇಳಿದ್ದೀರಾ? ಫರ್ಟಿಲೈಸರ್ಸ್ ರೇಟನ್ನು ಏರಿಸಬಾರದು ಎಂದು ಏನಾದರೂ ಕೇಂದ್ರಸರ್ಕಾರದವರಲ್ಲಿ ಮನವಿಯನ್ನು ಮಾಡಿಕೊಂಡಿದ್ದೀರಾ?

[MR. DEPUTY SPEAKER in the Chair]

ಮಾರಿ ಕಣಿವೆಯ ಕೆಳಗೆ ವಾಣೀವಿಲಾಸ ಸಾಗರದಲ್ಲಿ ನೀರು ಇದೆ. ಅಲ್ಲಿರತಕ್ಕ ಅಚ್ಚುಕಟ್ಟುದಾರರಿಗೆ ನೀರು ದೊರೆಯುತ್ತಾ ಇದೆಯೇ? ನೆಟ್ಟಿರತಕ್ಕ ಎಲ್ಲಾ ಕಬ್ಬು ಮತ್ತು ಭತ್ತ ಕೈಗೆ ಸಿಗುತ್ತದೆಯೇ? ಸಿಗದಿದ್ದರೆ ಈ ವರ್ಷದಲ್ಲಿ ಏನಾದರೂ ಪಾಫಿ ಅವರಿಗೆ ದೊರೆತಿದೆಯೋ ಈ ವಿಷಯವನ್ನು ತಾವು ಗಮನಿಸಬೇಕು. ಇದು ಕೇವಲ ಕಂದಾಯ ತಿದ್ದುಪಡಿ ಮಸೂದೆ. ಸಣ್ಣ ತಿದ್ದುಪಡಿ ಎಂದು ಭಾವಿಸಬಾರದು. ನಾನು ಹೇಳುವುದು, ಇದರಲ್ಲಿ ಲೆವಿ ಪ್ರಶ್ನೆ ಬರುತ್ತದೆ. ಸೆಸ್ ಪ್ರಶ್ನೆ, ವಾಟರ್ ರೇಟ್ ಪ್ರಶ್ನೆ, ಬೆಟರ್‌ಮೆಂಟ್ ಲೆವಿ ಪ್ರಶ್ನೆ ಬರುತ್ತದೆ. ಅದಕ್ಕೆ ನಾವು ಹೇಳಿರುವುದು, ಸಮಗ್ರವಾದ ಮಸೂದೆಯನ್ನು ತರಬೇಕಾಗುತ್ತದೆಂದು. ಮೊದಲು ನೀತಿಯನ್ನು ನಿರ್ಣಯ ಮಾಡಬೇಕಾಗುತ್ತದೆ. ನೀತಿಯಲ್ಲಿ ಒಂದು, ನೋಟಿಫಿಕೇಶನಲ್ಲಿ ಒಂದು ಮಾಡಿ, ಸಣ್ಣ ನೌಕರರ ಕೈಗೆ ಅಧಿಕಾರ ಕೊಟ್ಟು ನೂರಾರು ವರ್ಷದಿಂದ ಮಾನ ಮರ್ಯಾದೆಯಿಂದ ಕಷ್ಟ ಪಟ್ಟು ಜೀವನ ಮಾಡತಕ್ಕ ರೈತನ ಮನೆಯನ್ನು ನುಗ್ಗಿ ವಸೂಲಾತಿ ಮಾಡುವ ತುರ್ತು ಅಧಿಕಾರವನ್ನು ಕೊಡುವುದಕ್ಕೆ ನಮಗೆ ಯಾರು ಅಧಿಕಾರ ಕೊಟ್ಟರು? ತ್ರೂ ವಿಚ್ ಲೆಜಿಸ್ಲೇಶನ್ ಯು ಹ್ಯಾವ್ ಟೇಕನ್ ದಟ್ ಪವರ್? ಆ ಪ್ರಶ್ನೆಯನ್ನು ನಾನು ಮಾಡುತ್ತೇನೆ. ಯಾವ ಲೆಜಿಸ್ಲೇಶನ್ ಈ ಸಭೆ ಪಾಸ್ ಮಾಡಿದೆ? ಯಾವಾಗ ಬೇಕಾದರೂ ಜಿಲ್ಲಾಧಿಕಾರಿಗಳು, ರೈತನ ಮನೆಯನ್ನು ಲೆವಿ ವಸೂಲಾತಿಗೆ, ಕಂದಾಯ ವಸೂಲಾತಿಗೆ ನುಗ್ಗಬಹುದು, ಅವನ ಮನೆಯನ್ನು ಹರಾಜು ಮಾಡಬಹುದು, ಎಂದು ಈ ಅಧಿಕಾರವನ್ನು ಯಾವ ಕಾನೂನಿಂದ ತೆಗೆದುಕೊಂಡಿದ್ದೀರಿ? ಸ್ವಾತಂತ್ರ್ಯ ಬಂದ ನಂತರದ ಕಾನೂನೇ, ಅಥವಾ ಸ್ವಾತಂತ್ರ್ಯ ಪೂರ್ವದ ಕಾನೂನೇ? ಸ್ವಾತಂತ್ರ್ಯದ ನಂತರದ ಕಾನೂನಿನಂತೆ ನಡೆದುಕೊಂಡಿದ್ದೀರಾ? ಅಥವಾ ಪೂರ್ವದ ಕಾನೂನು ಪ್ರಕಾರ ನಡೆದುಕೊಂಡಿದ್ದೀರಾ? ಇದು ಮೂಲ ಪ್ರಶ್ನೆ. ನಮ್ಮ ರಾಜ್ಯದ ಒಟ್ಟು ಜನಸಂಖ್ಯೆ 235 ಲಕ್ಷ. ಈಗ ಹೆಚ್ಚಾಗಿರಬಹುದು. 235 ಲಕ್ಷದಲ್ಲಿ ಬೇಸಾಯಗಾರರ ಸಂಖ್ಯೆ ಎಷ್ಟು ಇದೆಯೆಂದರೆ, 58 ಲಕ್ಷ. ಬೇಸಾಯ ಕೂಲಿಗಾರರು ಎಷ್ಟು ಇದ್ದಾರೆ? 18 ಲಕ್ಷ ಇದ್ದಾರೆ. ಇನ್ನು ಕಲ್ಲು ಒಡೆಯುವವರು, ದನ ಕಾಯುವವರು, ಕಾಡು ಕುರುಬರು, ಜಮೀನು ಇಲ್ಲದೆ ಇರುವವರು, ಬಿಕ್ಕೆ ಬೇಡುವವರು, ನುಡುಗಾಡು ಸಿದ್ಧರು, ಬರುಡೆದಾಸರು, ಒಟ್ಟಿಗೆ 3 ಲಕ್ಷ 36 ಸಾವಿರ ಇದ್ದಾರೆ. ಇನ್ನು ಮನೆ ಕೆಲಸ ಮಾಡುವವರು, ಸೀರೆ ಒಗೆಯುವವರು ಏಳು ಲಕ್ಷ ಜನರಿದ್ದಾರೆ. ಈ ಮನೆ ಕೆಲಸ ಮಾಡುವವರಿಗೆ ಯಾವ ಯೂನಿಯನ್ನೂ ಇಲ್ಲ, ಯಾವ ಮಿನಿಮಮ್ ವೇಜಸ್ ಇಲ್ಲ, ಯಾವ ಅಸ್ಪತ್ರೆಯೂ ಇಲ್ಲ. ಸುಖ ದುಃಖ ಕೇಳುವವರೂ ಇಲ್ಲ; ಮುಸ್ಸಿನ ಮಿತಿಯೂ ಇಲ್ಲ. ತಾವು ಕೊಟ್ಟಿರುವ ಸಂಖ್ಯೆಯನ್ನೇ ನಾನು ಈ ಸಭೆಯ ಮುಂದಿಡುತ್ತಿದ್ದೇನೆ. ಇನ್ನು ಕಸ ಹೊಡೆಯುವವರು ನಾಲ್ಕು ಲಕ್ಷ ಚಿಲ್ಲರೆ ಇದ್ದಾರೆ. ಸಣ್ಣ ಪುಟ್ಟಕಿಕನಬು ಮಾಡುವವರು ಎರಡು ಲಕ್ಷ. ವ್ಯಾಪಾರ ವಾಣಿಜ್ಯ ಅಂಗಡಿ ಮುಂಗಟ್ಟು ಇಟ್ಟುಕೊಂಡಿರುವವರು ನಾಲ್ಕು ಲಕ್ಷ ಇದ್ದಾರೆ. ಇನ್ನೊಂದು ಲಕ್ಷ ಜನರು ಸಾರಿಗೆ ಸಂಪರ್ಕದಲ್ಲಿರುವವರು, ಅಂದರೆ, ಲಾರಿ ಓಡಿಸುವುದು, ಕಾರುಗಳನ್ನು ಓಡಿಸುವುದು ಜಟಕಾ ಓಡಿಸುವುದು. ಇತರೇ ಸೇವೆ ಮಾಡುವವರು 10 ಲಕ್ಷ ಜನರು ಇದ್ದಾರೆ. ನಾವು ಬಹುಶಃ ಇತರೇ ಸೇವೆಯಲ್ಲಿ ಸೇರುತ್ತೇವೋ ಏನೋ ಗೊತ್ತಿಲ್ಲ. ಮೈಸೂರು ಹೌಸಿನಲ್ಲಿ ಹೋದಾಗ ಇತರೇ ಸೇವೆಯಲ್ಲಿ ನೀವು ಬರುತ್ತೀರಿ. ಅಧಿಕಾರಿಗಳ ಸೇವೆಯಲ್ಲಿ ನೀವು ಬರುವುದಿಲ್ಲ. ನೀವು ಎಂ. ಪಿ. ದರ್ಜೆಯಲ್ಲಿ ಬರುವುದಿಲ್ಲ, ಎಂ. ಎಲ್. ಎ. ದರ್ಜೆಯಲ್ಲಿ ಬರುವುದಿಲ್ಲ, ಇತರೇ ದರ್ಜೆಯಲ್ಲಿ ಬರುತ್ತೀರಿ. ಇತರ ಸೇವೆಯಲ್ಲಿ ಇರುವ 10 ಲಕ್ಷ ಜನರ ಫೈಕೆ ಬಹುಶಃ ಎಂ.ಎಲ್.ಎ. ಗಳು ಸೇರಿರಬಹುದು. ಒಟ್ಟು ಜನಸಂಖ್ಯೆಯಲ್ಲಿ ಅಂದರೆ 2 ಕೋಟಿ 30 ಲಕ್ಷ ಜನರಲ್ಲಿ ಕೆಲಸ ಇಲ್ಲದವರು 1 ಕೋಟಿ 28 ಲಕ್ಷದ 60 ಸಾವಿರ ಇದ್ದಾರೆ. ಅಂದರೆ ಈ ಅಂಕಿಗಳಲ್ಲಿ ಮಕ್ಕಳು, ವಯಸ್ಸಾದ ಮಕ್ಕಳು, ಕೈಕಾಲು ಇಲ್ಲದವರು ಸೇರುತ್ತಾರೆ. ಈ ಸ್ಥಿತಿಯಲ್ಲಿ ನಾವು ಇದ್ದೇವೆ. ಒಂದು ವಿಷಯವನ್ನು ತಾವು ಸಮಾಧಾನದಿಂದ ಕೇಳಬೇಕು, ಏನೆಂದರೆ ಸರ್. ಎಂ. ವಿಶ್ವೇಶ್ವರಯ್ಯ

(ಶ್ರೀ ಎಸ್. ಗೋಪಾಲಗೌಡ)

ನವರು ಕೃಷ್ಣರಾಜ ಸಾಗರದ ಅಣ್ಣೆಕಟ್ಟನ್ನು ಕಟ್ಟಿದ ಮೇಲೆ ನಮ್ಮ ರಾಜ್ಯದಲ್ಲಿ 100 ಎಕರೆಗೆ 5 ಎಕರೆಯಲ್ಲಿ ನೀರಾವರಿಯಾಗುತ್ತಿತ್ತು. 1947-48ರಲ್ಲಿ ಕಾಂಗ್ರೆಸ್‌ನವರು ಆಡಳಿತ ವಹಿಸಿಕೊಂಡಮೇಲೆ ಎರ್ಲಾ ಕೆರೆಕಟ್ಟೆಗಳನ್ನು ಸೇರಿಸಿಕೊಂಡು, ವಾಣಿವಿಲಾಸದ ಯೋಜನೆಯನ್ನು ಸೇರಿಸಿಕೊಂಡು ಶೇಕಡ 5ರಷ್ಟು ಭೂಮಿಗೆ ನೀರಾವರಿಯಾಗುತ್ತಿತ್ತು. ಕಾಂಗ್ರೆಸ್‌ನವರು ಆಡಳಿತ ವಹಿಸಿಕೊಂಡ ಮೇಲೆ ಎಂದು ಹೇಳಿದರೆ ಕೆಲವರಿಗೆ ಬೇಜಾರಾಗಬಹುದು, ಆದ್ದರಿಂದ ಕಾಂಗ್ರೆಸ್ ನವರು ಎಂಬ ಪದವನ್ನು ಇನ್ನು ಮೇಲೆ ಉಪಯೋಗಿಸುವುದಿಲ್ಲ. ಭದ್ರಾ, ತುಂಗಭದ್ರಾ, ನುಗು, ಮಲಪ್ರಭಾ, ಘಟಪ್ರಭಾ, ಯೋಜನೆಗಳನ್ನು ಕೈಗೊಂಡಮೇಲೆ, ಭೂಮಿಯಿಂದ ನೀರನ್ನು ಎತ್ತುವ ಪಂಪ್‌ಸೆಟ್ಟುಗಳನ್ನು ಉಪಯೋಗಿಸಿದ ಮೇಲೆ ನೀರಾವರಿಯಾಗುವ ಪ್ರದೇಶ 10 ಪರ್ ಸೆಂಟ್‌ಗೆ ಬಂದಿದೆ. 15 ಲಕ್ಷ ಎಕರೆಗೆ ನೀರಾವರಿ ಅನುಕೂಲ ಸಿಗುತ್ತಿದೆ ಎಂದು ಸರ್ಕಾರದ ವಕ್ತಾರರು ಹೇಳಿದ್ದಾರೆ. ಎಷ್ಟು ಎಕರೆಗಳಲ್ಲಿ 2-3 ಬೆಳೆಯನ್ನು ಬೆಳೆಯುವುದಕ್ಕೆ ಅವಕಾಶ ಇವೆ ಎಂಬ ಅಂಕಿ ಅಂಶಗಳು ನನ್ನ ಮುಂದೆ ಇಲ್ಲ. ಸುಮಾರು 22 ಲಕ್ಷ ಎಕರೆಗಳಿಗೆ ನೀರಾವರಿಯ ಸೌಕರ್ಯ ಇದೆ ಎಂದು ಒಂದು ಕಡೆ ಹೇಳಲಾಗಿದೆ. ಇನ್ನೊಂದು ಕಡೆ 10 ಲಕ್ಷದ 31 ಸಾವಿರದ 32 ಹೆಕ್ಟಾರಿಗೆ ನೀರಾವರಿಯ ಅನುಕೂಲ ಸಿಕ್ಕಿದೆ ಎಂದು ಹೇಳಲಾಗಿದೆ. ಅಂದರೆ 9ರಿಂದ 10 ಪರ್‌ಸೆಂಟ್‌ವರೆಗೆ ನೀರಾವರಿಯ ಅನುಕೂಲ ಸಿಕ್ಕಿದೆ. 28 ಪರ್‌ಸೆಂಟಿಗೆ ಬಂದು ಮುಟ್ಟಬಹುದು ಎಂದು ಹೇಳಿದ್ದಾರೆ. ಈಗ ಪ್ಲಾಂಡಿಚೆರಿಯ ಲೆಫ್ಟಿನೆಂಟ್ ಗವರ್ನರ್ ಆಗಿರುವ ಶ್ರೀ ಜತ್ತಿಯವರ ಅಧ್ಯಕ್ಷತೆಯಲ್ಲಿ ಹಿಂದೆ ಒಂದು ಕಮಿಟಿಯನ್ನು ನೇಮಕ ಮಾಡಲಾಗಿತ್ತು. ಆ ಕಮಿಟಿಯು ವರದಿಯಲ್ಲಿರುವ ಕೆಲವು ಅಂಶಗಳನ್ನು ಮಾತ್ರ ಇಲ್ಲಿ ಓದುತ್ತೇನೆ. ಮೊದಲು ದೊಡ್ಡ ವಿಷಯವನ್ನು ಹೇಳುತ್ತೇನೆ. ಈಗ ಸರ್ಕಾರದವರು ಭೂಮಿಯ ಮೇಲೆ ಕಂದಾಯವನ್ನು ಹಾಕಬೇಕೇ ಬೇಡವೇ ಆಕಾಶದ ಮೇಲೆ ಹಾಕುವುದಕ್ಕಾಗುವುದಿಲ್ಲ. ಜಮೀನು ಇದ್ದರೆ ಅನ್ನ ಕೊಡುವುದಿಲ್ಲ, ಬೆಳೆಯು ಸುರಿಸಬೇಕು. ಲಗುಬಗೆಯಿಂದ ಸರ್ಕಾರದವರು ಜಾಸ್ತಿ ಕಂದಾಯವನ್ನು ಹಾಕುವುದಕ್ಕೆ ಹೊರಟಿರುವಾಗ ಈ ಮಾತನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಈಗ ಒಟ್ಟು 24,66,877 ಹಿಡುವಳಿಗಳು ಇವೆ ಎಂದು ಸರ್ಕಾರದ ಲೆಕ್ಕದಲ್ಲಿ ಇದೆ. ಒಂದು 6 ಲಕ್ಷ ಜಾಸ್ತಿ ಇಟ್ಟುಕೊಂಡರೂ ಕೂಡ 30 ಲಕ್ಷ ಹಿಡುವಳಿಗಳು ಇವೆ ಎಂದು ಲೆಕ್ಕ ಹಾಕಬಹುದು. ಇಲ್ಲವೆ 25 ಲಕ್ಷ ಹಿಡುವಳಿಗಳಾದರೂ ಇವೆ ಎಂದು ಹೇಳಬಹುದು. ಇಂಗ್ಲೀಷ್‌ನಲ್ಲಿ ಹಿಡುವಳಿಗೆ ಹೋಲ್ಡಿಂಗ್ಸ್ ಎಂದು ಹೇಳುತ್ತಾರೆ. ಈಗ ಬೇಸಾಯವಾಗುತ್ತಿರುವ ಜಮೀನಿನ ವಿಸ್ತೀರ್ಣ 2,67,76,797 ಎಕರೆಗಳು. ಈಗ ಸರ್ಕಾರದವರು ತಮ್ಮ ಅನುಕೂಲಕ್ಕೆ ತಕ್ಕಂತೆ ಹೆಕ್ಟಾರ್‌ನಲ್ಲಿ ಲೆಕ್ಕವನ್ನು ಹಾಕುತ್ತಿದ್ದಾರೆ. ಸಾವಿರಕ್ಕೆ ಮೇಲ್ಪಟ್ಟು 153 ಹಿಡುವಳಿಗಳು ಇವೆ. ಇದರಲ್ಲಿ ವ್ಯಕ್ತಿಗಳು ಸೇರಿರಬಹುದು, ದೇವಾದಾಯ, ಧರ್ಮಾದಾಯ, ಮಠಾದಾಯಕ್ಕೆ ಸೇರಿದ ಹಿಡುವಳಿಗಳು ಇರಬಹುದು. ಸಾವಿರಕ್ಕೆ ಮೇಲ್ಪಟ್ಟು ಹಿಡುವಳಿಗಳು ಒಟ್ಟು ಹಿಡುವಳಿಗಳಲ್ಲಿ .005 ನಮ್ಮ ರಾಜ್ಯದಲ್ಲಿ ಇದೆ.

4-30 P.M.

ಇದರಲ್ಲಿ ಮುಜರಾಯಿ ಸಂಸ್ಥೆಗಳೂ ಸೇರಿರಬಹುದು, ಧರ್ಮಾದಾಯ, ದೇವಾದಾಯ ಮತ್ತು ದತ್ತಿಗಳೂ ಬರಬಹುದು ಮತ್ತು ಟ್ರಸ್ಟ್‌ಗಳೂ ಸೇರಿರಬಹುದು. ಇದರ ಬಗ್ಗೆ ಸರಕಾರದವರು ನನಗೆ ಯಾವ ಅಂಕೆ ಸಂಖ್ಯೆಗಳನ್ನೂ ಒದಗಿಸಿ ಕೊಟ್ಟಿಲ್ಲ. ನಾನು ನನ್ನಲ್ಲಿರುವ ಕೆಲವು ಅಂಕೆ ಸಂಖ್ಯೆಗಳ ಆಧಾರದ ಮೇಲೆ ಇಲ್ಲಿ ಹೇಳುತ್ತಿದ್ದೇನೆ. ಇದರಲ್ಲಿ ತಪ್ಪೇನಾದರೂ ಇದ್ದರೆ ಇದನ್ನು ತಿದ್ದುಪಡಿ ಮಾಡುವ ಅಧಿಕಾರ ರಾಜಸ್ವ ಮಂತ್ರಿಗಳದ್ದು. 153 ವ್ಯಕ್ತಿಗಳ ಅಥವಾ ಸಂಸ್ಥೆಗಳ ಕೈಯ್ಯಲ್ಲಿ ಜಮೀನು ಎಷ್ಟಿದೆ ಎಂದರೆ ಸುಮಾರು 3,25,632 ಎಕರೆಗಳಿವೆ. ಇವರು ಕಂದಾಯ ಕೊಡುವ ಜಮೀನಿನ ವಿಸ್ತೀರ್ಣ ಶೇಕಡಾ 1.22 ಎಂದಾಗುತ್ತದೆ. .005 ರಷ್ಟು ವ್ಯಕ್ತಿ ಅಥವಾ ಸಂಸ್ಥೆಗಳಲ್ಲಿ ವಿಶೇಷವಾಗಿವೆ. 500 ರಿಂದ 1000 ಎಕರೆಗಳು ಎಷ್ಟಿದೆ ಎನ್ನುವುದನ್ನು ಹೇಳುತ್ತೇನೆ. ಇವೆರ್ಲಾ ಭೂ ಸುಧಾರಣೆಗೆ ಸಂಬಂಧಪಟ್ಟಿರುವ ಮಾತುಗಳಾದರೂ ಇದರಲ್ಲಿರುವಂತೆ ಬೇರೆ ಬೇರೆ ಭೂಮಾಲೀಕರುಗಳು ಇರುವುದರಿಂದ ಭೂ ಮಾಲೀಕರು ಮಾತ್ರ ಭೂ ಕಂದಾಯ ಕೊಡುತ್ತಾರೆ ಗೇಣಿದಾರರಿಗೆ ಇದರ ವಿಚಾರ ಏತಕ್ಕೆ ಎಂದು ಹೇಳಲು ನನ್ನಲ್ಲಿ ಒಂದು ಸರಕಾರ ಕೊಟ್ಟಿರುವ ರಿಪೋರ್ಟ್ ಇದೆ. ಇದನ್ನು ಆಮೇಲೆ ಹೇಳುತ್ತೇನೆ. ಭೂ ಕಂದಾಯ ಭೂಮಿ ಮಾಲೀಕ ಕೊಡುವಾಗ ಗೇಣಿದಾರರಿಗೆ ಏಕೆ ಇದರ ದುಃಖ ಎಂದು ತಾವು ಕೇಳಬಹುದು. ಭೂ ಸುಧಾರಣೆಯನ್ನು ಯಾವ ಯಾವ ರೀತಿಯಲ್ಲಿ ಎಷ್ಟು ವರ್ಷದಲ್ಲಿ ಜಾರಿಗೆ ತರುವ ಮಾತು ಕೊಡು

ತ್ತೀರಿ ? ಅಥವಾ ಅವರಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳುತ್ತಿದ್ದೀರಾ ? ಇಲ್ಲವೇ ಗೇಣಿದಾರರನ್ನು ಹಿಡುವಳಿದಾರರ ಕೂಲಿಗಾರರಾಗಿ ಇರಬೇಕೆಂದು ಅವರಿಗೇನಾದರೂ ನಿಗದಿ ಮಾಡಿದ್ದೀರಾ ? ಇದರ ಬಗ್ಗೆ ರಾಜ್ಯ ಸರಕಾರದವರ ಅಭಿಪ್ರಾಯ ಏನು ಎಂದು ಕೇಳುತ್ತಿದ್ದೇನೆ. ಬರೀ ಇಲ್ಲಿರುವ ಕಲಂಗೆ ಮಾತ್ರ ಉತ್ತರ ಕೊಟ್ಟರೆ ಸಾಲದು. ಇವೊತ್ತು ಯಾವ ಆಧಾರದ ಮೇಲೆ ನಮ್ಮ ದೇಶ ನಿಂತಿದೆ ಎಂದರೆ ನಮ್ಮ ಎಲ್ಲ ಪ್ರಗತಿಯೂ ಕೃಷಿಕಾರನ ಮೇಲೆ ನಿಂತಿದೆ. ಕೃಷಿಯ ಮೇಲೆ ಕೈಗಾರಿಕೆ ನಿಂತಿದೆ. ಕೈಗಾರಿಕೆಗಳ ಮೇಲೆ ನಮ್ಮ ದೇಶದ ಪ್ರಗತಿ ಅವಲಂಬಿಸಿದೆ. ಇದು ಹೇಗಿದೆ ಎಂದರೆ ನಮ್ಮ ಶರೀರದಲ್ಲಿರುವ ಅವಯವಗಳು ಒಂದಕ್ಕೊಂದು ಹೇಗೆ ಸಂಬಂಧಿಸಿವೆಯೋ ಅದರಂತೆ ಸಮಗ್ರವಾಗಿ ಈ ದೇಶದ ಪ್ರಗತಿ ಕೃಷಿಯ ಮೇಲೆ ನಿಂತಿದೆ. ಸಮಗ್ರವಾಗಿ ಎನ್ನುವುದನ್ನು ಹೇಳುತ್ತಾ ಇಲ್ಲ. 500 ರಿಂದ 1000 ಎಕರೆಗಳವರೆಗೆ 379 ಸಂಸ್ಥೆಗಳು ಹಾಗೂ ವ್ಯಕ್ತಿಗಳಲ್ಲಿ ಇವೆ. ಇದರಲ್ಲಿ ಎಷ್ಟು ಜಮೀನು ಇದೆ ಎಂದರೆ 0.1 ಪರ್ಸೆಂಟು ಜನ ಆಯಿತು. ಭೂಮಿ 2,62,919 ಎಕರೆಗಳಷ್ಟು ಇದೆ. ಇದನ್ನು 98 ಜನರು ಇಟ್ಟುಕೊಂಡಿದ್ದಾರೆ. 300 ಎಕರೆಗಳಿಂದ 500 ಎಕರೆಗಳವರೆಗೆ ಎಷ್ಟು ಜನರಿದ್ದಾರೆ ಎಂದರೆ ಸುಮಾರು 838, ಎಂದರೆ ಒಟ್ಟು ಶೇಕಡಾವಾರು .03 ಪರ್ಸೆಂಟು ಆಗುತ್ತದೆ. ಇದು ಒಟ್ಟು ಹಿಡುವಳಿದಾರರುಗಳ ಮೇಲೆ ಎಂದರೆ. 179 ಜನರನಲ್ಲಿ 3,11,969 ಎಕರೆಗಳಷ್ಟು ಭೂಮಿಯಾಗುತ್ತದೆ. ಇಷ್ಟು ಎಕರೆಗಳಿಗೆ ಮಾತ್ರ ಕಂದಾಯವನ್ನು ಸಲ್ಲಿಸುತ್ತಿದ್ದಾರೆ. 200 ರಿಂದ 300 ಎಕರೆಗಳವರೆಗೆ ಇರುವವರು 1,673 ಜನ ಇದ್ದಾರೆ. ಇವರಲ್ಲಿರತಕ್ಕ ಒಟ್ಟು ಜಮೀನು ಎಷ್ಟು ಎಂದರೆ 3,93,623 ಎಕರೆಗಳು. ಎಂದರೆ, .07 ಹಿಡುವಳಿಗಳು ಎಂದರೆ 1. 97 ಎಕರೆಗಳಷ್ಟು ವಿಸ್ತೀರ್ಣವನ್ನು ಒಳಗೊಂಡಿದೆ. ಇದೂ ಅಲ್ಲದೆ ಇದರಲ್ಲಿ 150 ರಿಂದ 200 ಎಕರೆಗಳು, 100 ರಿಂದ 150 ಎಕರೆಗಳು, 75 ರಿಂದ 100 ಎಕರೆಗಳು 60 ರಿಂದ 75 ಎಕರೆಗಳು, 45 ರಿಂದ 60 ಎಕರೆಗಳು ಮತ್ತು 30 ರಿಂದ 45 ಎಕರೆಗಳು ಇವರೆಲ್ಲ ಆದಮೇಲೆ ನನಗೆ ಸಂಬಂಧಪಟ್ಟ ವಿಷಯಕ್ಕೆ ಬರುತ್ತೇನೆ. ಅದು ಐದು ಎಕರೆಗಳಷ್ಟು ಇರುವ ಹಿಡುವಳಿದಾರರುಗಳ ಬಗ್ಗೆ. ಐದು ಎಕರೆಗಳಷ್ಟು ಇರುವ ಒಟ್ಟು ಹಿಡುವಳಿದಾರುರಗಳು 47.16 ಪರ್ಸೆಂಟನಷ್ಟು ಇದ್ದಾರೆ. ಐದು ಲಕ್ಷ ಲೆಟರ್ ಹೆಡ್ ಲ್ಯಾಂಡ ಲಾರ್ಡ್ಸ್ ಎಂದೇನಿದ್ದಾರೆ ಇವರುಗಳು ಬತ್ತನೆ ಬೀಜ ಸಿಕ್ಕದೇ ಹಳ್ಳಿಯಲ್ಲಿ ಕಂಬಳಿ ಹೊದ್ದುಕೊಂಡು ಇರುವ ರೈತನೊಡನೆಗೇನೇ ಸೇರಲು ಬರುತ್ತಾರೆ. ಸ್ವಾಮೀ, ನೆಲ ಹಿಡಿದು ನೆಲದಲ್ಲಿರುವ ಮಣ್ಣಾಗಿ, ಗಂಡ ಹೆಂಡತಿಗೂ ಹಾಗೂ ಅವನ ಮಕ್ಕಳು ಎಲ್ಲರೂ ಭೂಮಿಯಲ್ಲಿ ದುಡಿದು ಬಿತ್ತಿದ ಬೀಜವೂ ಸಿಕ್ಕದೆ, ಅತಿವೃಷ್ಟಿ ಹಾಗೂ ಅನಾವೃಷ್ಟಿ ಇಂತಹ ಜೀವ ಸಮಸ್ಯೆಗಳಿಗೆ ಸಿಕ್ಕಿ ನರಳುತ್ತಿರುವ ರೈತನ ಬಗ್ಗೆ, ರೈತನೇ ದೇಶದ ಬೆನ್ನೆಲುಬು ಎಂದು ಹೇಳುವ ಸರ್ಕಾರ ಇಂತಹವನ ಬೆನ್ನು ಮುರಿಯುವಂತೆ ಅವನ ಮೇಲೆ ಹೊಡೆಯಲು ಹೋಗಬೇಡಿ, ಅವನ ಹೆಂಡಂದಿರ ಮಾನಭಂಗ ಮಾಡಲು ಹೋಗಬೇಡಿ, ಅವನ ಗಡಿಗೆಗಳನ್ನು ಹರಾಜು ಮಾಡಲು ಹೋಗಬೇಡಿ. ಇದರಿಂದ ಏನೂ ಅನುಕೂಲ ಮಾಡಿದ ಹಾಗಾಗುವುದಿಲ್ಲ. ಇಂದು ಯಾವ ರೈತನ ಆಧಾರದ ಮೇಲೆ ಸರಕಾರ ನಿಂತಿದೆಯೋ ಅಂತಹವನು ಕೊಡಬೇಕಾದ ಕಂದಾಯವನ್ನು ಮಾಫೀ ಮಾಡಿ ಎಂದು ಹೇಳುತ್ತಿದ್ದರೂ ಇನ್ನೂ ಅಂತಹ ಕಾಲ ಬಂದಿಲ್ಲ ಎಂದು ಹೇಳುತ್ತೀರಿ. ಇವೆಲ್ಲಾ ಕೆಲಸಗಳನ್ನು ಮಾಡಲು ಮೆಷಿನರಿಗಳು ಇವೆ ಇದರಂತೆ ಸರ್ವೆ ಕಾರ್ಯ ಕೆಲಸಗಳು ಮುಂದುವರಿಯುತ್ತಿವೆ. ಇವರು ಎಷ್ಟು ಜನ ಇದ್ದಾರೆ ಎಂದರೆ ಸುಮಾರು 47. 16 ಪರ್ಸೆಂಟನಷ್ಟು ಇದ್ದಾರೆ. ಇಂತಹ ಜನರ ಕೈಯ್ಯಲ್ಲಿ ಸುಮಾರು 27 ಲಕ್ಷ ಎಕರೆ ಚಿಲ್ಲರೆ ಎಂದರೆ ಸುಮಾರು 28 ಲಕ್ಷ ಎಕರೆಗಳಷ್ಟು ಇವರ ಕೈಯ್ಯಲ್ಲಿದೆ. ನೀರಾವರಿ ಆಗಿದ್ದ ಪಕ್ಷದಲ್ಲಿ ಸಣ್ಣ ಹಿಡುವಳಿದಾರರು ಗಾಂಜಾ ಹಾಗೂ ಅಫೀಮು ಬೆಳೆಯುತ್ತಾರೆ, ತಂಬಾಕು ಬೆಳೆಯುತ್ತಾರೆ. ಹೀಗೆ ವ್ಯಾಪಾರ ಅಥವಾ ವಾಣಿಜ್ಯದ ಬೆಳೆಗಳನ್ನು ಬೆಳೆದು ಲಕ್ಷಗಟ್ಟಲೆ ಹಣ ಸಂಪಾದನೆ ಮಾಡುವ ಪರಿಸ್ಥಿತಿ ಬರಬಹುದು. ಆಗ ನೀವು ನೇರವಾಗಿ ಭೂ ಕೃಷಿಮಾಡುವವರ ಮೇಲೆ ಆದಾಯ ತೆರಿಗೆ ಹಾಕಬಹುದು.

ಈ ಜನರನ್ನು ಮುಕ್ತರನ್ನಾಗಿ ಮಾಡಬೇಕು, ಹೊರಲು ಶಕ್ತಿ ಇರುವವರಮೇಲೆ ಕೃಷಿ ವರಮಾನ ತೆರಿಗೆಯನ್ನು ಹೊರಿಸಬೇಕು. ಎಷ್ಟೋ ಜನ ಈಗಾಗಲೇ ಹೊರಲಾರದೆ ಹೊರೆ ಹೊತ್ತು ನೆಲಕ್ಕೆ ಬಿದ್ದಿರುವುದರಿಂದ ಅವರಮೇಲೆ ಇನ್ನೂ ಹೊರೆಹಾಕಲು ಸಾಧ್ಯವಿಲ್ಲ. ಅಕ್ಕಿ ಮೇಲೂ ಮಾರಾಟತೆರಿಗೆ ಹಾಕುವ ಈ ಸರ್ಕಾರ ನರಕಕ್ಕೆ ಹೋಗುತ್ತದೆ. ಬಡವ ತಿನ್ನುವ ಅಕ್ಕಿಗೆ ಒಂದು ಪೈಸೆಯಂತೆ ಮಾರಾಟತೆರಿಗೆ ತೆಗೆದುಕೊಂಡು ಪೋಷು ಮಾಡುವ ಸರಕಾರ ನರಕಕ್ಕೆ ಹೋಗುತ್ತದೆ. ಆ ನರಕದಲ್ಲಿ ಇವರನ್ನು ಗರಗಸದಿಂದ ಕುಯ್ಯುತ್ತಾರೆ, ಕುದಿಯುವ ಎಣ್ಣೆ ಕೊಪ್ಪರಿಕೆಗೆ ಹಾಕಿ ಬವಣೆ ಕೊಡುತ್ತಾರೆ ಎಂದು ಹೇಳುತ್ತೇನೆ. ಆದುದರಿಂದ ನಾನು ಹೇಳುವುದು ಈ ಕೃಷಿ ಸಂಬಂಧದಲ್ಲಿ ಅಲ್ಪಲಾಭಕರ ಬೇಸಾಯ, ಅನಾರ್ಥಿಕ ಬೇಸಾಯಮಾಡಿದರೆ ಅವನ ಮೇಲೆ ಏತಕ್ಕೆ ತೆರಿಗೆ

(ಶ್ರೀ ಎಸ್. ಗೋಪಾಲಗೌಡ)

ಹೇರುತ್ತೀರಿ? ಆದಾಯ ತೆರಿಗೆಯಲ್ಲಿ, ಸಂಪತ್ತಿನ ತೆರಿಗೆಯಲ್ಲಿ ನೀವು ಕೆಲವು ಎಕ್ಸೆಮ್ಷನ್ ಕೊಟ್ಟಿದ್ದೀರಿ. ಆದರೆ ಅನ್‌ಎಕನಾಮಿಕ್ ಹೋಲ್ಡಿಂಗ್‌ನಲ್ಲಿ, ಎಷ್ಟೋ ಸಲ ಅವನಿಗೆ ಬಿತ್ತಿದ ಬೀಜವೂ ಸಿಕ್ಕುವುದಿಲ್ಲ, ಮಣ್ಣಿನಲ್ಲೇ ಹುಳದಂತೆ ಇದ್ದು ಅದರಲ್ಲೇ ಸಾಯುವಂಥ ಬಡವನ ಮೇಲೆ ಏತಕ್ಕೆ ಕಲ್ಲು ಹೊರಿಸುತ್ತೀರಿ? ಅಲ್ಪಲಾಭಕರ ಬೇಸಾಯ, ಅನಾರ್ಥಿಕ ಬೇಸಾಯ ಮಾಡುವ ರೈತರ ಮೇಲೆ, ಬಿತ್ತಿದ ಬೀಜವೂ ದಕ್ಕದಂತಹ ರೈತನ ಮೇಲೆ ಅವನ ಜೇಬಿಗೆ ಕೈಹಾಕಿದರೆ ಒಂದು ಪೈಸಾ ಕೂಡ ಸಿಕ್ಕದೆ ಇರುವವನ ಮೇಲೆ ಹೀಗೆ ಕಂದಾಯ ಹೇರಿ, ವಸೂಲ್ಮಾಡುವುದಕ್ಕೆ ನಿಮಗೆ ಯಾವ ನೈತಿಕ ಬಲವೂ ಇರುವುದಿಲ್ಲ.

ಇನ್ನು ಭೂಸುಧಾರಣೆ ವಿಚಾರದಲ್ಲಿ ಎರಡು ಮಾತುಗಳನ್ನು ಹೇಳಬೇಕಾಗುತ್ತದೆ. ದೊಡ್ಡ ದೊಡ್ಡ ಲ್ಯಾಂಡ್ ಹೋಲ್ಡರ್ಸ್, ಪ್ಲಾಂಟೇಷನ್ನಿನವರು ಲಕ್ಷಾಂತರ ರೂಪಾಯಿ ಸಂಪಾದನೆ ಮಾಡುತ್ತಾರೆ. ಅವರ ಮೇಲೆ ಆಗ್ರಿಕರ್‌ಚರಲ್ ಇಂಕಂಟ್ಯಾಕ್ಸ್ ಹಾಕಿ. ಆದರೆ ಅನ್‌ಎಕನಾಮಿಕ್ ಹಿಡುವಳಿದಾರರಿಗೆ ಏತಕ್ಕೆ ತೊಂದರೆ ಕೊಡುತ್ತೀರಿ? ಇನ್ನು ಮಾರಿಕಣಿವೆಯಲ್ಲಿ ನೀರು ಹಾಯದೇ ಇರುವಂಥ ಭೂಮಿಗೂ ಕೂಡ 500 ರೂಪಾಯಿ ವಸೂಲ್ಮಾಡಬೇಕೆಂದು ಇದೆ. ಆದುದರಿಂದ ನಾನು ಹೇಳುವುದು ಇದರಲ್ಲಿ ಪ್ರಾಮುಖ್ಯವಾದ ವಿಷಯಗಳು ಇವೆ. ಈ ರಿವಿಷನ್ ಸೆಟಲ್‌ಮೆಂಟ್ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಖುಷ್ಕಿ ಜಮೀನಿಗೆ ದರ ಕಡಿಮೆಯಾಗಿದೆ ಎಂದು ಹೇಳುತ್ತಾರೆ. ಈಗ Total extent of dry lands in the State is 2,65,65,725 acres. ಕಾಂಗ್ರೆಸ್ಸಿನವರು ಬಂದಮೇಲೆ ಖುಷ್ಕಿ ಏರಿಯಾ ಇದ್ದುದು ಡ್ರೈ ಏರಿಯಾ ಆಯಿತೇ? ಈಗಿನ ಹೊಸರೇಟ್ ಪ್ರಕಾರ 3 ಕೋಟಿ 18 ಲಕ್ಷ 70 ಸಾವಿರ ರೂಪಾಯಿ ಆಗುತ್ತದೆ. ಇದರಲ್ಲಿ ಲ್ಯಾಂಡ್ ರೆವಿನ್ಯೂ ತೆಗೆದುಕೊಂಡರೆ 97 ಲಕ್ಷ 39 ಸಾವಿರ ರೂಪಾಯಿ ಆಗುತ್ತದೆ. ಈ ಲ್ಯಾಂಡ್ ರೆವಿನ್ಯೂನಲ್ಲಿ 25 ಪರ್ಸೆಂಟು ಕಡಿಮೆಯಾಗಿರುವುದು ಏನೋ ನಿಜ. ಲ್ಯಾಂಡ್ ರೆವಿನ್ಯೂ ಕಡಿಮೆಯಾದರೂ ಕೂಡ ಅದರ ಜೊತೆಗೆ ಸರ್‌ಛಾರ್ಜು ಸೇರಿಸಿದ್ದೀರಿ. ಈಗ ಲ್ಯಾಂಡ್‌ರೆವೆನ್ಯೂನಲ್ಲಿ 25 ಪರ್ಸೆಂಟು ಕಡಿಮೆಮಾಡಿ ಅದರ ಜೊತೆಗೆ 75 ಪರ್ಸೆಂಟು ಸರ್‌ಛಾರ್ಜು ಹಾಕಿ ಅಸೆಸ್‌ಮೆಂಟ್ ಒಲ್ಡ್ ರೇಟ್‌ನಲ್ಲೇ ಮಾಡಿದ್ದೇವೆ ಎಂದರೆ ಹೇಗೆ ಆಗುತ್ತದೆ? ಜಪ್ತಿಕ್ಕರ್ ಹಿಂದುಗಡೆ ಸಾಮಾನುಗಳನ್ನು ಎಳೆದುಕೊಂಡು ಹೋಗುವ ಟ್ರೈಲರ್ ಇದ್ದ ಹಾಗೆ, ಲ್ಯಾಂಡ್ ರೆವಿನ್ಯೂ ಜೊತೆಗೆ ಸರ್‌ಛಾರ್ಜು ಸೇರಿಸಿಬಿಟ್ಟು ಇದು ಓಲ್ಡ್ ರೇಟ್ಸ್ ಎಂದು ಹೇಳಿದರೆ ಹೇಗೆ ಸಾಧ್ಯ? ಆದರೆ ಮಾನ್ಯ ರಾಜನ್ಯ ಸಚಿವರು ಯಾವ ರೀತಿ ಹೇಳಿದರೋ ಆ ರೀತಿ ತೆಗೆದುಕೊಂಡು ಬಂದಿಲ್ಲ. ಆದುದರಿಂದ ಇದು ಕಾಂಪ್ರಹೆನ್ಸೀವ್ ಅಮೆಂಡ್‌ಮೆಂಟ್ ಆಗಿ ಇಲ್ಲ. ಈಗ ಈ ಮನೆಯಲ್ಲಿ ತಂದಿರುವ ತಿದ್ದುಪಡಿಗೆ ಅಂಗೀಕಾರ ಕೊಡುವುದು ಸರಿಯೇ? ನಾವು ನಮ್ಮ ಹೊಣೆಯನ್ನು ನಮ್ಮ ಜವಾಬ್ದಾರಿಯಿಂದ ನಿರ್ವಹಿಸುವಂತೆ ಮಾಡಬೇಡವೇ? ಇದನ್ನೆಲ್ಲಾ ತಾವು ವಿಚಾರ ಮಾಡಬೇಕು. ತಮಗೆಲ್ಲಾ ನಮಂಜನ ಎಂದು ಕಂಡು ಬಂದರೆ ಒಪ್ಪಿಗೆ ಕೊಡುವುದಕ್ಕೆ ಅಡ್ಡಿ ಇಲ್ಲ. ಈ ವಿಷಯದಲ್ಲಿ ಏನೂ ತಿಳಿದುಕೊಳ್ಳದೆ ನಾವೇನಾದರೂ ಈ ಮಸೂದೆಗೆ ಅಸ್ತು ಅಥವಾ ಏ ಎಂದು ಹೇಳಿದರೆ ಊರುಗಳಿಗೆ ಹೋದಾಗ ಎಂ. ಎಲ್. ಎ. ಗಳನ್ನು ಗ್ರಾಮಸ್ಥರು ಕನ್ನಡದಲ್ಲಿ ಏಯ್ ಎಂದು ಕರೆಯುತ್ತಾರೆ. ಇದು ಗಹನವಾಗಿ ಹೇಳುವಂಥ ವಿಷಯ. ನನ್ನ ಪಕ್ಷದ ಪರವಾಗಿ, ಹಾಗೂ ರೈತರ ಪರವಾಗಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಇದರಲ್ಲಿ ಇನ್ನೊಂದು ವಿಷಯ ಏನೆಂದರೆ ಈಗ ಇದರಲ್ಲಿ ಲ್ಯಾಂಡ್ ರೆವಿನ್ಯೂ 25 ಪರ್ಸೆಂಟು ಏನು ಇದೆಯೋ ಅದರ ಜೊತೆಗೆ 75 ಪರ್ಸೆಂಟು ಸರ್‌ಛಾರ್ಜು ಸೇರಿಸಿಕೊಂಡು ಮಾಡಿದ್ದೀರಿ. ಹಾಗಾದರೆ ಇದು ಓಲ್ಡ್ ರೇಟ್ ಹೇಗೆ ಆಯಿತು?

ಎಷ್ಟು ಉತ್ತಮವಾದ ಸಲಹೆಗಳನ್ನು ಮಾನ್ಯ ಮಂತ್ರಿವರ್ಯರಿಗೆ ಮಾನ್ಯ ಅಧಿಕಾರ ವರ್ಗದವರು ಕೊಟ್ಟು ಜನತೆಯ ಸಮಗ್ರ ಸೇವೆಗೆ ಅವರು ನಿರತರಾಗಿದ್ದಾರೆ ಎನ್ನುವುದು ಈ ಮಾತುಗಳಿಂದ ಗೊತ್ತಾಗುತ್ತದೆ. ಎಡಗೈಯಲ್ಲಿ ಕೊಡುವುದನ್ನು ಬಲಗೈಯಲ್ಲಿ ತೆಗೆದುಕೊಳ್ಳುವುದು, ಬಲಗೈಯಲ್ಲಿ ಕಪಾಳಕ್ಕೆ ಹೊಡೆಯುವುದು, ಎಡಗೈಯಲ್ಲಿ ಒರೆಸುವುದು ಇತ್ಯಾದಿಯಾಗಿ ನಡೆದುಕೊಂಡು ಬರುತ್ತಿರುವುದು. ಇದು ಬಹುಶಃ ತಮಗೆ, ಈ ಸರ್ಕಾರ ನಡೆಸುವವರಿಗೆ ಅರಿವು ಆಗಲಿಲ್ಲವೋ ಏನೋ. ಆದರೆ ಮಾನ್ಯ ಕಂದಾಯ ಮಂತ್ರಿಗಳು ಹೇಳಿದರು, ನಾವು ಸ್ವಲ್ಪ ದಿವಸ ವಿರೋಧಪಕ್ಷದಲ್ಲಿ ಕುಳಿತುಕೊಂಡಿದ್ದರೆ ಚೆನ್ನಾಗಿತ್ತೋ ಏನೋ ಅಂದರು. ಅವರು ಹಾಗೆ ಏಕೆ ಅಂದರೋ ಏನೋ ಗೊತ್ತಿಲ್ಲ. ಪ್ರಾಸಂಗಿಕವಾಗಿ ಅಂದಿರಬಹುದು. ವಿರೋಧಪಕ್ಷದವರಿಗೆ ಅಡಳಿತ ನಡೆಸುವ ಕಷ್ಟ ಗೊತ್ತಾಗಲಿ ಎಂದು ಹೇಳಿರಬಹುದೋ ಏನೋ. ಏತಕ್ಕಾಗಿ ಹೇಳಿದರು ಎಂದು ಗೊತ್ತಿಲ್ಲ. ಏನೋ ಒಂದು

ತರಹ ಸೂಚ್ಯವಾಗಿ ಅಂದರು. ಆದುದರಿಂದ ಈ ತಿದ್ದುಪಡಿಯನ್ನು ಅಂಗೀಕಾರ ಮಾಡುವ ಮುನ್ನ ಈ ಸಭೆ ನಾನು ಪ್ರಾರ್ಥಿಸಿದಂಥ ಕೆಲವು ವಿಷಯಗಳಿಗೆ ಗಮನ ಕೊಡಬೇಕು. ಇನ್ನು ಕೆಲವು ಸಂಬಂಧಿಸಿದ ವಿಷಯಗಳನ್ನು ಪ್ರಸ್ತಾಪ ಮಾಡಿ ಮುಗಿಸಬೇಕು.

ಬಹಳ ವಿಚಿತ್ರವಾದ ಸರ್ಕಾರ. ಸಂಬಳ ಒಂದು ಸರ್ಕಾರ ಕೊಡುತ್ತದೆ ಅಧಿಕಾರಿಗಳಿಗೆ ಎಂದು ಹೇಳಬಹುದು. ಕೆಲಸ ಒಂದು ಸರ್ಕಾರದ ಕೆಲಸವಲ್ಲ. ಎಲ್ಲಿ ಹೋದರೂ ವಿಚಿತ್ರವಾದ ರೀತಿಯಲ್ಲಿ ಸರ್ಕಾರ ನಡೆದುಕೊಂಡು ಹೋಗುತ್ತಿದೆ. ವಿಧಾನ ಸಭೆಯಲ್ಲಿ ಮತ್ತು ಹೊರಗೆ ಮಂತ್ರಿಗಳು ಮಾಡುವ ಭಾಷಣ ಮತ್ತು ಪ್ರತಿನಿತ್ಯ ನಾವು ಹಳ್ಳಿಗಳಲ್ಲಿ ಮತ್ತು ಪಟ್ಟಣಗಳಲ್ಲಿ ಮತ್ತು ಹೊರಗಡೆ ನೋಡುವ ವಿಷಯ ಇವುಗಳಿಗೆ ಅರ್ಥಾರ್ಥ ಸಂಬಂಧವಿಲ್ಲ, ಎನ್ನುವುದನ್ನು ಸಾಬೀರಾರು ಅಥವಾ ಲಕ್ಷಾಂತರ ದೃಷ್ಟಾಂತಗಳನ್ನು ಕೊಟ್ಟು ತಮ್ಮ ಗಮನಕ್ಕೆ ತರಬಲ್ಲೆ. ಎಲ್ಲ ವಿಷಯಗಳನ್ನೂ ಗಮನಕ್ಕೆ ತರುವಂಥ ಸಮಯ ಇದಲ್ಲ. ಈಗಾಗಲೇ ಬಹಳ ಜನರಿಗೆ ಬೇಜಾರು, ಬೇಸರವಾಗಿರಬಹುದು, ಆಶ್ಚರ್ಯವೂ ಆಗಿರಬಹುದು, ಇವರು ಏಕೆ ಹೀಗೆ ಮಾತನಾಡುತ್ತಾರೆ ಎಂದು. ವಿಷಯ ಹಾಗೆ ಇರುವುದರಿಂದ ನಾನು ಮಾತನಾಡುತ್ತಿದ್ದೇನೆ.

ಸ್ವಾಮಿ, ಮಾನ್ಯ ರಾಜಸ್ವ ಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುತ್ತೇನೆ ಸ್ವಲ್ಪ ಹಿಂದೆ ಈ ಸಭೆಯಲ್ಲಿ ಹಿಂದಿನ ರಾಜಸ್ವ ಮಂತ್ರಿಗಳು ಕೊಟ್ಟಂಥ ಒಂದು ಹೇಳಿಕೆಯನ್ನು ಓದಬೇಕು ಮತ್ತು ಅದಕ್ಕಿಂತ ಸ್ವಲ್ಪ ಹಿಂದೆ ಹೋಗಿ ನೋಡಿಕೊಳ್ಳಬೇಕು. ಸರ್ಕಾರ ಒಂದು ಸಲ ಗ್ರೋ ಮೋರ್ ಫುಡ್ ಕಾಂಪೇನ್ ಎಂದು ಜಾರಿಗೆ ತಂದಿತು. ಅದರಲ್ಲಿ ಬಹಳ ಜನಗಳಿಗೆ ಬಹಳ ರೀತಿಯಲ್ಲಿ ಭೂಮಿ ಕೊಡಲಾಯಿತು. ಅದರಲ್ಲಿ ಬಹಳ ಮಾರಾಟವಾಯಿತು ಎಂದು ಕೇಳಿದ್ದೇನೆ. ಏನು ಮಾಡುವುದಕ್ಕೂ ಬರಲಿಲ್ಲ ಭೂಮಿ ಎಂದಾಯಿತು. ಅದರಲ್ಲಿ ಎಷ್ಟು ಕಂದಾಯ ಬರುತ್ತದೆ ಎಂದು ಸರ್ಕಾರದವರೇ ನೋಡಿದ್ದಾರೆಯೋ ಇಲ್ಲವೋ ಗೊತ್ತಿಲ್ಲ. 10–14 ವರ್ಷಗಳಿಂದ ಒಂದೇ ಸಮನೆ ಸಾಗು ಮಾಡಲು ಭೂಮಿ ಕೇಳಿ, ಕೇಳಿ, ಕೇಳಿ, ಬೇಸತ್ತು, ಉಪಾಯವಿಲ್ಲದೆ ನತ್ತರೂ ಚಿಂತೆ ಇಲ್ಲ, ನೋಡಿಕೊಳ್ಳೋಣ ಎಂದು ಅರಣ್ಯ ಮತ್ತು ಸರ್ಕಾರದ ಪಡಭೂಮಿಯನ್ನು, ಲಕ್ಷಾಂತರ ಎಕರೆಯನ್ನು ಸಾಗುವಳಿಗೆ ತಂದಿದ್ದಾರೆ. 10–14 ವರ್ಷಗಳಿಂದ ತಕರಾರು ತಃಖ್ತೆ ಎಂದು ಒಬ್ಬ ಅಧಿಕಾರಿ ಹತ್ತಿರ ಹೋಗಿ, ಅದಕ್ಕೆ ಪ್ರತಿ ವರ್ಷವೂ ತಹಸೀಲ್ದಾರರು ಮತ್ತು ಜಿಲ್ಲಾಧಿಕಾರಿಗಳು ಹುಜೂರ್ ಜಮಾಬಂದಿ ಎಂದು ಮಾಡುವಾಗ ಅಲ್ಲಿ ಒಂದೇ ಸಮನೆ ಬಗರ್ ಹುಕುಂ ಸಾಗುವಳಿ ಮಾಡಿದ್ದಾರೆ ಎಂದು ಒಂದು ಎಕರೆಗೆ 15 ರಿಂದ 150 ರೂಪಾಯಿಗಳವರೆಗೂ ಕಂದಾಯವನ್ನು ವಸೂಲಾ ಮಾಡಿಕೊಂಡು ಬಂದಿದ್ದಾರೆ. 150, 200, 250, 300 ರೂಪಾಯಿ ಕಂದಾಯವನ್ನು ಹಾಕುವುದಕ್ಕಾಗುವುದಿಲ್ಲ. ಅದನ್ನು ಸಕಾರಣ ಎಂದು ಸಮರ್ಥಿಸಿಕೊಳ್ಳುವುದಕ್ಕಾಗುವುದಿಲ್ಲ, ಬಗರ್ ಹುಕುಂ ಜಾರಿಯಲ್ಲಿಟ್ಟುಕೊಂಡು ತಕರಾರು ತಃಖ್ತೆ ಹಾಕಿ, ನಿನ್ನ ಜಮೀನನ್ನು ಬಿಡಿಸಿ, ಎತ್ತು ಹರಾಜು ಮಾಡುತ್ತೇನೆ, ನಿನ್ನ ಮನೆಗೆ ಹೋಗುತ್ತೇನೆ ಎಂದು ಬೆದರಿಸಿ ವಸೂಲ್ಮಾಡುವುದರಿಂದ ಬೊಕ್ಕಸಕ್ಕೆ ಸ್ವಲ್ಪ ಹಣ ಬರಬಹುದು ಎಂದು ಸರ್ಕಾರ ಏನಾದರೂ ನೀತಿಯನ್ನು ಅಂತರಂಗದಲ್ಲಿ ತಾಳಿದೆಯೋ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ಇಲ್ಲದೆ ಇದ್ದರೆ ಇಷ್ಟೊಂದು ವರ್ಷ ಕಂದಾಯವನ್ನು ನಿಗದಿ ಮಾಡದೆ ತಕರಾರು ತಃಖ್ತೆ ಕಂದಾಯವನ್ನು ವಸೂಲ್ಮಾಡಿ, ರೆವೆನ್ಯೂ ಇನ್‌ಸ್ಪೆಕ್ಟರು ಮತ್ತು ಪಟೇಲರು ವಸೂಲ್ಮಾಡಿದ್ದನ್ನು ತಹಸೀಲ್ದಾರರು ಒಪ್ಪಿ ಸಹಿ ಹಾಕಿ, ಅವರೆಲ್ಲರೂ ಒಪ್ಪಿದುದನ್ನು ಜಿಲ್ಲಾಧಿಕಾರಿಯಂಥವರು ಒಪ್ಪಿ ಸಹಿ ಹಾಕಿ ಅದನ್ನು ರಾಜ್ಯ ಸರ್ಕಾರ ಒಪ್ಪಿಕೊಂಡು ಹೇಗೆ ಬಂತು, ಏಕೆ ಬಂತು, ಬರುವುದು ಸಮಪೇ ಎನ್ನುವುದನ್ನು ತಿಳಿಸಬೇಕು ಮತ್ತು ತಕರಾರು ತಃಖ್ತೆ ಅಥವಾ ಬಗರ್ ಹುಕುಂಗೆ ಒಳಪಟ್ಟಿರತಕ್ಕ ರೈತರ ಸಂಖ್ಯೆ ಎಷ್ಟಿದೆ, ಅವರಲ್ಲಿ ಯಾರು ಭೂಹೀನ ರೈತರಾಗಿದ್ದಾರೋ, ಯಾರಿಗೆ ಬೇರೆ ಜಮೀನು ಇಲ್ಲವೋ, ಯಾರಿಗೆ ಬೇರೆ ಏನೂ ಆದಾಯವಿಲ್ಲವೋ ಅಂಥ ಕುಳಗಳನ್ನು ಕಂಡು ಹಿಡಿದು ಅವರಿಗಾದರೂ ಅಖೈರಾಗಿ ನಿರ್ದಿಷ್ಟ ಕಂದಾಯವನ್ನು ಗೊತ್ತು ಮಾಡಿ, ಅವರಿಗೆ ಖಾತೆ ದೊರಕಿಸಿಕೊಡುತ್ತೀರೋ ಇಲ್ಲವೋ ಎನ್ನುವುದನ್ನು ರಾಜಸ್ವ ಮಂತ್ರಿಗಳು ತಿಳಿಸಬೇಕು.

ಭೂಕಂದಾಯವನ್ನು ರದ್ದು ಮಾಡುವ ಬಗ್ಗೆ ನಾನು ಮತ್ತೆ ಏನನ್ನೂ ಮಾತನಾಡುವುದಿಲ್ಲ. ಏಕೆಂದರೆ 1967ರ ಮುಂಜೆ ಚುನಾವಣೆಯಲ್ಲಿ ಘೋಷಣೆಯಾಗಿತ್ತು. ಅದು ಚುನಾವಣಾ ಪ್ರಣಾಳಿಕೆಯಲ್ಲಿ ಇಲ್ಲ ಎಂದು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. 1967ರ ಅಯವ್ಯಯ ಅಧಿವೇಶನದಲ್ಲಿ ಭಾಷಣ ಮಾಡುತ್ತ ಮಾನ್ಯ ಸಚಿವರು ಕಂದಾಯವನ್ನು ನಾವು ಈಗಿರುವ ರೀತಿಯಲ್ಲಿ ವಸೂಲ್ಮಾಡುವುದಿಲ್ಲ ಎಂಬುದನ್ನು ವಿಚಾರ ಮಾಡುತ್ತಿದ್ದೇವೆ ಎಂದೇನೋ ಅರ್ಥ ಬರುವ ರೀತಿಯಲ್ಲಿ ಹೇಳಿದರು. 1967 ಅಯಿತು, 1968 ಅಯಿತು, 1969ರ ಹಣವನ್ನು, ಕೋಟಿಗಟ್ಟಲೆ ಹಣವನ್ನು

(ಶ್ರೀ ಎಸ್. ಗೋಪಾಲಗೌಡ)

ನಾವು ಗುಂಡಿಗೆ ಹಾಕಿದ್ದು ಆಯಿತು. ಕೊನೇ ದಿವಸದಲ್ಲಿದ್ದೇವೆ. ಇನ್ನು ಆರು ತಿಂಗಳು, ಬೀಸುವ ದೊಣ್ಣೆ ತಪ್ಪಿದರೆ ಆರು ತಿಂಗಳ ಆಯಸ್ಸು' ರಾಜ್ಯಾಂಗ ಕೊಟ್ಟಿದೆ. ಆದುದರಿಂದ ನಾವು ಹೊರಗೆ ಬಾಯಿ ಹುಯ್ಯಿಕೊಳ್ಳಬಹುದು. ಹೊರಗೆ ಬಾಯಿ ಹುಯ್ಯಿಕೊಳ್ಳುವುದಕ್ಕೆ ಕಂದಾಯ ಮಂತ್ರಿಗಳು ಟ್ಯಾಕ್ಸ್ ಹಾಕಿಲ್ಲ ತಾನೇ? ಭೂಸುಧಾರಣೆ ತರುವ ವಿಷಯವನ್ನು ನಾನು ಹೇಳಬೇಕು. ಭೂಕಂದಾಯಕ್ಕೂ, ಭೂ ಸುಧಾರಣೆಗೂ ಸಂಬಂಧವಿದೆ ಎಂದು ಬಹಳಮಟ್ಟಿಗೆ ಹೇಳಬೇಕಾಗುತ್ತದೆ. ತಕರಾರು ತಃಖ್ತೆ ಹಾಕಿರುವ ಭೂಮಿಯನ್ನು ಅಥವಾ ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ಭೂಮಿಯನ್ನು ಅದನ್ನು ಮಾಡುತ್ತಿರುವವರಿಗೇ ಕೊಡುತ್ತೀರೋ ಅಥವಾ ಕೊಡುವುದಿಲ್ಲವೋ ಎನ್ನುವುದನ್ನೂ ಈವೊತ್ತು ಹೇಳಬೇಕು.

5-00 P.M.

ಇನ್ನು ಪೊನ್ನೆ ಯಾರೋ ಲ್ಯಾಂಡ್ ಗ್ರಾಂಟ್ ರೂಲ್ಸ್ ತಂದಿರುವುದಾಗಿ ಹೇಳಿದರು. ಆದರೆ ಮಂತ್ರಿಗಳು ತಂದಿಲ್ಲವೆಂದು ಹೇಳಿದರು. ಇದನ್ನು ಸಭೆಗೆ ತಿಳಿಸಬೇಕು. ರೂಲ್ಸ್ ಮಾಡಿದ್ದರೆ ಯಾವ ತರಹ ಮಾಡಿದೆ ಎಂಬುದನ್ನು ಹೇಳಬೇಕು. ರೂಲ್ಸ್ ನೋಡಬಹುದು, ನಮ್ಮನ್ನು ದೂರುವುದೇಕೆ ಎಂದು ಬರೆದವರು ಹೇಳುತ್ತಾರೆ. ನಮಗೆ ಪೂರ್ತಿ ಸೊತ್ತಿಲ್ಲದಿರುವಾಗ ರೂಲ್ಸ್ ಓದಲು ಸಾಧ್ಯವೇ? ಲ್ಯಾಂಡ್ ರೆವೆನ್ಯೂ ಆಕ್ಟ್ ರೂಲ್ಸ್‌ಗೆ ಎಷ್ಟೋ ತಿದ್ದುಪಡಿಯಾಗಿದೆ. ಎಷ್ಟೋ ಜನರು ದರಖಾಸ್ತು ಹಾಕಿ ಹಾಕಿ ಸಾಕಾದರು, ಎಷ್ಟು ಲಕ್ಷ ಜನರಿಗೆ ಜಮೀನು ಕೊಟ್ಟಿದ್ದಾರೋ ಏನೋ ಲೆಕ್ಕ ಗೊತ್ತಿಲ್ಲ. ನನಗೆ ಗೊತ್ತಿರುವ ಹಾಗೆ ಬಹಳ ಜನ ದರಖಾಸ್ತು ಹಾಕಿದವರು ಸತ್ತಿದ್ದಾರೆ, ಗ್ರಾಂಟ್ ಆದಮೇಲೆ ಸಾಗುವಳಿ ಚೀಟಿ ಸಿಗದೆ ನರಳುತ್ತಿರುವವರಿದ್ದಾರೆ. ಸಾಗುವಳಿ ಚೀಟಿ ಕೊಟ್ಟಮೇಲೆ ತಾವೇನು ಕೆಲಸಮಾಡಬೇಕೋ—ಫೋಢಿ, ರಿಕಾರ್ಡ್ ಆಫ್ ರೈಟ್ಸ್ ಮುಂತಾದ್ದು ಎಂ. ವಿ. ಕೃಷ್ಣಪ್ಪನವರು ಹೇಳುತ್ತಿದ್ದರು—ಅದನ್ನು ಮಾಡದಿದ್ದರೆ, ಭೂಮಿ ಕೊಟ್ಟು ಸಾಗುವಳಿ ಚೀಟಿ ಕೊಟ್ಟರೂ ಬಾಕಿ ಇರುವುದನ್ನು ಕೊಡದಿದ್ದರೆ ಕೇಳುವುದಕ್ಕೆ ಶಂಖ, ಜಾಗಟೆ ತರಬೇಕು. ನಿಮ್ಮಲ್ಲಿ ಖದೀಮ ಅಧಿಕಾರಿಗಳಿದ್ದಾರೆ. ಒಂದು ತಾಲ್ಲೂಕಿನಲ್ಲಿ ಅವರಿದ್ದರೆ ಅಲ್ಲಿರುವುದು ಅವರು ತಮ್ಮ ಸ್ವಂತ ಜಮೀನೆಂದು ಭಾವಿಸುವರು. ಕೇಳುವವರು ಎರಡು ಸಾವಿರ ರೂಪಾಯಿ ಕೊಡಬೇಕು, ಇನ್ನೂರು—ಮುನ್ನೂರು ರೂಪಾಯಿ ಕೊಡಬೇಕು, 20 ವರ್ಷದಿಂದ ಹೀಗೆ ನಡೆಯುತ್ತಿದೆ, ತಮಗೆ ಗೊತ್ತಿರಬಹುದು. ಗೊತ್ತಿಲ್ಲದಿದ್ದರೆ ಹೇಳುತ್ತೇನೆ. ಒಂದು ದರಖಾಸ್ತು ಅರ್ಜಿ ಮಂಜೂರಾಗಬೇಕಾದರೆ ಹೀಗೆ ಕೊಟ್ಟುಕೊಂಡುಬರಬೇಕು. 5 ಎಕರೆ ಪಡ ಜಮೀನಿದ್ದರೆ 50 ಜನರ ಹತ್ತಿರ ದರಖಾಸ್ತು ಅರ್ಜಿ ತೆಗೆದುಕೊಂಡು ಅವರಲ್ಲಿ ಪ್ರತಿಯೊಬ್ಬರಿಂದ 5 ರಿಂದ 100 ರೂಪಾಯಿಗಳವರೆಗೆ ತೆಗೆದುಕೊಂಡು 51ನೆ ಯವರಿಗೆ ಜಮೀನು ಮಂಜೂರು ಮಾಡಿರುವ ಖದೀಮರನ್ನು ನೋಡಿದ್ದೇನೆ. ಲೆಕ್ಕ ಬರೆಸಿಕೊಡುತ್ತೇವೆ. ಪಹಣಿ ಬರೆಸಿಕೊಡುತ್ತೇವೆ, ಫಾರಂ ಪ್ರಿಂಟ್ ಆಗಿದೆ, ಬರೆಯುತ್ತಿದ್ದಾರೆ ಎಂದು ಸುಳ್ಳು ಹೇಳುತ್ತಾರೆ. 20 ವರ್ಷಗಳಿಂದ ಇದನ್ನು ಕೇಳಿ ಕಿವಿ ಕಿವುಡಾಗಿದೆ. ಸತ್ಯಕ್ಕೆ ದೂರವಾದುದು ಎಂದು ಹೇಳಿದರೆ ಬಹಳ ದೂರವಾಗುತ್ತದೆ. ಆದುದರಿಂದ ಹಸಿ ಸುಳ್ಳು ಎಂದು ಹೇಳಬೇಕಾಗುತ್ತದೆ. ಲ್ಯಾಂಡ್ ಗ್ರಾಂಟ್ ರೂಲ್ಸ್ ಜಾರಿಗೆ ಕೊಟ್ಟಿದ್ದೀರಾ? ಸಿದ್ಧಮಾಡಿದ್ದೀರಾ! ಅದರ ಪ್ರಕಾರ ಜಮೀನು ಹಂಚಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ನೀಡಿದ್ದೀರಾ! ಆ ಪ್ರಕಾರ ಕೆಲಸಮಾಡುತ್ತಿದ್ದೀರಾ! ನಾಳೆ ಏನಾದರೂ ದೂರು ಬಂದರೆ ದರಖಾಸ್ತು ಹಾಕಿ ಇಷ್ಟು ದಿವಸವಾಗಿದೆ, ಹಣ ಕೊಟ್ಟು ಇಷ್ಟು ದಿವಸವಾಯಿತು ಎಂದು ಹೇಳಿದರೆ ಕ್ರಮ ತೆಗೆದುಕೊಂಡು ಜಾಗ ಕೊಡುತ್ತೀರಾ! ಈ ಪ್ರಶ್ನೆ ಕಂದಾಯಕ್ಕೆ ಸಂಬಂಧಪಟ್ಟ ಪ್ರಶ್ನೆ. ಇದಕ್ಕೆ ಉತ್ತರ ಕೊಡಬೇಕು. ಕಾರಾವಾರದವರು ಸತ್ಯಾಗ್ರಹ ಮಾಡುತ್ತಾರಂತೆ, ಬೇರೆಕಡೆ ಕೂಡ ಮಾಡಬಹುದು, ಭೂಮಿಯ ದಾಹ ಬಹಳವಾಗಿದೆ, ಒಂದು ಲಕ್ಷಕ್ಕೆ ಮೇಲ್ಪಟ್ಟು ಜನರು ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಲ್ಲಿದ್ದಾರೆ, ಪದವೀಧರರು ಲಾರಿ, ಬಸ್ಸುಗಳನ್ನು ನಡೆಸುವ ಪರಿಸ್ಥಿತಿ ಇದೆ, ಎಲ್ಲಾ ದೃಷ್ಟಿಯಿಂದ ನೋಡಿದರೆ ಕರಿಣ ಪರಿಸ್ಥಿತಿ ಇದೆ. ಬಹಳ ಜನರಿಗೆ ಭೂಮಿಯನ್ನು ನಲಂಬಿಸಿದರೆ ಜೀವಿಸಬಹುದು ಎಂಬ ಆಸೆ ಇದೆ. ಕೆಲವರು ಭೂಮಿಕಡೆ ತಿರುಗಿದ್ದಾರೆ ಈ ಸಂದರ್ಭದಲ್ಲಿ ದರಖಾಸ್ತುಗಳನ್ನು ಯಾವಾಗ ಏಲೇ ವಾಡುವುದು, ಭೂಹೀನರಿಗೆ ಬೇಸಾಯದ ಕೂಲಿ ಮಾಡುವವರಿಗೆ, ಮುಖ್ಯವಾಗಿ ಹರಿಜನ-ಗಿರಿಜನರಿಗೆ ಜಮೀನು ಬೇಕೆಂದು ಬಹಳ ದಿವಸದಿಂದ ಕೇಳುತ್ತಿದ್ದಾರೆ. ಈಚೆಗೆ ರಾಮನಗರಕ್ಕೆ ಹೋಗಿದ್ದೆ, ಅಲ್ಲಿ ಕೂಲಿ ಮಾಡುವವರಿಗೆ ಹಿಂದಿನ ಅರಣ್ಯ ಶಾಖೆಯ ಮಂತ್ರಿಗಳಿಗೆ ಭೂಮಿ ಕೊಡಿಸಬೇಕೆಂದು ಬಹಳ ಸಲ ಹೇಳಿದರೂ ಕೊಟ್ಟಿಲ್ಲ. ಅರಣ್ಯ ಬೆಳೆ

ನುತ್ತೇವೆಂದು ಹೇಳುತ್ತಾರೆ ನಮ್ಮ. ಹೆಣದಮೇಲೆ ಬೆಳೆನುತ್ತೀರಾ ? ಯಾವ ಜಮೀನು ಅರಣ್ಯ ಇರಾಖೆಯಲ್ಲಿರುವುದು ಸಾಗವಳಿಗೆ ಯೋಗ್ಯವಾಗಿದೆ ಅದನ್ನು ಈಗಿಂದೀಗಲೇ ಅರಣ್ಯಇಲಾಖೆ ಬಿಡುಗಡೆ ಮಾಡಿ ಭೂಮಿಗಾಗಿ ಯಾವ ರೈತರು ಅನೇಕ ವರ್ಷಗಳಿಂದ ದಖಾಸ್ತು ಹಾಕಿ ಜಮೀನು ಮಂಜೂರಾಗದೆ ಇದೆ, ಅವರಿಗೆ ಜಮೀನು ಮಂಜೂರುಮಾಡಿ ಅದಕ್ಕೆ ಕಂದಾಯ ನಿಗದಿಮಾಡಬೇಕು, ಟಿ.ಟಿ. ಹಾಕಬಾರದು. ಬಹಳ ಭಾಗದ ಅರಣ್ಯದ ಭೂಮಿ ಸಾಗುವಳಿಗೆ ಲಾಯಕ್ಕಾಗಿದೆ, ಅದು ಎಲ್ಲಿದೆ ಯೆಂಬುದು ಗೊತ್ತಿದೆ, ತೋರಿಸುತ್ತೇನೆ. ಬಿದನೂರು ಸಾಮ್ರಾಜ್ಯವು ಹಾಳಾದಮೇಲೆ ಎಲ್ಲಾ ಗ್ರಾಮಗಳೂ ಅರಣ್ಯಕ್ಕೆ ಸೇರಿವೆ, ಮರ ಗಿಡ ಇಲ್ಲದಿರುವುದನ್ನು ಮೈನರ್ ಫಾರೆಸ್ಟ್ ಎಂದು ಹೇಳುತ್ತಾರೆ. ದಖಾಸ್ತು ಹಾಕಬಾರದೆಂದು ಹೇಳಿದ್ದೀರಾ ? ಉಳುಮೆ ಮಾಡಿರುವವರ ಮನೆಗೆ ಗಾರ್ಡ್‌ನುಗ್ಗಿ ಕೋಳಿ ಮುಂತಾದ್ದನ್ನೆಲ್ಲಾ ತೆಗೆದುಕೊಂಡು ಹೋಗುತ್ತಿದ್ದಾರೆ, ಅರಣ್ಯವಿರುವ ಕಡೆ ಹಿಗಾಗಿದೆ. ಅನೇಕ ವರ್ಷಗಳಿಂದ ಅರಣ್ಯದ ಮಧ್ಯದಲ್ಲಿ ಊರಿದೆ, ಅರಣ್ಯ ಸಂಪೂರ್ಣವಾಗಿ ನಾಶವಾಗಿದೆ ಅರಣ್ಯ ಮಂತ್ರಿಗಳಿಗೆ ತೋರಿಸುತ್ತೇನೆ, ಕಾಡುಕಿಚ್ಚು 3 ತಿಂಗಳ ಕಾಲ ಇರುವುದು ಅರಣ್ಯ ಬೆಳೆಸುವುದು ಕಾರ್ಯಗತವಾಗಿರಬಹುದು, ಅದು ಬೇರೆ. ಆದರೆ ಈ ದಿವನ ಭೂಮಿಗೆ ಯಾರು ಬೇಡಿಕೆ ಸಲ್ಲಿಸಿದ್ದಾರೆ. ಅವರಿಗೆ ಕೊಡಬೇಕು ಆರೂವರೆ ಎಕರೆಗಳಿಗಿಂತ ಕಡಿಮೆ ಹಿಡುವಳಿ ಇರುವವರಮೇಲೆ ಕಂದಾಯ ತೆಗೆಯಬೇಕು, ಕೊಡುವ ಶಕ್ತಿಯಿರುವವರ ಮೇಲೆ ನೇರವಾಗಿ ಅದಾಯ ತೆರಿಗೆ ವಿಧಿಸುವುದನ್ನು ಪರಿಶೀಲಿಸಬೇಕು. ಇದಕ್ಕೆ ವಿರೋಧ ಕೆಲವು ಕಡೆ ಇರಬಹುದು, ಕಾರಣ ಕಿರುಕುಳ ಲೆಕ್ಕ ಇಡಬೇಕು, ಕೊಟ್ಟ ಲೆಕ್ಕ ತಪ್ಪು ಎಂದು ಹೇಳುವುದು, ಒಪ್ಪದೆ ಇರುವುದು, ಮತ್ತು ಜಮೀನು ಮನೆ ಹರಾಜಿಗೆ ತರುವುದು. ಇದಕ್ಕೆ ಬಹಳ ಮಂದಿ ಹೆದರಿ ಕಂದಾಯ ಕೊಡುವುದು ಕೃಷಿ, ಸಂಪತ್ತಿನಮೇಲೆ ತೆರಿಗೆ ಕೊಡುವುದಕ್ಕೆ ಹಿಂದೇಟು ಹೊಡೆಯುವುದು ಕಂಡುಬರುತ್ತದೆ. ಕೃಷಿ ವರಮಾನ ತೆರಿಗೆ ಹಾಕುವುದನ್ನು ವಿರೋಧಿಸುತ್ತಿದ್ದಾರೆ ಎಂದು ಕೆಲವರು ಮುಖಂಡರು ಕಟುವಾಗಿ ಹೇಳಿದ ಮೇಲೆ ಈ ಸೂಚನೆಯನ್ನು ಕೈಬಿಡಲಾಯ್ತು ಎಂದು ಕೇಳಿದೆ.

ಇಪತ್ತು ರಾಜ್ಯದ ಬೊಕ್ಕಸಕ್ಕೆ ಬರತಕ್ಕ ಸುಮಾರು ಎರಡು ಕೋಟಿ ರೂಪಾಯಿ ಕೃಷಿ ವರಮಾನದಲ್ಲಿ ಹೆಚ್ಚು ಕಮ್ಮಿ ಒಂದು ಕೋಟಿ 50 ಲಕ್ಷ ರೂಪಾಯಿನಷ್ಟು ಪ್ಲಾಂಚೇಷನ್ ಅವರೇ ಕೊಡುತ್ತಾರೆ ಎಂದು ನನಗೆ ಅನಿಸುತ್ತದೆ. ಆದ್ದರಿಂದ ನೇರವಾಗಿ ಹೊರಬಲ್ಲವರ ಮೇಲೆ ತೆರಿಗೆಯನ್ನು ಹೊರಿಸಬೇಕೇ ಹೊರತು, ಹೊರಲಾರದಂಥವನ ಮೇಲೆ ನಾನಾ ರೂಪದಲ್ಲಿ ತೆರಿಗೆಯನ್ನು ತಂದು ಹೇರಿ ಅವನನ್ನು ಬೇಟೆಯಾಡುತ್ತೀರಿ, ಷಿಕಾರಿ ಮಾಡುತ್ತೀರಿ. ಅದಕ್ಕೇ ನಾವು ಈ ತಿದ್ದುಪಡಿ ಮಸೂದೆಯನ್ನು ವಿರೋಧಿಸುತ್ತೇವೆ. ಇಂತಹ ಅಧಿಕಾರವನ್ನು ಈಗಿರತಕ್ಕ ಎಲ್ಲಾ ಅಧಿಕಾರಿಗಳಿಗೂ ಕೊಡುವುದಕ್ಕೆ ಸಾಧ್ಯವಿಲ್ಲ, ನಾನಂತೂ ಸಿದ್ಧನಾಗಿಲ್ಲ — ನಾನು ವೈಯಕ್ತಿಕವಾಗಿ ಹೇಳುವುದಾದರೆ. ಕೆಲವರು ಇರಬಹುದು—ಬಹಳ ನ್ಯಾಯ ದೃಷ್ಟಿ, ಅವರಿಗೆ ನ್ಯಾಯ ಮಾಡುವ ದೃಷ್ಟಿ, ಬಡವನ ಮೇಲೆ ಕರುಣೆ, ಬೊಕ್ಕಸದ ಮೇಲೆ ದೃಷ್ಟಿ—ಅಪಹರಿಸುದು ಅಲ್ಲ—ರಾಜ್ಯದ ಬೊಕ್ಕಸಕ್ಕೆ ಹಣ ಬರಬೇಕೆನ್ನುವ ದೃಷ್ಟಿ, ಸರ್ಕಾರ ಚೆನ್ನಾಗಿ ನಡೆಯಬೇಕೆನ್ನುವ ದೃಷ್ಟಿಯುಳ್ಳವರು ಅಧಿಕಾರ ಕೊಡುವುದಕ್ಕೆ ಸಿದ್ಧರಿರಬಹುದು, ಇಲ್ಲ ಅಂತ ಹೇಳುತ್ತಿಲ್ಲ. ಈ ವ್ಯವಸ್ಥೆ ಕೆಟ್ಟು ಹಾಳಾಗಿ, ಮೇಲಿಂದ ಕೆಳಗಿನ ತನಕ ದುರುಪಯೋಗವಾಗುತ್ತಾ ಇದೆ—ಒಬ್ಬ ವಿಲೇಜ್ ಅಕೌಂಟೆಂಟು ಅಧಿಕಾರ ದುರುಪಯೋಗ ಪಡಿಸಿಕೊಂಡದ್ದನ್ನು ಹೇಳುತ್ತೇನೆ. ನಮ್ಮ ಊರಿನಲ್ಲಿ ನಮ್ಮ ಜೊತೆಯಲ್ಲಿ ಜೈಲಿನಲ್ಲಿ ಇದ್ದವನನ್ನು 57ರಿಂದ ಓಟರುಗಳ ಲಿಸ್ಟ್‌ನಲ್ಲಿ ಸೇರಿಸಿದ್ದಾರೆ, ಇಂತಹ ನೂರಾರು ದುರುಪಯೋಗಗಳು ನಡೆದಿವೆ. ಮೇಲಿನವರ ವಿಷಯ ಹೇಳುವುದಕ್ಕೆ ನಾನು ಹೋಗುವುದಿಲ್ಲ. ಅದು ಎಲ್ಲರಿಗೂ ಮೇಲೆಯೇ ಕಾಣುತ್ತದೆ. ಹೀಗಿರುವಾಗ ವ್ಯವಸ್ಥೆಯ ಬಗ್ಗೆ ನಮಗೆ ಕಳವಳ ಇದೆ, ಕುಸಿದು ಬೀಳುವ ಸ್ಥಿತಿಯನ್ನು ಮುಟ್ಟಿರತಕ್ಕ ಈ ವ್ಯವಸ್ಥೆಯನ್ನು ಹೇಗೆ ಹೊತ್ತು ಮುಂದೆ ಸಾಗುತ್ತೀರಿ, ನಿಮ್ಮ ಬೊಕ್ಕಸಕ್ಕೆ ಯಾರಿಂದ ಹಣವನ್ನು ತುಂಬಿಕೊಳ್ಳುತ್ತೀರಿ, ನಾನು ಇದುವರೆಗೂ ಹೇಳಿರತಕ್ಕ ಸಂಕಷ್ಟಗಳನ್ನು ಹೇಗೆ ಪರಿಹಾರ ಮಾಡುತ್ತೀರಿ ? ಇದನ್ನು ನಾನು ರಾಜಸ್ವ ಮಂತ್ರಿಗಳಿಗೆ ಪ್ರಶ್ನೆ ಹಾಕಬೇಕಾಗಿದೆ. ಇಷ್ಟು ಹೇಳಿ, ಇನ್ನು ಈ ಅರಣ್ಯ ಇಲಾಖೆಯವರ ವಿಷಯ ಸ್ವಲ್ಪ ಹೇಳಬೇಕಾಗಿದೆ. ಅರಣ್ಯ ಇಲಾಖೆಯವರ ಷಿಕಾರಿ ನಡೆಯುತ್ತಾ ಇದೆ. ಅಲ್ಲಿಂದ ಎಲೆ ತರುವುದು ಕಷ್ಟ, ಅಲ್ಲಿ ಹೋಗಿ ಜಮೀನಿನಲ್ಲಿ ಕಾಲು ಇಡುವುದು ಕಷ್ಟ, ಅಲ್ಲಿರತಕ್ಕ ಜಮೀನಿನಲ್ಲಿ ದನಗಳು ಮೇಯುವುದಕ್ಕೆ ಹೋಗುವುದೂ ಕೂಡ ಕಷ್ಟ. ಶ್ರೀಮಾನ್ ರಾಜಯ್ಯನವರಿಗೆ ತಮ್ಮ ಮೂಲಕ ಹೇಳುತ್ತೇನೆ. ಅವರು ಅರಣ್ಯ ಇರಾಖೆಯ ಹೊಸ ಕಾನೂನನ್ನು ಬರೆಯುವಾಗ ಯಾವ ಬ್ಯುಟಿಷರು ಮರೆನಾಡಿನ ರೈತರಿಗೆ ಸೊಪ್ಪಿನ ಬೆಟ್ಟ, ಕುಂಕಿ ಇತ್ಯಾದಿ ಸಲಕತ್ತುಗಳನ್ನು ಕೊಟ್ಟಿದ್ದರೋ ಅದಕ್ಕೆ ಒಂದು ಆರ್ಡರ್ ಮಾಡಿದ್ದರೋ ಆ ಆರ್ಡರನ್ನು ನಾನು ಗೌರವಿಸುತ್ತೇನೆ ಅಂತ ಹೇಳಿ ಅಶ್ವಾಸನೆ ಕೊಟ್ಟದ್ದು ತಪ್ಪುಗೂ ನೆನಪಿರಬಹುದು, ಸೆಲೆಕ್ಟ

(ಶ್ರೀ ಎಸ್. ಗೋಪಾಲಗೌಡ)

ಕಮಿಟಿಯಲ್ಲಿ ನನಗೆ ಮತ್ತು ಸುಬ್ಬಯ್ಯನಾಯಕ್‌ರವರಿಗೆ ಇವತ್ತು ಅದಕ್ಕೆ ತದ್ವಿರುದ್ಧವಾದ ಕ್ರಮ ಅರಣ್ಯ ಇರಾಖೆಯಿಂದ ನಡೆಯುತ್ತಾ ಇದೆ, ರೈತರನ್ನು ಷಿಕಾರಿ ಮಾಡುತ್ತಾ ಇದ್ದೀರಿ, ಕಾಡನ್ನು ಮನಸ್ಸಿಗೆ ಬಂದ ಹಾಗೆ ಕಡಿಯುತ್ತಾ ಇದ್ದೀರಿ, ಮನೆಬಾಗಿಲಿನ ಹತ್ತಿರ ಹಿಂದುಗಡೆ ಮುಂದುಗಡೆ ಬಂದು ಗೊಂದಲ ಹಾಕಿ ಕಾಡುತ್ತಾ ಇದ್ದೀರಿ. ತಾವು ಹೇಳಿದರಿ ಸೆಟ್ಲಮೆಂಟ್ ಆಫೀಸರನ್ನು ನೇಮಕ ಮಾಡುತ್ತೇವೆ, ಜನರನ್ನು ಕೇಳುತ್ತೇವೆ, ಬೆಳೆಗಾರರನ್ನು ಕೇಳಿದ ಮೇಲೆ ಕೃಷಿಗೆ ಯೋಗ್ಯವಾದ ಭೂಮಿಯನ್ನು ಬಿಟ್ಟು ಕೊಟ್ಟು ಊರಿಗೆ ದೂರವಾಗಿ ಕಾಡನ್ನು ಬೆಳೆಸುತ್ತೇವೆ ಎಂದು ಇದಕ್ಕೆ ತದ್ವಿರುದ್ಧವಾಗಿ ಇವತ್ತು ಅರಣ್ಯ ಇರಾಖೆಯವರು ನಡೆಯುತ್ತಾ ಇದ್ದಾರೆ, ಅದಕ್ಕೆ ಎಷ್ಟು ಕಂದಾಯ ಕೆಳಬೇಕೋ ಯಾರಿಗೂ ಗೊತ್ತಿಲ್ಲ. ಇವತ್ತು ಈ ಅದಿವಾಸಿ ಜನರಿಗೆ ಅರಣ್ಯ ಇರಾಖೆಯವರಿಂದ ಆಗತಕ್ಕ ಕಿರುಕುಳವನ್ನು ತಪ್ಪಿಸುವುದೂ ಕೂಡ ಅರಣ್ಯ ಮಂತ್ರಿಗಳ ಮತ್ತು ರಾಜಸ್ವ ಮಂತ್ರಿಗಳ ಜವಾಬ್ದಾರಿಯಾಗಿರುತ್ತದೆ. ಇದು ನಾನು ಮೊದಲೇ ಹೇಳಿದ ಹಾಗೆ ಒಂದಕ್ಕೆ ಒಂದು ಹೊಂದಿಕೊಂಡ ವಿಷಯವಾಗಿದೆ.

ಕೊನೆಯದಾಗಿ ರಾಜ್ಯದಲ್ಲಿ ಬಹುಪಾಲು ಮಳೆ ನೆರಳಿನ ಭಾಗ ಎಂದು ಹೇಳಬಹುದು. 10-13-14-15-18 ಇಂಚು ಮಳೆ ವರ್ಷದಲ್ಲಿ ಆಗುತ್ತದೆ. ಆಗುಂಬೆಯಂಥ ಕಡೆ 200 ಇಂಚೂ ಆಗಬಹುದು. ಮರೆನಾಡಿನಲ್ಲಿ 200 ಇಂಚಿನಿಂದ ಹಿಡಿದು 16-18 ಇಂಚಿನವರೆಗೂ ಮಳೆ ಯಾಗತಕ್ಕ ಪ್ರದೇಶವಿದೆ. ಶಿರಾಳಕೊಪ್ಪ, ಅಥವಾ ಸೊರಬ ಇಂತಹ ಕಡೆ 16-18 ಇಂಚು ಮಳೆಯಾಗುತ್ತದೆ. ಬಿಜಾಪುರ ಇಂತಹ ಪ್ರದೇಶ ಯಾವಾಗಲೂ ಕ್ಷಾಮದ ದವಡೆಯಲ್ಲಿರತಕ್ಕ ಊರುಗಳೂ ಕೂಡ ಇವೆ. ತಾವು ಹೋದವರ್ಷ ಹೇಳಿದರಿ ಈ ಮಾನ್ಯ ನಭೆಯಲ್ಲಿ ಒಂದು ಅಥವಾ ಎರಡು ಕೋಟಿ ರೂಪಾಯಿ ಆದರೂ ಸಾಧವಿಲ್ಲ ಹತ್ತು ಕೋಟಿ ರೂಪಾಯಿಗಳ ನೆರವು ಕೇಂದ್ರ ದವರು ನಮಗೆ ಕೊಡಬೇಕಾಗುತ್ತದೆ, ಇಲ್ಲಿ ಬಹಳ ಕ್ಷಾಮ ಇದೆ, ಧಾತು ಈಶ್ವರ ಕ್ಷಾಮದಂತಹ ಕ್ಷಾಮ ಮತ್ತೆ ಬರುತ್ತದೆ, ಇದು ಪದೇ ಪದೇ ಬರುತ್ತ ಇದೆ, ಆದ್ದರಿಂದ ಎಲ್ಲಿತನಕ ಭೂಮಿಗೆ ನೀರಾವರಿ ಸೌಕರ್ಯವನ್ನು ಒದಗಿಸಿಕೊಡುವುದಿಲ್ಲವೋ ಅಲ್ಲಿಯ ತನಕ ಮಳೆ ಬರದೇ ಇದ್ದಲ್ಲಿ ಈ ಅಭಾವ, ಮಳೆ ಬಂದರೆ ಅತಿವೃಷ್ಟಿ ಇದರಿಂದ ಭೂಮಿ ಹಾಳಾಗುವುದು, ಇದು ಸಾಮಾನ್ಯ ನಿಯಮ ಇದನ್ನು ಕ್ಷಾಮ ಮತ್ತು ನೆರೆಗಳು ಎಂದು ನಾವು ಹೇಳಬಹುದು ಇದರಲ್ಲಿ ಕಂದಾಯ ವಸೂಲು ಮಾಡುವುದಕ್ಕೆ ತಮ್ಮ ಅಧಿಕಾರಿಗಳು ಬರೆಯುತ್ತಾರೆ ನಾನು ನೋಡಿದ್ದೇನೆ, ಶಿವಮೊಗ್ಗಾದಲ್ಲಿ ಒಬ್ಬರು ಜಿಲ್ಲಾಧಿಕಾರಿಗಳಿದ್ದರು ಅವರು ಒಂದು ರಿಪೋರ್ಟ್ ಬರೆದರು. 'ಜಿಲ್ಲೆಯಲ್ಲಿ ಸುಮಾರು 90 ಭಾಗ ಮಳೆ ನೀರಿನಿಂದ ಬೆಳೆಯಾಗುವ ಭೂಮಿ ಇದೆ ಎಂದು. ನೂರಕ್ಕೆ 90 ಭಾಗ ಎಂದರೆ ಮುಗಿಯಿತಲ್ಲಾ. ಇನ್ನು ಹತ್ತು ಭಾಗ ಉಳಿದದ್ದು ತುಂಗಾ ಒಂದು ಸಣ್ಣ ಅಣೆಕಟ್ಟು, ಭದ್ರಾದಲ್ಲಿ ಸ್ವಲ್ಪ ಭಾಗ ಈಚೆಗೆ ಕೃಷಿಯಾಗಿದೆ. ಇನ್ನು ಸಣ್ಣ ಶಾಂತಿ ಸಾಗರ ಇತ್ಯಾದಿ ಕೆಲವು ಇವೆ. ಶೇಕಡ 90 ರಷ್ಟು ಭೂಮಿಯಲ್ಲಿ ಮಳೆ ನೀರಿನಿಂದ ಬಿತ್ತ ಬೆಳೆಯುತ್ತಾರೆ ಅಂತ ಆ ನಾಯಕರು ಹೇಳಿದರು. ಆ ಮೇಲೆ 4 ಆಣಿಗಿಂತ ಕಮ್ಮಿ ಬೆಳೆ ಆಗಿಲ್ಲ ಅಂಥ ಪೂರ್ತಿ ಕಂದಾಯ ವಸೂಲು ಮಾಡಿದರು. ಮಳೆ ಬರಲಿ, ಬರದೇ ಇರಲಿ ಮರೆನಾಡಿನಲ್ಲಿ ಗೇಣಿದಾರ—ಮೂಲಗೇಣಿದಾರ—ಅವಧಿ ಗೇಣಿದಾರ—ಮತ್ತು ಚಾಲಗೇಣಿದಾರ ಗೊತ್ತಾದ ಗೇಣಿಯನ್ನು ತೆರಲೇ ಬೇಕು. ಅದಕ್ಕೆ ಒಡೆಯನ ಗಂಟು ಅಂತ ಹೇಳುತ್ತಾರೆ. ಶ್ರೀಮತಿ ರೈರವರು. ನಾನು ದಕ್ಷಿಣ ಕನ್ನಡ ಜಿಲ್ಲೆಯನ್ನು ನೋಡಿದ್ದೇನೆ. ನಾನು ತಮ್ಮ ರೈತನನ್ನು ನೋಡಿದ್ದೇನೆ—ಕಾಫೀನ ಒಂದು ಬಿಟ್ಟು ಅವನ ಪ್ಲಸ್ ಮೇಲೆ ಏನಾದರೂ ಬಚ್ಚೆ ಇದೆಯೇ! ಯಾವುದಾದರೂ ಒಂದು ತೋರಿಗೆ ಹೋಗುವಾಗ ಒಂದು ಬಚಗಾನಿ ಹೊದ್ದುಕೊಂಡು ಮುಂಡಾಸು ಸುತ್ತಿಕೊಂಡು, ಕಾಲಿಗೆ ಒಂದು ಬೆಳ್ಳಿ ಸರಿಗೆ ಹಾಕಿಕೊಂಡು ಹೋಗುತ್ತಾನೆ. ಮಲೆನಾಡಿನ ರೈತನನ್ನು ಮೂದಲಿಸುತ್ತೇನೆ, ಹಳಿಯುತ್ತೇನೆ ಎಂದು ತಾವು ತಿಳಿಯಬಾರದು. ಶ್ರೀಮತಿ ರೈರವರು ಜಮೀನ್ದಾರರು, ಮತ್ತು ಜವಾಬ್ದಾರಿಯುತ ಸದಸ್ಯರು ಅವರು ಹೇಳುತ್ತಾರೆ. ಅವರನ್ನು ಟೀಕೆ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಇವತ್ತಿಗೂ ಕೂಡ ಮುಡಿ ಅಕ್ಕಿ ಕೊಟ್ಟು ಧಣಿಯ ಪಾದಕ್ಕೆ ಬಿದ್ದು ಗೇಣಿದಾರ ಮನೆಗೆ ಹೋಗುತ್ತಾ ಇದ್ದಾನೆ. ಇದನ್ನು ನಾನು ನೋಡಿದ್ದೇನೆ. ದಕ್ಷಿಣ ಕನ್ನಡ ಜಿಲ್ಲೆಯಿಂದ ಲಕ್ಷಾಂತರ ಜನರು ಶಿವಮೊಗ್ಗ ಜಿಲ್ಲೆಗೆ ಬಂದು ಇಲ್ಲಿ ತೋಟಗಳಲ್ಲಿ ಕೂಲಿ ಕೆಲಸ ಮಾಡಿ ಮತ್ತೆ ಮಳೆಬಂದಾಗ ತಮ್ಮ ಊರಿಗೆ ಅವರು ಹೋಗುತ್ತಿದ್ದಾರೆ; ಅಲ್ಲಿ ಬೇಸಾಯ ಮಾಡಲಕ್ಕೆ ಈ ದಿವಸವೂ ಕೂಡ ಈ ಘುಂಜೆಯಲ್ಲಿ ಕೂಡ ಅವರು ಆ ರೀತಿ ಬಂದು ಹೋಗುತ್ತಿದ್ದಾರೆ. ನಾನು ಅದನ್ನು ಕಣ್ಣಾರೆ ನೋಡಿದ್ದೇನೆ. ಇದನ್ನು ನಾವು ಮನವರಿಕೆ ಮಾಡಿಕೊಳ್ಳಬೇಕು, ಬೇಕಾದರೂ ವಿಚಾರ ಮಾಡಬಹುದು. ನಾವು ಈ ದಿವಸವೇ ಬೇಕಾದರೂ ದಕ್ಷಿಣ ಕನ್ನಡ ಜಿಲ್ಲೆಗೆ ಹೋಗೋಣ. ಅಲ್ಲ ನೋಡೋಣ. ಆ ಜನರ ಸ್ಥಿತಿಗತಿಗಳನ್ನು ನಾವು ಆ ಕನ್ನಡ ಜಿಲ್ಲೆಯ ಗೇಣಿದಾರರ ಬಗ್ಗೆ ಅಥವಾ..

ಅವರ ಪರವಾಗಿ ಹೇಳುವುದಾದರೆ ನಾನು ಧೈರ್ಯದಿಂದ ಹೇಳುತ್ತೇನೆ ಅಲ್ಲಿಯ ಗೇಣಿದಾರರು ಶೋಷಿತ ವರ್ಗದಲ್ಲಿ ಶೋಷಿತ ವರ್ಗ. ಅವನ ಮೈಮೇಲೆ ಕಾಪಿನ ಒಂದನ್ನು ಬಿಟ್ಟರೆ ಇನ್ನು ಏನೂ ಇರುವುದಿಲ್ಲ. ಹಾಗಿದ್ದರೂ ಅವನು ಕಾಲಕ್ಕೆ ಸರಿಯಾಗಿ ತನ್ನಲ್ಲಿರತಕ್ಕ ಅಕ್ಕಿಯ ಮುಡಿಯನ್ನು ಗಂಟುಕಟ್ಟಿಕೊಂಡು ಅದನ್ನು ತಲೆಯಮೇಲೆ ಹೊತ್ತುಕೊಂಡು ಜಮೀನುದಾರನ ಮನೆಗೆ ಹೋಗಿ ಮುಡಿಯಕ್ಕಿ ಗಂಟನ್ನು ಕೊಟ್ಟು ಧಣಿಯ ಪಾದಕ್ಕೆ ಬಿದ್ದು ಅವನು ತನ್ನ ಮನೆಗೆ ಹೋಗುತ್ತಿದ್ದಾನೆ. ಅದು ಇಲ್ಲಿಯವರೆಗೂ ನಡೆಯುತ್ತಿದ್ದದ್ದು ಹೀಗೆ. ಈಗ ಅದು ಬದಲಾಗಿದೆ. ಈ ದಿವಸ ಗೇಣಿದಾರ ಭೂಪಾಲಕನ ಮನೆಗೆ ಬರುವುದಿಲ್ಲ. ಭೂಪಾಲಕನೇ ಅವನ ಗುಡಿಸಿಲಿಗೆ ಹೋಗಿ ಅವನನ್ನು ಒದ್ದು ಹೊರಗೆ ಹಾಕಿ ಅವನನ್ನು ಬೈಯ್ದು ಹೊಡೆದು, ಅವನು ಮಾಡಿದ ಕಳ್ಳನ್ನು ಕುಡಿದು ಅವನ ಹೆಂಡ್ತಿ ಮಕ್ಕಳನ್ನೂ ಒದ್ದು ತನ್ನ ಮನೆಗೆ ಬಂದಿರತಕ್ಕದ್ದನ್ನು ನಾನು ನೋಡಿದ್ದೇನೆ. ಅದರಬಗ್ಗೆ ನಾನು ಕಣ್ಣೀರನ್ನು ಹಾಕಿದ್ದೇನೆ. ನಾನು ಅಲ್ಲಿ ಅಂದರೆ ದಕ್ಷಿಣ ಕನ್ನಡಜಿಲ್ಲೆಯಲ್ಲಿ ಪಾಣಿ ಮಂಗಳೂರು, ಬಂಟ್ವಾಳ, ಉಡುಪಿ, ಕುಂದಾಪುರ, ಬ್ರಹ್ಮಾವರ, ಪುತ್ತೂರು ಬೈಂದೂರು ಮತ್ತು ಕಾರ್ಕಳ ಇವೆಲ್ಲವನ್ನೂ ನೋಡಿದ್ದೇನೆ. ಹಿಂದೆ ಇಂದು ಮೈಸೂರು ಪ್ರದೇಶ ಕಾಂಗ್ರೆಸ್ಸಿನ ಅಧ್ಯಕ್ಷರಾಗಿರತಕ್ಕ ನಾಗಪ್ಪ ಅಳ್ವರವರು ಪಿ. ಎಸ್. ಪಿ. ಪಾರ್ಟಿಯಲ್ಲಿದ್ದರು. ಆಗ ಕೇರಳದಲ್ಲಿ ಪಟ್ಟಂ ತಾನು ಪಿಳ್ಳೆಯವರ, ಮುಖ್ಯಮಂತ್ರಿಗಳಾಗಿದ್ದರು. ಆಗ ನಾನೂ ಪಾಣಿಮಂಗಳೂರಿನಲ್ಲಿ ಭಾಷಣ ಮಾಡಿದ್ದೇನೆ. ಅಲ್ಲಿ ಆಗ ನಾಗಪ್ಪ ಅಳ್ವರಿದ್ದರು. ಅವರು ಪಿ. ಎಸ್. ಪಿ. ಪಕ್ಷದಲ್ಲಿದ್ದರು. ಹೀಗೆ ಕಾಲ ಬದಲಾಯಿಸುತ್ತಿದೆ. ಚಕ್ರನೇಮಿಕ್ರಮದಲ್ಲಿ ಮೇಲಿದ್ದವು ಕೆಳಕ್ಕೆ ಬರಲೇ ಬೇಕು. ಅದರಂತೆ ನಾವು ಈ ಕಾಲಚಕ್ರದಲ್ಲಿ ಸಿಕ್ಕಿಕೊಂಡು ಸುತ್ತುತಿರುಗುತ್ತಿದ್ದೇವೆ. ನಮಾಜದಲ್ಲಿ ಇಂದು ಇರತಕ್ಕ ಸ್ಥಿತಿಗತಿಗಳೂ ಹೀಗೇ ಇರುತ್ತವೆಂದು ಹೇಳುವುದಕ್ಕಾಗುವುದಿಲ್ಲ. ಹಾಗೆ ಯಾರಾದರೂ ನಂಬಿದ್ದರೆ ಅದು ಅವರ ಅಜ್ಞಾನ. ನಮಾಜದಲ್ಲಿ ಒಂದು ಕ್ರಾಂತಿಯುಂಟಾಗುವುದಕ್ಕೆ ಮೊದಲೇ ಎಚ್ಚೆತ್ತರ ಗೊಳ್ಳಬೇಕು. ಅದು ಜಾಣ್ಮೆ. ಹಾಗಿಲ್ಲದೆ ಸಮಾಜದಲ್ಲಿ ಒಂದು ದೊಡ್ಡ ಕ್ರಾಂತಿಯೆದ್ದಾಗ ಅದರಲ್ಲಿ ಸಿಕ್ಕಿಕೊಂಡು ಪ್ರಾಣಬಿಡುವುದು ಜಾಣ್ಮೆಯಲ್ಲ. ಈ ದಿವಸ ಅತ್ತಕಡೆ ಇರತಕ್ಕ ಕೆಲವು ಸದಸ್ಯರನ್ನು ಕೇಳಿದರೆ ಅಂದರೆ ನೀವು ಆಸ್ತಿಯನ್ನು ಬಿಡುತ್ತೀರೋ ಪ್ರಾಣವನ್ನು ಬಿಡುತ್ತೀರೋ ಎಂದು ಒಂದು ಪ್ರಶ್ನೆ ಹಾಕಿದರೆ ಅವರು ಆಸ್ತಿಯನ್ನು ಬಿಡುತ್ತೇವೆಂದು ಹೇಳಬಹುದು ಅನ್ನತಕ್ಕ ನಂಬಿಕೆ ನನಗಿದೆ. ಈ ದಿವಸ ಆಸ್ತಿವಂತರೆನಿಸಿಕೊಂಡವರೆಲ್ಲಾ ಆಸ್ತಿವಂತರಲ್ಲ. ತಮ್ಮ ಆಸ್ತಿ ಮತ್ತು ತಮ್ಮ ಪ್ರಾಣ ಈ ಎರಡರಲ್ಲಿ ಯಾವುದಂದರೊಂದನ್ನು ಆರಿಸಿಕೊಳ್ಳತಕ್ಕ ಕಾಲ ಬೇಗ ಬೇಗ ಬರುತ್ತಿದೆ, ಎಂದು ನನಗೆ ಅನಿಸುತ್ತಿದೆ. ನಾನು ಗ್ರಾಮಕನಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಆ ಕಾಲ ಹೆಜ್ಜೆಯ ಮೇಲೆ ಹೆಜ್ಜೆಯನ್ನು ಇಟ್ಟುಕೊಂಡು ಬೇಗ ಬೇಗ ಬರುತ್ತಿದೆ. ಅದನ್ನು ತಾವು ಗಮನಿಸದೆ ಏಳಂಬ ಮಾಡಿದ್ದೇ ಆದರೆ ಅಧಿಕಾರದಲ್ಲಿರತಕ್ಕ ಜನ ಅವರ ಅಧಿಕಾರಕ್ಕೂ ಪ್ರಾಣಕ್ಕೂ ದೊಡ್ಡ ಗಂಡಾಂತರವನ್ನು ತಂದುಕೊಳ್ಳುತ್ತಿದ್ದಾರೆಂದು ಹೇಳುತ್ತೇನೆ. ಜೂಲಿಯಸ್ ಸೀಜರನ ಕಥೆಯನ್ನು ತಾವೆಲ್ಲರೂ ಓದಿದ್ದೀರಿ. ಅಲ್ಲಿ ಬರತಕ್ಕ ಬ್ರೂಟಸ್ಸಿನ ನಂತರ ಅಂತೋಣಿ ಅನ್ನತಕ್ಕವನು ಭಾಷಣ ಮಾಡುತ್ತಾನೆ. ಅವನು ಭಾಷಣಮಾಡತಕ್ಕ ಕಾಲದಲ್ಲಿ ಜನರು ಎದ್ದೆದ್ದು ತಮ್ಮ ಮನೆಗಳಿಗೆ ಹೋಗುತ್ತಾರೆ. ಹಾಗೆ ಜನರು ಮನೆಗಳಿಗೆ ಹೋಗುತ್ತಿದ್ದ ಕಾಲದಲ್ಲಿ ಆ ದಂಗೆಕೋರರ ಕೈಗೆ ಒಬ್ಬ ಸಿನ್ನ ಎನ್ನತಕ್ಕವನು ಸಿಕ್ಕಿಬೀಳುತ್ತಾನೆ. ಅವನು ನನ್ನಂಥ ಒಬ್ಬ ಬಡವ. ಆಗ ಅಲ್ಲಿದ್ದ ಜನರು ಅವನು ಕೈಗೆ ಸಿಕ್ಕಿದ್ದಾನೆ ಹೊಡೆಯಿರಿ ಎಂದರು. ಆಗ ಅವನು "I am not conspirator Sinha; I am poet Sinha." Then he said: "You may be conspirator Sinha or poet Sinha; We want to kill you." Instantaneously he was killed. ಜನರು ದಂಗೆ ಎದ್ದಾಗ ಯಾರು ಒಳ್ಳೆಯವರು ಯಾರು ಕೆಟ್ಟವರು ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಆದುದರಿಂದಲೇ ಹಿಂದೆ ಪಂಜಾಬಿನಲ್ಲಿ ಜನರು ದಂಗೆ ಎದ್ದಾಗ ಮೂರು ಜನರು ಒಂದು ಖಾದೀ ಅಂಗಡಿಯಲ್ಲಿ ಕುಳಿತಿದ್ದರಂತೆ ಅವರನ್ನು ಆ ಅಂಗಡಿ ಮುಚ್ಚುವಂತೆ ಹೇಳಿದರೆ ಅವರು ಕೇಳಲಿಲ್ಲ. ಅವರು ಅಂಗಡಿಯನ್ನು ಬಂದ್‌ಮಾಡುವುದಿಲ್ಲ ಎಂದು ಹೇಳಿ ಅಲ್ಲೇ ಕುಳಿತರಂತೆ ಹಾಗಾದರೆ ನೀವು ಇಲ್ಲೇ ಕುಳಿತುಕೊಳ್ಳುತ್ತೀರಾ ಎಂದು ಹೇಳಿ ಆ ಜನರು ಹೋಗಿ ಒಂದು ಡಬ್ಬ ಚಿಮಣಿ ಎಣ್ಣೆಯನ್ನು ತಂದು ಅದನ್ನು ಆ ಅಂಗಡಿಗೆ ಸುರಿದು ಒಂದು ಬೆಂಕಿಕಡ್ಡಿಯನ್ನು ಗೀಚಿಟ್ಟರಂತೆ. ಆಗ ಅಲ್ಲಿದ್ದ ಆ ಮೂರು ಜನಗಳೂ ಮತ್ತು ಖಾದಿ ಅಂಗಡಿ ಎಲ್ಲವೂ ಬೂದಿಯಾಯಿತಂತೆ ಅನಂತರ ಅಲ್ಲಗೆ ಪೋಲೀಸರು ಬಂದು ನೋಡಿದರಂತೆ ಇದಿನ್ನೂ ಮೊನ್ನೆ ಮೊನ್ನೆ ನಡೆದ ಕಥೆ. ಇದನ್ನು ತಾವು ಅಳವೆ ಅಚೆಗೆ ಕಪ್ಪುಕಡಲೆ ಅಂತ, ...

ಶ್ರೀ ಚಿಕ್ಕೇಗೌಡ (ಗುಬ್ಬಿ).—ಮಾನ್ಯ ಸದಸ್ಯರು ವಿಷಯವನ್ನು ಅಂಕಿ ಅಂಶಗಳ ಸಮೇತ ಬಹಳ ಸೊಗಸಾಗಿ ಹೇಳುತ್ತಿದ್ದಾರೆ. ಕೇಳುತ್ತಿದ್ದರೆ ಬಹಳ ಇಂಪಾಗಿದೆ. ಅವರು ಹೇಳುತ್ತಿರುವುದಕ್ಕೆ ಸ್ವಲ್ಪ ವಾದ್ಯದವರನ್ನು ಜೊತೆ ಮಾಡಿದ್ದರೆ ಇನ್ನೂ ಕೇಳುವುದಕ್ಕೆ ಬಹಳ ಆನಂದವಾಗುತ್ತಿತ್ತಲ್ಲವೇ ?

ಶ್ರೀ ಎಸ್. ಗೋಪಾಲಗೌಡ.—ನಾನೇನು ಇಲ್ಲಿ ಶಂಬಾವಾದ್ಯ ಮಾಡುತ್ತಿದ್ದೇನೆಂದು ಅವರು ಭಾವಿಸಿದ್ದಾರೋ! ಅವರು ನನ್ನ ಭಾಷಣವನ್ನು ಕೇಳಿದಿದ್ದರೂ ಚಿಂತೆಯಿಲ್ಲ. ಉಪಾಧ್ಯಕ್ಷರಾದರೂ ಕೇಳುತ್ತಿದ್ದಾರೆಂದರೆ ಅಷ್ಟೇ ಸಾಕು. ನನಗೇನೂ ವಾದ್ಯ ಬೇಕಿಲ್ಲ. ಆ ಮಾನ್ಯ ಸದಸ್ಯರಿಗೇ ಚಟ್ಟ ಬೇಕೇನೋ ಕೊಡಲಿ .....

ಉಪಾಧ್ಯಕ್ಷರು.—ತಾವು ಮೂರು ಗಂಟೆಗಳ ಕಾಲಾವಕಾಶ ಬೇಕೆಂದು ಕೇಳಿದ್ದೀರಿ. ಈಗ ಮೂರು ಗಂಟೆ ಮುಗಿದು ಮೇಲೆ 15 ನಿಮಿಷ ಆಗಿದೆ. ಆದ್ದರಿಂದ ತಾವು ಬೇಗ ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಅಜೀಜ್ ಸೇಟ್.—ಇದು ಬಹಳ ಪ್ರಾಮುಖ್ಯವಾದ ವಿಷಯ ಮಾತನಾಡಲಿ, ಬಿಡಿ.

ಶ್ರೀ ಎಸ್. ಗೋಪಾಲಗೌಡ.—ಹಿಂದೆ ಈ ಭೂಕಂದಾಯವನ್ನು ಅಕ್ರಮವಾಗಿ ವಸೂಲ್ಮಾಡತ್ತಿದ್ದಾರೆಂದು ನಾವು ದೂರಗಳನ್ನು ಹೇಳಿದಾಗ ಸರ್ಕಾರದವರು ಈ ಮಸೂದೆಗೆ ಒಂದು ಸಮಗ್ರ ತಿದ್ದುಪಡಿಯನ್ನು ತರುವುದಾಗಿ ಹೇಳಿದ್ದರು. ಈ ಸರ್ವೆ ಅಂಡ್ ಸೆಟಲ್‌ಮೆಂಟ್ ಕಾನೂನಿನ ಪ್ರಕಾರ ಒಂದಾವರ್ತಿ ನಿಗದಿ ಮಾಡಿದ ಕಂದಾಯವನ್ನು 30 ವರ್ಷಗಳು ಕಳೆಯುವ ತನಕ ಬದಲಾವಣೆ ಮಾಡುವುದಿಲ್ಲ ಎಂಬ ಭರವಸೆಯನ್ನೂ ಕೂಡ ಕೊಡಲಾಗಿತ್ತು, ಆದರೆ ಇನ್ನು ಈ ಧಾರಣಿವಾಸಿಗಳ ಬಗ್ಗೆ ಕೇಂದ್ರ ಸರ್ಕಾರವಾಗಲಿ ಅಥವಾ ರಾಜ್ಯ ಸರ್ಕಾರಗಳಾಗಲಿ ಒಂದು ಥೋರಣೆಯನ್ನು ತಾಳುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದವರು ಈ ದಿನ ಸರ್ಕಾರದವರ ನೆರವು ಯಾವ ರೀತಿಯಲ್ಲೂ ಇಲ್ಲದೆ ರೈತನು ಬೆಳೆದ ರಾಗಿ ಜೋಳ ನೆಲಗಡಲೆ ಇತ್ಯಾದಿ ಬೆಳೆಗಳಿಗೆ ತಜ್ಞರ ಮುಖೇನ ಬೆಲೆಯನ್ನು ನಿಗದಿ ಮಾಡಿಸಿ, ಅದನ್ನು ವಸೂಲ್ಮಾಡುವುದಕ್ಕಾಗಿ ಸರ್ಕಾರದವರು ಈಗ ಬೆಳೆಗಾರನ ಮನೆಯನ್ನು ನುಗ್ಗಿ ಅವರಿಂದ ದುಬಾರಿ ಕಂದಾಯವನ್ನು ವಸೂಲ್ಮಾಡುತ್ತಿದ್ದಾರೆ.

5-30 P.M.

ನೀವು ನಮಗೆ ಸರಿಯಾದ ಬೆಲೆಯನ್ನು ಕೊಡುತ್ತೇವೆಂದು ಭರವಸೆ ಕೊಟ್ಟರೆ ನಿಮಗೆ ಬೇಕಾದ ದವನ ಧಾನ್ಯಗಳನ್ನು ತಂದುಕೊಡುತ್ತೇವೆ. ಅಡಿಕೆಗೆ ಮಣ ಒಂದಕ್ಕೆ 100 ರೂಪಾಯಿಗಳನ್ನು ಕೊಡುತ್ತೀರಾ? ಬತ್ತಕ್ಕೆ ಮಾರ್ಕೆಟ್ಟಿನಲ್ಲಿರುವ ಬೆಲೆಯನ್ನು ಕೊಡಿಸುತ್ತೀರಾ? ರಾಗಿಗೆ ಈಗಿನ ಬೆಲೆಯನ್ನು ಕೊಡಿಸುತ್ತೀರಾ? ನೀವು ಧಾರಣೆ ನೀತಿಯಲ್ಲಿ ಹೋಲ್ಡ್ ದಿ ಪ್ರೈಸ್ ಲೈನ್ ಎಂದು ಏನು ಪಾದ ಹೂಡಿದ್ದೀರಿ, ಅದನ್ನು ಹೇಳಿಕೊಂಡು ಮೇಲೆ ಹೋದಿರೇ ಹೊರತು ಪ್ರೈಸ್ ಲೈನ್ ಕೆಳಗೆ ಬರಲಿಲ್ಲ. ಸರ್ಕಾರದವರು ಏನು ನೀತಿಯನ್ನು ತೀರ್ಮಾನ ಮಾಡಿದರೋ, ಆ ನೀತಿ ಪ್ರಕಾರ ಸುಗ್ಗಿ ಆದ ನಂತರ ಬೆರೆ ಬದ್ದು ಹೋಗುವುದು, ಅನಂತರ ಬೆರೆ ಏರುವುದು ಸ್ವಲ್ಪ ಮಟ್ಟಿಗೆ ಕಡಿಮೆ ಆಯಿತು ಎಂದು ಹೇಳಬಹುದು. ಕಳೆದ ವರ್ಷ ಪಂಜಾಬು ಮಾರ್ಕೆಟ್ಟಿನಲ್ಲಿ ಸರ್ಕಾರ ನಿರ್ಧಾರ ಮಾಡಿದ ಬೆಲೆಗಿಂತ ಗೋಧಿ ಬೆರೆ ಕಡಿಮೆಯಾಗಿತ್ತು. ಆಹಾರ ಕಾರ್ಪೊರೇಷನ್ನಿನವರು ಹೋಗಿ ಗೋಧಿಯನ್ನು ಕೇಳದೇ ಇದ್ದರೆ ಕಷ್ಟಪಟ್ಟು ಬೆಳೆದಂಥ ರೈತರ ಮನೆಗಳು ದಿವಾಳಿಯಾಗುತ್ತಿತ್ತು. ಇವತ್ತು ಅಡಿಕೆ ಫಸಲು ಬೆಳೆಯುತ್ತಾರೆ. ತಾಯ್‌ಜುಂಗ್ ಬತ್ತ ಬೆಳೆಯುತ್ತಾರೆ. ಹೈಬ್ರಿಡ್ ಜೋಳ ಬೆಳೆಯುತ್ತಾರೆ. ಆ ರೀತಿ ಬೆಳೆಯುವಾಗ ಗೊಬ್ಬರಕ್ಕೆ ಮತ್ತು ಬೀಜಕ್ಕೆ ಸಾಲ ಮಾಡಿರುತ್ತಾರೆ. ಸೊಸೈಟಿಯಲ್ಲಿಯೂ ಸಾಲ ಮಾಡಿರುತ್ತಾರೆ. ಆದ್ದರಿಂದ ಈ ಎಲ್ಲ ಅಂಶಗಳನ್ನು ಗಣನೆಗೆ ತೆಗೆದು ಕೊಳ್ಳುವುದು ಬಹಳ ಅಗತ್ಯವಾಗಿದೆ. ಸೆಟಲ್‌ಮೆಂಟ್ ಅಧಿಕಾರಿಗಳು ಚೆನ್ನಾಗಿ ಬೆರೆ ಬರುತ್ತದೆಂದು ಹೇಳುತ್ತಿದ್ದಾರೆ. ಆದರೆ 1930ರಿಂದ 1936ರ ತನಕ ಬೆರೆಗಳ ಪರಿಸ್ಥಿತಿ ಏನೇನಾಗಿತ್ತು, ಎರಡನೇ ಮಹಾಯುದ್ಧ ಆರಂಭವಾಗುವವರೆಗೂ ಬೆರೆಗಳು ಬದ್ದುಹೋಗಿ ಕಂದಾಯ ಕೊಡರಾರದೆ ಎಷ್ಟೋ ಭೂಮಿಗಳು ಹರಾಜು ಆದವು. ಸಾಲಕ್ಕೆ ಎರ್ಲಾ ಬೆಳೆಯನ್ನೂ ಮಾರಾಟಮಾಡಿದರೂ ಕೊಡರಾರದೆ ಬಡ್ಡಿಗಾಗಿ ಎರ್ಲಾ ಆಸ್ತಿಪಾಸ್ತಿಗಳನ್ನು ಸಾಲ ಕೊಟ್ಟವರಿಗೆ ಕೊಟ್ಟು ಕೈತೊಳೆದು ಕೊಂಡಿದ್ದರು, ಇನ್ನು 30 ವರ್ಷಗಳವರೆಗೆ ಅಂತಹ ಪರಿಸ್ಥಿತಿ ಬರುವುದಿಲ್ಲ, ರೈತರಿಗೆ ಈಗ ದೊರೆಯುವಷ್ಟು ಬೆರೆಯನ್ನು, ಅವರು ಬೆಳೆದಂಥ ಪದಾರ್ಥಗಳಿಗೆ ಕೊಡುತ್ತೇವೆಂದು ಹೇಳಿದ್ದಿರಾ? ಒಂದು ಮಣ ಅಡಿಕೆಗೆ ಎಷ್ಟು ಬೆಲೆಯಾಗುತ್ತದೆಂದು ಕಂಡುಹಿಡಿದು, ಅವನಿಗೆ ನೆಟ್ ಇನ್‌ಕಂ ಎಷ್ಟು ಬರುತ್ತದೆಯೋ ಅದನ್ನು ಸ್ಯೆಂಟಿಫಿಕ್ಕಾಗಿ ಕಂಡುಹಿಡಿದು ಕೆಲಸಮಾಡುತ್ತೇವೆಂಬ ಭರವಸೆಯನ್ನು ಈ ಮಸೂದೆ ಪಾಸ್ ಆಗುವುದಕ್ಕೆ ಮುಂಚೆ ಕೊಡುವುದಕ್ಕೆ ನೀವು ಸಿದ್ಧರಿದ್ದೀರಾ? ಬೆಲೆಯ ಆಧಾರದ ಮೇಲೆ ನೀವು ಕಂದಾಯ ನಿರ್ಧಾರಮಾಡಿದ್ದೀರಿ. ಕಾಫಿ ಬೆರೆ ಏನಿದೆಯೋ ಅದರ ಆಧಾರದ ಮೇಲೆ ಚಿಕ್ಕಮಗಳೂರಿನಲ್ಲಿ ಜಮೀನಿಗೆ ಕಂದಾಯ ತೀರ್ಮಾನಮಾಡಿದ್ದೀರಿ. ಕಾಫಿ ಬೆರೆ ಇಳಿಯುವುದಿಲ್ಲ, ಬತ್ತದ ಬೆರೆ ಇಳಿಯುವುದಿಲ್ಲ. ಏಲಕ್ಕಿ ಬೆಳೆ ಇಳಿಯುವುದಿಲ್ಲ, ಅಡಿಕೆ, ಬೆರೆ ಇಳಿಯುವುದಿಲ್ಲ, ರಾಗಿ

ಬೆಲೆ ಇಳಿಯುವುದಿಲ್ಲ. ಜೋಳದ ಬೆಲೆ ಇಳಿಯುವುದಿಲ್ಲವೆಂದು ಭರವಸೆ ಕೊಡುತ್ತೀರಾ? ಇದಕ್ಕೆ ಕೇಂದ್ರಸರ್ಕಾರ ಭರವಸೆ ಕೊಡಬೇಕು. ಇಲ್ಲವಿದ್ದರೆ ನೀವು ಈ ಮನೆಯ ಆಚೆ ಹೋಗಬೇಕು. ನಿಮ್ಮ ಬೆಳೆಯನ್ನು ಏಮೇೀಮಾಡಿ, ನಾವು ಹಣ ಕೊಡುತ್ತೇವೆಂಬ ಆಶ್ವಾಸನೆಯನ್ನು ರೈತರಿಗೆ ಕೊಡಬೇಕು. ಯಾರೋ ಒಬ್ಬರು ಕಬ್ಬು ಬೆಳೆದು ಅದಕ್ಕೆ ಒಳ್ಳೆಯ ಬೆಲೆ ಬಂದಿದೆ ಎಂದು ಎಲ್ಲರೂ ಕಬ್ಬು ಹಾಕಿದರು. ಈಗ ಒಂದು ಕ್ವಿಂಟಾಲಿಗೆ 65 ರೂಪಾಯಿಗಳು ಬಂದಿವೆಯೆಂದು ಮಾನ್ಯ ಶ್ರೀ ಚನ್ನೇಗೌಡರು ಹೇಳುತ್ತಿದ್ದಾರೆ. ಸಕ್ಕರೆಗೆ ಪಾಂಡವಪುರಕ್ಕೆ ಒಂದು ದರ, ಮಂಡ್ಯಾಕ್ಕೆ ಒಂದು ದರ, ಗೌರಿಬಿದನೂರಿಗೆ ಒಂದು ದರ, ಕಂಪ್ಲಿಗೆ ಒಂದು ದರ, ಉತ್ತರ ಪ್ರದೇಶಕ್ಕೆ ಒಂದು ದರ, ದಕ್ಷಿಣಪ್ರದೇಶಕ್ಕೆ ಒಂದು ದರ—ಹೀಗೆ ಮನಸ್ಸಿಗೆ ಬಂದಂತೆ ದರಗಳನ್ನು ನಿಗದಿಮಾಡುವ ಉದ್ದೇಶವಾದರೂ ಏನು! ಇದನ್ನು ಸಕ್ಕರೆ ಸ್ಟಾಕ್ ಆಧಾರದ ಮೇಲೆ ಗೊತ್ತುಮಾಡುತ್ತೀರೋ, ಅಥವಾ ರಾಜಕೀಯ ಆಧಾರದ ಮೇಲೋ ಅಥವಾ ಜಮೀನಿನ ಫರ್ಟಿಲಿಟಿ ಆಧಾರದ ಮೇಲೆ ಗೊತ್ತು ಮಾಡುತ್ತಿರೋ? ಮಲೆನಾಡಿನಲ್ಲಿ ನಾನು ನೋಡಿದ್ದನ್ನು ಇಲ್ಲಿ ಬಹಳ ವ್ಯಥೆಯಿಂದ ಹೇಳಬೇಕಾಗಿದೆ. ಅಲ್ಲಿ ವಿಶೇಷವಾಗಿ ಮಳೆಯಾಗಿ ಅಲ್ಲಿನ ಜಮೀನೆರ್ಲಾ ನಿಸ್ಸಾರವಾಗಿದೆ. ಸಾರವೇ ಇಲ್ಲ. ಒಂದು ದಿವಸ ಮಳೆ ಹೋದರೆ ಎರಡನೇ ದಿವಸ ಅದನ್ನು ಉಳುಮೆ ಮಾಡುವುದಕ್ಕಾಗುವುದಿಲ್ಲ. ಭೂಮಿ ಅಷ್ಟು ಗಟ್ಟಿಯಾಗಿರುತ್ತದೆ. ರ್ಯಾಟರೈಟ್ ಸಾಯಿಲ್ ಇದೆ. ಅಲ್ಲಿಯೂ ಕೂಡ ತರೀ ಜಮೀನಿಗೆ 70–80 ರೂಪಾಯಿಗಳ ಕಂದಾಯ ಹಾಕಿದ್ದಾರೆ. ನಮ್ಮ ಸ್ನೇಹಿತರ ಹುಡುಗನನ್ನು ಕೇಳಿದೆ. ಹಿಂದೆ 60 ರೂಪಾಯಿಗಳಷ್ಟು 2–3 ಎಕರೆಗೆ ಕಂದಾಯವನ್ನು ಹಾಕಿದ್ದರು. ಅವನನ್ನು ಇವತ್ತು 620 ರೂಪಾಯಿಗಳಷ್ಟು ಕಂದಾಯ ಕೊಡುವ ಸ್ಥಿತಿಗೆ ತಂದಿದ್ದೀರಿ. ನೀವು ಐದಾರು ವರ್ಷಗಳದ್ದು ಒಟ್ಟಿಗೆ ಕೊಡಬೇಕೆಂದರೆ ಅವನು ಜಮೀನು ಆಸ್ತಿಯನ್ನೆರ್ಲಾ ಹರಾಜುಮಾಡಬೇಕಾಗಿದೆ. ತೋಟ ಫಸಲುಮಾಡಬೇಕಾದರೆ ಸುಮಾರು 12 ವರ್ಷಗಳ ಕಾಲ ಮೆಹನತ್ ಮಾಡಬೇಕಾಗುತ್ತದೆ. ಗೊಬ್ಬರ ಹಾಕಬೇಕಾದರೆ ಸಾಲ ಮಾಡಿ ತರಬೇಕಾಗುತ್ತದೆ. ಅಡಿಕೆ ಸಸಿ ನೆಡುವ ಮುಂಚೆಯೇ ಬಾಗಾಯಿತು ಜಮೀನು, ಯಾವ ಹಣ್ಣನ್ನು ನೆಡುವ ಮುಂಚೆಯೇ ಬಾಗಾಯಿತು, ಯಾವ ನೀರು ಬಂದರೂ ತರೀ ಜಮೀನು, ತಲಪರಿಗೆ ನೀರು ಬಂದರೂ ತರೀ ಜಮೀನು, ಅಣೆಕಟ್ಟಿನ ನೀರು ಬಂದರೂ ತರಿ, ಬಂಜರಾಗಿ ಜಾಲ ಮರ ಬೆಳೆದರೂ ಖುಷ್ಕಿ, ಅಲೂಗೆಡ್ಡೆ ಬೆಳೆದರೂ ಖುಷ್ಕಿ ಅಂದರೆ, ಅದಕ್ಕೆ ಯಾವ ಒಂದು ಪ್ಯೆಜ್ಞಾನಿಕ ಹಿನ್ನೆಲೆ ಇದೆ? ನೀವು ನವಂಗೆ ಬರತಕ್ಕಂಥ ಉತ್ಪಾದನೆಗೆ ಈಲ್ಡ್ ಎಂದು ಏನು ಹೇಳುತ್ತೀರಿ, ಅದಕ್ಕೆ ನೀವು ಹೊಣೆ ಇರಬೇಕು. ಒಂದು ವೇಳೆ ಬೆಳೆ ಹೋದರೆ ಕ್ಲಾಸಿಫಿಕೇಷನ್ ಪುನರ್ವಿಮರ್ಶೆ ಮಾಡುವ ಹೊಣೆಯನ್ನು ನೀವು ಹೊರಬೇಕು. ಅದು ಒಂದೆರಡು ವರ್ಷಗಳಲ್ಲಿ ಆಗುವುದಿಲ್ಲ. ಆಗ ಯಾವ ರೈತನನ್ನೂ ನೀವು ಕೋರ್ಟಿಗೆ ಕರೆಯುವಂತೆ ಮಾಡುವುದಿಲ್ಲ. ನಾವೇ ಅವನ ಮನೆಗೆ ಹೋಗಿ ಭೂಸುಧಾರಣೆಯ ವಿಷಯದಲ್ಲಿ, ಕಂದಾಯದ ವಿಷಯದಲ್ಲಿ ತೀರ್ಮಾನವನ್ನು ಕೊಡುತ್ತೇವೆ, ನ್ಯಾಯಾಧೀಶರನ್ನು ಕಳುಹಿಸಿದರೆ, ಅದರಲ್ಲಿಯೂ ಒಬ್ಬಬ್ಬರು ದೊಡ್ಡವರು ಇದ್ದರೆ, ಅವರಿಗೆ ಪುರುಸತ್ತು ಇದ್ದರೆ, ನೀವೇ ಹೋಗುತ್ತೇವೆಂದು ಹೇಳುತ್ತೀರಿ. ಈ ಒಂದು ತಿದ್ದುಪಡಿಯಿಂದ ಲಿಟಿಗೇಷನ್ನಿಗೆ ಅವಕಾಶವಾಗುತ್ತದೆ. ಪ್ರತಿಯೊಬ್ಬನ ಕಂದಾಯದ ವಿಷಯದಲ್ಲಿಯೂ, ಜಮೀನು ಖುಷ್ಕಿಯೇ, ಬಾಗಾಯಿತೇ ಎನ್ನುವ ವಿಷಯದಲ್ಲಿಯೂ ವಿವಾದಾಸ್ಪದಕ್ಕೆ ಎಡೆಕೊಟ್ಟು ಅವನು ಕೋರ್ಟಿಗೆ ಹೋಗಬೇಕೆಂದರೆ, ಅವನ ಮನೆ ಹಾಳಾಗುತ್ತದೆ. ಈ ಸ್ಥಿತಿಗೆ ಅವನನ್ನು ತಂದಿದ್ದೀರಿ. ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲನೆಮಾಡಬೇಕು. ನಾನು ಈಗ ವಿಶೇಷವಾಗಿ ಕಾಂಗ್ರೆಸ್ ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಒಂದು ವಿಷಯದಲ್ಲಿ ಮಾತ್ರ ಈ ಸಭಾನಾಯಕರಿಗೆ ಅಂದರೆ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳಬೇಕು. ಇದು ಪಕ್ಷದ ವಿಚಾರವಲ್ಲ. ಇದು 30 ವರ್ಷಗಳು ರೈತರು ಕೊಡಬೇಕಾದ ಕಂದಾಯದ ವಿಷಯ. ಜೊತೆಗೆ ವಾಟರ್ ರೇಟ್ ಇದೆ. ಬೆಟರ್‌ಮೆಂಟ್ ಲೆವಿ ಇದೆ. ಇನ್ನೂ ನಾನಾ ರೀತ್ಯ ಸೆಸ್‌ಗಳಿವೆ. ಇದರಿಂದ ರೈತರಿಗೆ ತೊಂದರೆಯಾಗುತ್ತದೆ. ಮುಂದೆ ಅವನ ಸ್ಥಿತಿ ಉತ್ತಮವಾಗುವುದಕ್ಕೆ ಕಲ್ಲು ಹಾಕುತ್ತೀರಿ ಎಂಬ ಮಾತನ್ನು ನಾನು ತಿಳಿಸುತ್ತಿದ್ದೇನೆ. ಮುಂದೆ ಯಾವ ಭಾಗದಲ್ಲಿಯೂ ಯಾವ ಅಡ್ಡಿ ಆತಂಕಗಳಿಲ್ಲದೆ ಈ ಮನುಷ್ಯನನ್ನು ನಿರ್ಬಿಕಲ್ಪ ಬುದ್ಧಿಯಿಂದ, ಒಳ್ಳೆಯ ಮನಸ್ಸಿನಿಂದ ನಿಷ್ಪಕ್ಷಪಾತವಾಗಿ ಪರಿಶೀಲನೆಮಾಡುವುದಕ್ಕೆ ಈ ಸಭೆಯಲ್ಲಿ ಮಾನ್ಯ ಕಾಂಗ್ರೆಸ್ ಸದಸ್ಯರಿಗೆ ಅವಕಾಶ ಕಲ್ಪಿಸಿಕೊಡಬೇಕು. ದೊಡ್ಡ ಮನಸ್ಸು ಮಾಡಬೇಕು. ಈ ಕಂದಾಯವನ್ನು ವಜಾ ಮಾಡುವುದಾದರೆ ಕಾಂಗ್ರೆಸ್ ಜಮೀನ್ದಾರರಿಗೆ ಮಾತ್ರ ವಿನಾಯ್ತಿ ಆಗುವುದಿಲ್ಲ. ರಾಜ್ಯದಲ್ಲಿರತಕ್ಕ ಎರ್ಲಾ ರೈತರಿಗೂ ಕಂದಾಯದ ವಿನಾಯ್ತಿಯಾಗುತ್ತದೆ. ಇಷ್ಟು ಹೇಳಿ ನನಗೆ ಮಾತನಾಡುವುದಕ್ಕೆ ಬಹಳ ಹೊತ್ತು ಅವಕಾಶ ಕೊಟ್ಟಂಥಾ ಮಾನ್ಯ ಅಧ್ಯಕ್ಷರಿಗೂ, ಮಾನ್ಯ ವಿರೋಧಪಕ್ಷದ ನಾಯಕರಿಗೂ, ಮಾನ್ಯ ಸದಸ್ಯರಿಗೂ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ. ಈ ಸಭೆಯಲ್ಲಿ ಕುಳಿತುಕೊಂಡು

(ಶ್ರೀ ಎಸ್. ಗೋಪಾಲಗೌಡ)

ಮಾತನಾಡುವುದು ನಮ್ರತೆಯ ವಿಷಯವಲ್ಲ. ನನ್ನ ಆರೋಗ್ಯ ಕೆಟ್ಟಿರುವುದರಿಂದ ನಾನು ಕುಳಿತುಕೊಂಡು ಮಾತನಾಡುವುದು ಅನಿವಾರ್ಯವಾಯಿತು. ಮತ್ತು ಬಹಳ ಉದ್ದವಾಗಿ ಮಾತನಾಡತಕ್ಕದ್ದು ಕೂಡ ಈ ಸಭೆಗೆ ತಕ್ಕುದಲ್ಲ. ಈಗ ನಾನು ಮಾಡಿದಂತಹ ಭಾಷಣ ಏನಿದೆ ಅದು ಈ ಸಭೆಯಲ್ಲಿ ಬಹಿರಂಗವಾಗಿ ಮಾಡುವಂಥಾ ಭಾಷಣವಾಗಬಾರದಾಗಿತ್ತು. ಇಷ್ಟು ಹೇಳಿ ಮಾನ್ಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಿಗೂ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್ (ನಾಗರ).—ಮಾನ್ಯ ಉಪಾಧ್ಯಕ್ಷರೇ, ರಾಜ್ಯದ ರಾಜಸ್ವ ಮಂತ್ರಿಗಳು ಈ ಸಭೆಯಮುಂದೆ ಮಂಡಿಸಿರತಕ್ಕಂಥ ಮೈಸೂರು ರಾಜ್ಯದ ಭೂಕಂದಾಯಕ್ಕೆ ಸಂಬಂಧಿಸಿದ (ಎರಡನೆಯ ತಿದ್ದುಪಡಿಯ) ವಿಧೇಯಕ, 1969; ಈ ಮಸೂದೆಯನ್ನು ತಂದಿರತಕ್ಕಂಥ ಹಿನ್ನೆಲೆ ಈ ಸಭೆಗೆ ಬಹುಶಃ ಈ ಸಭೆಯ ನಡವಳಿಕೆಗಳ ಬಗ್ಗೆ ಜಾಗ್ರತರಾಗಿತಕ್ಕ ಈ ರಾಜ್ಯದ ಎರ್ಲಾ ಜನತೆಗೂ ಗೊತ್ತಿದೆ. ಈ ಹಿನ್ನೆಲೆಯಿಂದ ಯೋಚನೆಮಾಡಿ ಮಸೂದೆ ಸಭೆಗೆ ಬಂದಾಗ ಒಮ್ಮತದಿಂದ ಪಾಸಾಗುತ್ತದೆ ಎಂದು ನಾವು ನಿರೀಕ್ಷಣೆ ಇಟ್ಟುಕೊಂಡಿದ್ದೆವು. ಆದರೆ ಅದು ಆ ರೀತಿ ಆಗದೇ ಸಂಪೂರ್ಣವಾಗಿ ಇದಕ್ಕೆ ಭಾರಿ ಪ್ರಮಾಣದಲ್ಲಿ ತಪ್ಪುರುದ್ಧವಾಗಿರತಕ್ಕದ್ದು ಬಹಳ ಶೋಚನೀಯವನ್ನುಂಟುಮಾಡಿರತಕ್ಕ ವಿಚಾರ. ಈ ಭೂಕಂದಾಯಕ್ಕೆ ಸಂಬಂಧಪಟ್ಟಹಾಗೆ ಒಂದು ಸಮಗ್ರವಾದ ತಿದ್ದುಪಡಿ ಮಸೂದೆಯನ್ನು ಸರ್ಕಾರದವರು ತರುತ್ತೇವೆಂದು ಹೇಳಿದ್ದರು. ಆದರೆ ಈಗ ಸಮಗ್ರವಾದ ತಿದ್ದುಪಡಿ ಮಸೂದೆಯನ್ನು ತಂದಿದ್ದಾರೆಯೇ ಸಮಗ್ರವಾದ ಮಸೂದೆ ಎಲ್ಲಿದೆ ಎಂದು ಮಾನ್ಯ ಹಿರಿಯ ಸದಸ್ಯರಾದ ಶ್ರೀವಾನ್ ಗೋಪಾಲಗೌಡರು ಬಹಳ ಪ್ರಬಲವಾಗಿ ವಾದ ಮಾಡಿ ಮಾತನಾಡಿದ್ದಾರೆ. ನನಗೆ ಗೊತ್ತಿರುವ ಹಾಗೆ ಸಮಗ್ರವಾದ ಕಾಯಿದೆಯನ್ನು ತರುತ್ತೇವೆ ಎಂದು ಸರ್ಕಾರದವರು ಭರವಸೆಯನ್ನು ಕೊಟ್ಟಿರಲಿಲ್ಲ. ಈಗ ಒಂದು ಕಾಂಪ್ರಹೆನ್ಸಿವ್ ಅಮೆಂಡ್‌ಮೆಂಟ್ ಬಿಲ್ಲನ್ನು ಈ ಸಭೆಯಮುಂದೆ ಇಟ್ಟಿದ್ದಾರೆ. 'It is not a comprehensive Bill with any number of amemdments, but it is a Bill with comprehensive amemdments.' ಸಮಗ್ರ ಎನ್ನತಕ್ಕಂಥ ಶಬ್ದದ ಹಿನ್ನೆಲೆಯನ್ನೂ ಕೂಡ ದಯವಿಟ್ಟು ಗಣನೆಗೆ ತೆಗೆದುಕೊಳ್ಳಬೇಕು, ಈಗ ಹಿಂದಿನ ಅಧಿವೇಶನದಲ್ಲಿ ವಿರೋಧಪಕ್ಷದ ಮಾನ್ಯ ಸದಸ್ಯರಾದ ಶ್ರೀವಾನ್ ನಂಜೇಗೌಡರು ಒಂದು ತಿದ್ದುಪಡಿ ಮಸೂದೆಯನ್ನು ಈ ಸಭೆಯ ಪರಿಶೀಲನೆಗೆ ತಂದಿದ್ದರು. ಅದರಲ್ಲಿ ಒಂದು ತಿದ್ದುಪಡಿಯನ್ನು ಸೂಚಿಸಿದ್ದಾರೆ. ಅದು ಅ ಮಸೂದೆಯ ಸ್ಟೇಟ್‌ಮೆಂಟ್ ಅಂಡ್ ಆಬ್ಜೆಕ್ಟ್ಸ್ ಅಂಡ್ ರೀಜನ್ಸ್‌ನಲ್ಲಿ ಈ ರೀತಿ ಹೇಳಿದ್ದಾರೆ: "Classification of survey was done before the promulgation of the Mysore Land Revenue Act, 1964. The reclassification of the soil and the assessment in some areas has been arbitrary. Therefore, it is considered necessary that the State Government shall be vested with inherent powers to rectify these things. Hence this Bill." 1964ನೇ ಇಸವಿಯ ಮೈಸೂರು ಲ್ಯಾಂಡ್ ರೆವಿನ್ಯೂ ಆಕ್ಟ್ ಏನಿದೆ ಅದರಲ್ಲಿರತಕ್ಕ 112ನೇ ಸೆಕ್ಷನ್ ಅನ್ನೂ ತಿದ್ದುಪಡಿ ಮಾಡುವುದಕ್ಕೆ ಸೂಚನೆ ಮಾಡಿದ್ದಾರೆ. ಸೆಕ್ಷನ್ 112 (1) 112 (2) ಇವೆರಡನ್ನೂ ತಿದ್ದುಪಡಿ ಮಾಡಬೇಕೆಂದು ಅವರು ಸೂಚನೆಮಾಡಿದ್ದಾರೆ. ಸೆಕ್ಷನ್ 112 (2)ರಲ್ಲಿ:

> "Notwihstanding anything contained in sub-section 1, above whenever the State Government feels that great hardships and injustices are done in a general classification of the soil of any area, the State Government shall have the inherent powers either to direct a fresh survey of such area or for the revision of the assessment of such area."

ಎಂದು ಹೇಳಿದ್ದಾರೆ. ಮಾನ್ಯ ರೆವಿನ್ಯೂ ಸಚಿವರು ಇದರಲ್ಲಿ ಇಷ್ಟೆಂತಹ ತತ್ವವನ್ನು ಒಪ್ಪಿಕೊಳ್ಳುತ್ತೇನೆ ಎಂದು ಹೇಳಿದರು. ಆ ಕಡೆ ಮತ್ತು ಈ ಕಡೆಯ ಅನೇಕ ಮಾನ್ಯ ಸದಸ್ಯರುಗಳು ಸರ್ವೆ ಸೆಟ್ಲ್‌ಮೆಂಟಿನಲ್ಲಿ ಲೋಪದೋಷಗಳಾಗಿವೆ ಎಂದು ಹೇಳಿದ್ದಾರೆ. ಮತ್ತು ಈ ಸರ್ವೆ ಸೆಟ್ಲ್‌ಮೆಂಟಿನಲ್ಲಿ

ರತಕ್ಕ ಲೋಪದೋಷಗಳು, ನ್ಯೂನಾತಿರಿಕ್ತಗಳು ಏನಿವೆ ಅವುಗಳು ನಮ್ಮ ಗಮನಕ್ಕೂ ಬಂದಿವೆ. ಇದನ್ನು ಎಲ್ಲಾ ಭಾಗದ ಸದಸ್ಯರೂ ಮತ್ತು ಸಾರ್ವಜನಿಕರು ಸರ್ಕಾರದ ಗಮನಕ್ಕೆ ತಂದಿದ್ದಾರೆ ಅನೇಕ ಜನ ಸರ್ಕಾರಕ್ಕೆ ನೇರವಾಗಿ ಮನವಿಯನ್ನು ಸಲ್ಲಿಸಿದ್ದಾರೆ. ಅಲ್ಲದೆ ಅನೇಕರು ಉನ್ನತ ನ್ಯಾಯಾಲಯಕ್ಕೆ ಹೋಗಿ ಈ ತಪ್ಪನ್ನು ಅವರ ಗಮನಕ್ಕೂ ತಂದಿದ್ದಾರೆ. ಒಂದು ಸಾರ್ತಿ ಸರ್ವೆ ಸೆಟ್ಲ್‌ಮೆಂಟ್ ಮಾಡಿದನಂತರ ಅದರ ಆಧಾರದ ಮೇಲೆ ಸ್ಟ್ಯಾಂಡರ್ಡ್ ರೇಟ್ ಕ್ಲಾಸಿಫಿಕೇಷನ್ ರೇಟ್ ಫಿಕ್ಸ್ ಮಾಡಿದನಂತರ ಅದರ ಆಧಾರದ ಮೇಲೆ ಇಂಡಿವಿಜುಯಲ್ ಅಸೆಸ್‌ಮೆಂಟ್ ಮಾಡಿದನಂತರ ಅದನ್ನು ಹಿಂದಕ್ಕೆ ಹಾಕುವುದಕ್ಕೆ ಬರುವುದಿಲ್ಲ ಪುನರ್ ವಿಮರ್ಶೆ ಮಾಡುವುದಕ್ಕೆ ಬರುವುದಿಲ್ಲ; ಇವೊತ್ತು ರ್ಯಾಂಡ್‌ರೆಪಿನ್ಯೂ ಆಕ್ಟ್ ಸೆಕ್ಷನ್ 114 (2) ರ ಪ್ರಕಾರ ಅದನ್ನು ಏರಿಸಲು ಹಾಕುವುದಕ್ಕೆ ಬರುವುದಿಲ್ಲ; 30 ವರ್ಷಗಳು ಆಗುವವರೆಗೂ ಯಾವುದೇ ರೀತಿಯ ಪುನರ್‌ವಿಮರ್ಶೆ ಮಾಡುವುದಕ್ಕೆ ಬರುವುದಿಲ್ಲ; ಎಂದು ಕಾನೂನು ತಜ್ಞರು ಅಭಿಪ್ರಾಯ ಪಟ್ಟಿರುವುದರಿಂದ ಅದನ್ನು ಪುನರ್‌ವಿಮರ್ಶೆ ಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇಲ್ಲ. ಇದರಲ್ಲಿ ಏನು ಮೂಲಭೂತವಾದ ಲೋಪದೋಷಗಳು ಇವೆ ಅವುಗಳನ್ನು ಸರಿಪಡಿಸಬೇಕು. ಇತ್ತೀಚೆಗೆ ನಡೆದಂತಹ ಸರ್ವೆ ಸೆಟ್ಲ್‌ಮೆಂಟ್ ಕಾಲದಲ್ಲಿ ನಾನಾ ತರಹ ತಪ್ಪು ನಡೆದಿದೆ. ಯಾವ ಯಾವ ತಪ್ಪುಗಳು ನಡೆದಿವೆ ಎಂಬುದು ಹಲವಾರು ಸಾರ್ತಿ ಈ ಸಭೆಯ ಮುಂದೆ ಪ್ರಸ್ತಾಪವಾಗಿದೆ. ನಾಲ್ಕು ಬಾಳೆಯ ಗಿಡ, ನಾಲ್ಕು ತೆಂಗಿನ ಗಿಡ, ನಾಲ್ಕು ಹೇರಳೆ ಗಿಡ, ನಾಲ್ಕು ಮಾವಿನ ಗಿಡವನ್ನು ಒಂದು ಜಮೀನಿನಲ್ಲಿ ನೆಟ್ಟ ಮಾತ್ರಕ್ಕೇ ಬಾಗಾಯ್ತು ಆಗುತ್ತದೆಯೇ? ಅದರ ಪಕ್ಕದಲ್ಲಿ ಅಡಿಕೆ ತೋಟ ಇದ್ದರೆ ಅದರ ಸ್ಟ್ಯಾಂಡರ್ಡ್ ರೇಟ್ ಕ್ಲಾಸಿಫಿಕೇಷನ್ ರೇಟ್ ಅನ್ನು ಆ ಬಾಗಾಯ್ತಿಗೆ ವಿಧಿಸಿದರೆ ಸರಿಹೋಗುತ್ತದೆಯೇ? ಇನ್ನು ಇಂಡಿವಿಜುವಲ್ ಅಸೆಸ್‌ಮೆಂಟ್ ಸರ್ವೆಯಲ್ಲಿ ಕೂಡ ತಪ್ಪಾಗುತ್ತದೆ. ಮೆಟ್ರಿಕ್ ಚೈನ್ ಹಿಡಿದುಕೊಂಡು ಅದನ್ನು ಪರಿವರ್ತನೆ ಮಾಡಿಕೊಳ್ಳಬೇಕಾದರೆ, ಲೆಕ್ಕ ತಪ್ಪಿದರೆ, ಒಂದು ಗುಂಟೆ ಜಾಸ್ತಿಯಾಗುವುದು ಉಂಟು, ಒಂದು ಗುಂಟೆ ಕಡಿಮೆಯಾಗುವುದೂ ಉಂಟು. ಆದರೆ ಅದು ಭ್ರಮೆ. ಕಡಿಮೆಯಾದುದೂ ಇಲ್ಲ, ಜಾಸ್ತಿಯಾದುದೂ ಇಲ್ಲ. ಇಬ್ಬರೂ ಹೈಕೋರ್ಟಿಗೆ ಹೋಗಿ ಹೊಡೆದಾಡುವ ಪರಿಸ್ಥಿತಿ ಇದೆ. ಹೀಗೆ ನಾನಾ ರೀತಿಯ ತೊಂದರೆಗಳು ಸರ್ವೆ ಸೆಟ್ಲ್‌ಮೆಂಟ್ ಕಾಲದಲ್ಲಿ ಆದವು. ಇದನ್ನು ಸರ್ಕಾರ ಮನಗಂಡು ಶ್ರೀ ನಂಜೇಗೌಡರು ಅಮೆಂಡ್‌ಮೆಂಟ್ ಸೂಚಿಸಿರುವಾಗ, ಸರ್ಕಾರ ಇವತ್ತು ಸರ್ವೆ ಸೆಟ್ಲ್‌ಮೆಂಟ್ ಏನು ಮಾಡಿದೆ, ಅದನ್ನು ಮೂವತ್ತು ವರ್ಷಗಳ ಕಾಲ ಮತ್ತೆ ಪುನರ್‌ವಿಮರ್ಶೆ ಮಾಡುವುದಕ್ಕೆ ಸಾಧ್ಯವಿಲ್ಲ, ಆ ಪರಿಸ್ಥಿತಿಯನ್ನು ಬದಲಾಯಿಸಬೇಕು, ಅದಕ್ಕೆ ಬೇಕಾದ ಅಧಿಕಾರವನ್ನು ಸರ್ಕಾರದವರು ತೆಗೆದುಕೊಳ್ಳಬೇಕೆಂಬುದೇ ಅವರ ಅಭಿಪ್ರಾಯವಾಗಿತ್ತು. ಸರ್ಕಾರಕ್ಕೆ ಇಲ್ಲದಿರತಕ್ಕ ಹೊಸದನ್ನು ಸೃಷ್ಟಿಮಾಡಿ ಕೊಡುತ್ತಾ ಇಲ್ಲ. ವಿರೋಧಪಕ್ಷದ ಸದಸ್ಯರು ಸರ್ಕಾರಕ್ಕೆ ಅಧಿಕಾರ ಇರಬೇಕು, ಇದು ಅತ್ಯಾವಶ್ಯಕವೆಂದು ಹೇಳಿದ್ದರು. ಆ ಅಧಿಕಾರವನ್ನು ನಮಗೆ ಕೊಡಿ ಎಂದು ಕೇಳುತ್ತಿದ್ದೇವೆ. ಕಾಂಪ್ರಹೆನ್ಸಿವ್ ಎನ್ನುವುದರ ಅರ್ಥ ಏನೆಂದರೆ, ನಂಜೇಗೌಡರು ಸೆಕ್ಷನ್ 112 (2)ರ ಕುರಿತು ತಿದ್ದುಪಡಿ ತಂದಿದ್ದರೂ ಅದು ಸಮರ್ಪಕವಾಗಿ ಇರಲಿಲ್ಲ. ಆ ಸೆಕ್ಷನನ್ನು ಯಾವ ಉದ್ದೇಶಕ್ಕಾಗಿ ತರಬೇಕೆಂದು ಬಯಸಿದರೋ ಆ ಒಂದು ಪರಿಣಾಮವನ್ನು ಸಾಧಿಸಲಿಕ್ಕೆ ಇದೊಂದು ಸೆಕ್ಷನ್ ರ್ಯಾಂಡ್ ರೆವೆನ್ಯೂ ಕೋಡಿಗೆ ಸೇರಿಸಿದ ಮಾತ್ರಕ್ಕೆ ಸಾಧ್ಯವಾಗುತ್ತಿರಲಿಲ್ಲ. ಮಾನ್ಯ ನಂಜೇಗೌಡರು ತಂದಂತಹ ರ್ಯಾಂಡ್ ರೆವೆನ್ಯೂ ಬಿಲ್ಲಿನಲ್ಲಿ ಒಂದು ಸೆಕ್ಷನ್ ಇತ್ತು. ಇವತ್ತಿನ ದಿವಸ ನಮ್ಮ ಮುಂದಿರುವ ತಕ್ಕಂತಹ ಸರ್ಕಾರದ ಮತಿಯಿಂದ ಮಂಡಿಸಲ್ಪಟ್ಟ ರ್ಯಾಂಡ್ ರೆವೆನ್ಯೂ ಅಮೆಂಡ್‌ಮೆಂಟ್ ಬಿಲ್ಲಿನಲ್ಲಿ ಸೆಕ್ಷನ್ 114 (ಎ) 122(ಎ) 122(ಬಿ) ಎಂಬುದಾಗಿ ಮೂರು ಸೆಕ್ಷನ್ನುಗಳು ಇವೆ. ಈ ಮೂರು ಸೆಕ್ಷನ್ನುಗಳು ಈಗ ಇದ್ದಂತಹ ಲೋಪವನ್ನು, ದೋಷವನ್ನು ತಿದ್ದುಪಾಟು ಮಾಡುತ್ತವೆ. ಇದನ್ನು ಮಾಡಲಿಕ್ಕೆ ನಂಜೇಗೌಡರು ಅಮೆಂಡ್‌ಮೆಂಟ್ 112(2)ರಲ್ಲಿ ಏನು ಸೂಚನೆ ಮಾಡಿದ್ದರೋ, ಅದನ್ನು ಒಪ್ಪಿಕೊಂಡಿದ್ದರೆ ಸಾಧ್ಯವಾಗುತ್ತಿರಲಿಲ್ಲ. ಎರಡನ್ನೂ ಹೋಲಿಕೆಮಾಡಿ ನೋಡಿದರೆ, ಅರ್ಥವಾಗುತ್ತದೆ. 39 ಜೋನಿನಲ್ಲಿ ಸರ್ವೆ ನಡೆದು, ಕ್ಲಾಸಿಫಿಕೇಷನ್ನಿಗೆ ಸಂಬಂಧಪಟ್ಟ ಮೂಲಭೂತ ತತ್ವಗಳನ್ನು ಅನ್ವಯಮಾಡಿ ತೀರ್ಮಾನಕ್ಕೆ ಬಂದು ಸ್ಟ್ಯಾಂಡರ್ಡ್ ಕ್ಲಾಸಿಫಿಕೇಶನ್ ರೇಟುಗಳನ್ನು ಅವರು ಫಿಕ್ಸ್ ಮಾಡಿ ಅದರಂತೆ ಅಸೆಸ್‌ಮೆಂಟ್ ನಡೆದಿದೆ. ಯಾವ ಜೋನಿನಲ್ಲಿ ಈ ಸ್ಟ್ಯಾಂಡರ್ಡ್ ರೇಟುಗಳಿಗೆ ಬಂದಿರತಕ್ಕಂತಹ ಕಂಕ್ಲೂಶನ್ನು ತಪ್ಪೋ, ಎಲ್ಲಿ ಸರ್ವೆ ಸೆಟ್ಲ್‌ಮೆಂಟ್ ಸಂಪೂರ್ಣವಾಗಿ ದೋಷಪೂರ್ಣವಾಗಿದೆಯೋ, ಅಂಥ ಜೋನುಗಳಲ್ಲಿ ಸರ್ವೆ ಸೆಟ್ಲ್‌ಮೆಂಟ್ ಹೊಸದಾಗಿ ಮಾಡಬೇಕಾದ ಪ್ರಸಂಗ ಬಂದಿದೆ. ಆ ಸರ್ವೆ ಸೆಟ್ಲ್‌ಮೆಂಟ್ ಹೊಸದಾಗಿ ಮಾಡಲಿಕ್ಕೆ ಏನು ಹಳೆಯ 114ನೇ ಸೆಕ್ಷನ್‌ನಲ್ಲಿ ಪ್ರತಿಬಂಧಕ ಇದೆಯೋ ಅದನ್ನು ಮುರಿಯಲಿಕ್ಕೋಸ್ಕರವಾಗಿ 114 (ಎ) ಯನ್ನು ತಂದಿದ್ದಾಗಿದೆ. ನಂಜೇಗೌಡರು ಉಪಯೋಗಿಸಿದ್ದಂತಹ ಶಬ್ದಗಳು, ಸೆಕ್ಷನ್ 114

(ಶ್ರೀ ಕೆ. ಎಚ್. ಶ್ರೀನಿವಾಸ್)

(ಎ) ಉಪಯೋಗಿಸಿದ ಶಬ್ದಗಳು, ಇವರೆಡರಲ್ಲೂ ಇರುವ ವ್ಯತ್ಯಾಸವನ್ನು ಮನಗಂಡರೆ ನಮಗೆ ಗೊತ್ತಾಗುತ್ತದೆ. 114(ಎ)ಯಲ್ಲಿ ಹೀಗೆ ಇದೆ :

> " If at any time after the introduction of a settlement of land revenue under Section 122, the State Government for reasons to be recorded in writing, is of the opinion that in any zone, the settlement of land revenue requires modification "

ಇದರ ಬದಲು ನಂಜೇಗೌಡರ್‌ತಿದ್ದುಪಡಿಯಲ್ಲಿ ಹೀಗೆ ಇದೆ :

> " Notwithstanding anything contained in Sub-Section, whenever the State Government feels that great hardships and injustice are done in a general classification of the soil of any area, the State Government shall have the inherent powers either to direct a fresh survey of such area or for the revision of the assessment of such area."

ಮುಂದಿನದು ೧೧೪(ಎ) ಯಲ್ಲಿ ಹೀಗೆ ಹೇಳಿದೆ :

> "It may by order direct the revision of settlement of land revenue in such zone and the provisions of this chapter relating to a revision settlement of land revenue shall be applicable to such revision of settlement."

ಇದು ಒಂದು ಸೆಕ್ಷನ್. ಇದಕ್ಕೂ ಅದಕ್ಕೂ ಲೀಗರ್ ಟರ್ಮಿನೋಲಜಿಯಲ್ಲಿ ಎಷ್ಟು ವ್ಯತ್ಯಾಸ ಇದೆ ಎಂಬುದನ್ನು ಬಹುಶಃ ಪರಿಚಯ ಇರತಕ್ಕವರು ಸುಲಭವಾಗಿ ಮನಗಾಣಲಕ್ಕೆ ಸಾಧ್ಯವಿದೆ. ಆಂಧ್ರದ ಕೇಸಿನ ಮೇಲೆ ಸುಪ್ರೀಂ ಕೋರ್ಟಿನಲ್ಲಿ ತೀರ್ಮಾನವಾಗಿದೆ. ಕೇವಲ ಚಾವಡಿಯಲ್ಲಿ ನೋಟೀಸ್ ಹಾಕಿ ಮನೆಗೆ ಹೋದರೆ ಸಾಧ್ಯವಿಲ್ಲ. ಸರ್ವೆ ಅದನಂತರ ಪ್ರತಿಯೊಬ್ಬರಿಗೂ ಜಮೀನು ಎಷ್ಟು ಇದೆ, ಆ ಜಮೀನಿಗೆ ಅಪ್ಲಿಕೇಬಲ್ ಆಗತಕ್ಕಂತಹ ಸ್ಟ್ಯಾಂಡರ್ಡ್ ರೇಟ್ ಏನು ಮತ್ತು ಅದರ ಕ್ಲಾಸಿಫಿಕೇಶನ್ ವ್ಯಾಲ್ಯು ಏನು ಎಷ್ಟು ಕಂದಾಯವನ್ನು ಅತನು ಕೊಡಬೇಕಾಗುತ್ತದೆ. ಇಷ್ಟು ವಿಷಯವನ್ನು ನಮೂದಿಸಿ, ಪ್ರತಿಯೊಬ್ಬನಿಗೂ ನೋಟೀಸು ಜಾರಿ ಮಾಡಬೇಕು. ಹಿಂದೆ ಈ ನೋಟೀಸು ಜಾರಿ ಮಾಡಬೇಕೆನ್ನುವ ವಿಧಿ ಇರಲಿಲ್ಲ. 122(ಎ)ಯಲ್ಲಿ ಕಡ್ಡಾಯವಾಗಿ ಇವತ್ತು ಮಾಡಿದ್ದಾರೆ. ಪ್ರತಿಯೊಬ್ಬ ಮನುಷ್ಯನಿಗೂ ಕೂಡ ಅವನ ಜೋಸೀನಲ್ಲಿ ಯಾವ ಒಂದು ಸ್ಟ್ಯಾಂಡರ್ಡ್ ರೇಟು ಅಂತಿಮವಾಗಿ ತೀರ್ಮಾನವಾಗಿದೆ, ಆದು ಕೊನೆಯ ರೇಟೆಂದು ಹೇಳುವುದಕ್ಕಾಗುವುದಿಲ್ಲ. ಆ ಜೋಸೀನಲ್ಲಿ ಸರ್ವೆ ಸೆಟ್ಲ್‌ಮೆಂಟ್ ಪುನಃ ಮಾಡಬೇಕೆಂದು ಸರ್ಕಾರ ಒಪ್ಪಿಕೊಂಡರೆ ಅಲ್ಲಿ ಮಾಡಿಫಿಕೇಶನ್ ಮಾಡಬಹುದು. ಆದ್ದರಿಂದ ಸ್ಟ್ಯಾಂಡರ್ಡ್ ರೇಟ್ ಫಿಕ್ಸ್ ಮಾಡಿದ್ದು ಅಂತಿಮ ವೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಯಾವಾಗ ತೀರ್ಮಾನ ಫೈನಲ್ ಆಗುತ್ತದೋ ಅಂದರೆ, ಸರ್ಕಾರದವರು 122(ಎ) ಪ್ರಕಾರ ಪ್ರತಿಯೊಬ್ಬ ಹಿಡುವಳಿದಾರನಿಗೂ ಜಮೀನು ಎಷ್ಟು, ಅದರ ಕ್ಲಾಸಿಫಿಕೇಶನ್ ವ್ಯಾಲ್ಯು ಏನು, ಅತನಿಗೆ ವಿಧಿಸಿರತಕ್ಕಂತಹ ರೇಟ್ ಏನು, ಒಟ್ಟು ಮೊತ್ತದ್ದು ಅಸೆಸ್‌ಮೆಂಟ್ ಎಷ್ಟು ಎಂದು ಕ್ರಮಬದ್ಧವಾದ ನೋಟೀಸನ್ನು ಅವನ ಮೇಲೆ ಜಾರಿ ಮಾಡಬೇಕು. ಇದರಲ್ಲಿ ಎರಡು ತರಹ ಅನ್ಯಾಯವಾಗಿರುತ್ತದೆ, ಮೊದಲನೆಯದು ಸ್ಟ್ಯಾಂಡರ್ಡ್ ರೇಟಿನಲ್ಲಿ ಇಡೀ ಜೋಸೀಗೆ ಆಗಿರತಕ್ಕ ಅನ್ಯಾಯ. ಮೊದಲು ಇಡೀ ಜೋಸೀಗೆ ಆದ ಅನ್ಯಾಯ ಸರಿಪಡಿಸಿದನಂತರ ಇಂಡಿವಿಜುವಲ್ ಅಸೆಸ್‌ಮೆಂಟಿನಲ್ಲಿ ನಾನಾ ರೀತಿಯ ರೋಪದೋಪಗಳು ಆಗಬಹುದು. ಒಬ್ಬನ ಜಮೀನು ಕಡಿಮೆ ಬರೆದಿರಬಹುದು. ಅವನ ಜಮೀನನ್ನು ಖುಷ್ಕಿ ಇದ್ದದನ್ನು ಭಾಗಾಯತು, ಬಾಗಾಯತು ಇದ್ದುದನ್ನು ತರಿ ಎಂದು ಈ ರೀತಿಯಲ್ಲಿ ತಪ್ಪು ಮಾಡಿರಬಹುದು. ಹೀಗೆ ನಾನಾ ರೋಪದೋಪಗಳನ್ನು ತಿದ್ದುಪಾಟು ಮಾಡುವುದಕ್ಕೆ ಹಿಂದೆ ಅವಕಾಶ ಇರಲಿಲ್ಲ. ನೋಟೀಸು ಕೊಟ್ಟನಂತರ ಡೆಪ್ಯೂಟಿ ಕಮಿಶನರೇ ಖುದ್ದಾಗಿ ಸರಿಪಡಿಸುವುದಕ್ಕೆ 122(ಬಿ)ಯಲ್ಲಿ ಅವಕಾಶ ಮಾಡಿ ಕೊಟ್ಟಿದ್ದಾರೆ. ಡೆಪ್ಯೂಟಿ ಕಮಿಶನರು ಸ್ವತಃ ರೋಪದೋಪಗಳನ್ನು ತಿದ್ದುಪಾಟು ಮಾಡ ಬಹುದು. ಯಾರಿಗೆ ತೊಂದರೆ ಆಗುತ್ತಾಗಿದೆಯೋ ಅವನು ಅಪ್ಲಿಕೇಶನ್ ಹಾಕಿದಾಗ ಡೆಪ್ಯೂಟಿ

ಕಮಿಶನರ್ ವಿಮರ್ಶೆ ಮಾಡಿ, ಅದರ ಬಗ್ಗೆ ಏನು ಪರಿಹಾರ ಕೊಡಬೇಕೋ, ಅದನ್ನು ಕೊಡಬಹುದು. ಆ ಪರಿಹಾರದಿಂದ ತೃಪ್ತಿ ಆಗದಿದ್ದ ಪಕ್ಷಕ್ಕೆ ಡಿವಿಜನರ್ ಕಮಿಶನರಿಗೆ ಅಪೀಲು ಹೋಗಬಹುದು. ಅವರು ಏನು ತೀರ್ಪಾನಕ್ಕೆ ಬರುತ್ತಾರೋ ಅದು ಫೈನರ್. ಇಷ್ಟು ಇಂಡಿವಿಜುವರ್ ಅಸೆಸ್‌ಮೆಂಟ್ ಮೇಲೆ ಏನಾದರೂ ಲೋಪ ದೋಷ ಇದ್ದರೆ, ಅವಕ್ಕೆ ಇದರಲ್ಲಿ ಒದಗಿಸಿಕೊಟ್ಟಿರತಕ್ಕಂತಹ ಪರಿಹಾರ. ಇದರಿಂದ ಎಲ್ಲರೂ ಕೋರ್ಟಿಗೆ ಹೋಗುವ ಸ್ಥಿತಿಯಾಗಿದೆ ಎಂದು ನನ್ನ ಮನಸ್ಸಿಗೆ ಅನ್ನಿಸುವುದಿಲ್ಲ. ವಿಶೇಷವಾಗಿ ಲಾಯರುಗಳನ್ನು ತೆಗೆದುಕೊಳ್ಳುವ ಪ್ರಸಂಗ ಎಲ್ಲಿಯಾದರೂ ಒಂದೆರಡು ಕಡೆ ಬರಬಹುದು. ಪ್ರತಿಯೊಬ್ಬರೂ ಲಾಯರನ್ನು ಇಡುವ ಪ್ರಸಂಗ ಬರಲಿಕ್ಕೆ ಇಲ್ಲ. ಹೊಸದಾಗಿ ಸರ್ವೆ ಸೆಟ್ಲ್‌ಮೆಂಟ್ ಆದರೂ ಕೂಡ ಮತ್ತೆ ಅದು ಅಸೆಂಬ್ಲಿ ಮುಂದೆ ಬಂದು ಚರ್ಚೆಯಾಗಿ ಫೈನರ್ ಆಗಬೇಕು. ಸರ್ಕಾರದವರು ಖುಶಿ ಬಂದಂತೆ ಮಾಡಲು ಅಧಿಕಾರ ತೆಗೆದುಕೊಂಡಿದ್ದಾರೆಂದು ಹೇಳುವುದು ಸರಿಯಲ್ಲ.

Sri D. B. KALMANKAR.—ಇದರಲ್ಲಿ If the Government so desires..... ಎಂದು ಹೇಳಿದೆ.

ಶ್ರೀ ಕೆ. ಎಚ್. ಶ್ರೀನಿವಾಸ್.—114(ಎ)ಯಲ್ಲಿ ಹೀಗೆ ಹೇಳಿದೆ.

.....provisions of this chapter relating to the revision settlement of Land Revenue shall be applicable to such revision of settlements.

(*b*) The Land Revenue settled by such settlement shall if so directed by the State Government, with the approval of both the Houses of the State Legislature be leviable. "with the appoval" is not subject to the directions by the Government. That is not the qualifying clause.

"Be liviable" ಗೆ qualify ಆಗುತ್ತದೆ. "with the approval" of the both the Houses of Legislature ಗೆ apply ಆಗುವುದಿಲ್ಲ.

6-00 P.M.

ಇಷ್ಟೇ ಅಲ್ಲದೆ ಬೇಕಾದಷ್ಟು ಸರ್ಕುಲರ್ ಕೂಡ ಕೊಟ್ಟಿದ್ದಾರೆ. ಅನೇಕ ತಾತ್ಕಾಲಿಕ ಪರಿಹಾರಗಳನ್ನು ಕೊಟ್ಟಿದ್ದಾರೆ. ಇದನ್ನೆಲ್ಲಾ ಪರಿಗಣನೆಗೆ ವಿರೋಧ ಪಕ್ಷದವರು ತೆಗೆದುಕೊಳ್ಳದೆ ಸರ್ಕಾರದವರು ರೈತರ ಕೊರಳಿಗೆ ಉರುಳು ಹಾಕುವುದಕ್ಕೆ ಹೊರಟಿದ್ದಾರೆಂದು ಹೇಳಿದ್ದಾರೆ. 114 (ಸಿ)ನಲ್ಲಿ ಈ ರೀತಿ ಸ್ಪಷ್ಟವಾಗಿ ಹೇಳಿದ್ದಾರೆ :

> "114 (c) where a settlement of land revenue is directed to be revised under clause (a), the land revenue on the lands in the zone concerned shall, pending such revision, be leviable and payable at the same rates as were in force prior to the introduction of such settlement, and after the revision of settlement of land revenue comes into force, the difference, if any between the amount of land revenue paid, pending the revision, and the amount of land revenue payable for the period, in accordance with the revised settlement of land revenue shall be paid or refunded, as the case may be."

ಇದಕ್ಕಿಂತ ಇನ್ನೂ ಸಮಗ್ರವಾದ ಪ್ರಾವಿಜನನ್ನು ತರಬೇಕೆಂದು ಹೇಳಿದರೆ ಅದಕ್ಕೆ ಏನು ಹೇಳಬೇಕೋ ನನಗೆ ಅರ್ಥವಾಗುತ್ತಿಲ್ಲ. ವಿರೋಧ ಪಕ್ಷದವರು ಮಾಡಿದ ಟೀಕೆಗಳಲ್ಲಿ ನಿಜವಾದಂಥ ಸತ್ವ ಇದೆಯೇ ಎಂಬುದನ್ನು ಪರಿಶೀಲನೆ ಮಾಡಬೇಕಾಗಿದೆ. ಯಾವ ಏರಿಯಾದಲ್ಲಿ ಯಾವ ಜೋನ್‌ನಲ್ಲಿ ಮಾಡಿರತಕ್ಕಂಥ ಸರ್ವೆ ಸೆಟಲ್‌ಮೆಂಟ್ ಪ್ರಕಾರ ಕಂದಾಯದಲ್ಲಿ ಹೆಚ್ಚು ಕಡಿಮೆಯಾಗಿದೆಯೋ ಅದನ್ನು ಸರಿಪಡಿಸುವುದಕ್ಕೋಸ್ಕರ ಈ ಒಂದು ತಿದ್ದುಪಡಿಯನ್ನು ತರಲಾಗಿದೆ. "Statement of Objects and Reasons–ನಲ್ಲಿ ಈ ಬಗ್ಗೆ ಹೇಳಲಾಗಿದೆ. ಸಂಬಂಧಪಟ್ಟ ರೈತರಿಗೆ ನೋಟೀಸು ಕೊಟ್ಟು ನಂತರ ಸರ್ವೆ ಕೆಲಸ ಮಾಡಿ ಕಂದಾಯವನ್ನು ನಿಗದಿ ಮಾಡಲಾಗುತ್ತದೆ. ಅದು ಅತನಿಗೆ ತೃಪ್ತಿಕರವಾಗಿಲ್ಲದಿದ್ದರೆ, ಏನಾದರೂ ಲೋಪದೋಷಗಳು ಕಂಡು ಬಂದರೆ ಆ ಬಗ್ಗೆ ಜಿಲ್ಲಾಧಿಕಾರಿ

(ಶ್ರೀ ಕೆ. ಎಚ್. ಶ್ರೀನಿವಾಸ್)

ಗಳಿಗೆ ಅರ್ಜಿ ಕೊಡುವುದಕ್ಕೆ ಅವಕಾಶವಿದೆ. ಅನಂತರ ಬೇಕಾದರೆ ಡಿವಿಜನಲ್ ಕಮೀಷನರಿಗೂ ಕೂಡ ಅರ್ಜಿ ಕೊಡ ವುದಕ್ಕೆ ಅವಕಾಶವಿದೆ. ಶ್ರೀಮಾನ್ ನಂಜೇಗೌಡರು ಹಿಂದೆ ತಂದಿದ್ದ ತಿದ್ದು ಪಡಿಯನ್ನು ಮತ್ತು ಇದನ್ನು ಇಟ್ಟುಕೊಂಡು ನೋಡಿದರೆ ಸಮಗ್ರವಾಗಿ ತಿದ್ದುಪಡಿಯ ಅರ್ಥ ಏನೆಂಬುದು ಗೊತ್ತಾಗುತ್ತದೆ. "Bill with comprehensive Amendments-not a comprehensive Bill with any number of amendments" ಎಂದು ನಾವು ಹೇಳಿದ್ದು, ಆದ್ದರಿಂದ ಶ್ರೀಮಾನ್ ನಂಜೇಗೌಡರ ತಿದ್ದುಪಡಿ ಮತ್ತು ಈಗ ಸರ್ಕಾರದವರು ತಂದಿರುವ ತಿದ್ದುಪಡಿಯನ್ನು ಅಂದರೆ ಎರಡನ್ನೂ ಇಟ್ಟುಕೊಂಡು ನೋಡಿದರೆ ವಿಶೇಷವಾದಂಥ ವ್ಯತ್ಯಾಸ ಕಾಣುತ್ತಿಲ್ಲ. ಆದ್ದರಿಂದ ವಿವರಣೆ ಕೊಡುವುದು ಅವಶ್ಯಕವಿಲ್ಲ. ಆದರೂ ಕೂಡ ಈ ವಿಚಾರದಲ್ಲಿ ವಿರೋಧಪಕ್ಷದವರು ಹೇಳುವ ಧಾಟಿಗೂ ನಾವು ಹೇಳುವ ಧಾಟಿಗೂ ವ್ಯತ್ಯಾಸವಿದೆ. ಅವರ ಧಾಟಿಯಲ್ಲಿ ಅವರು ಹೇಳುತ್ತಾರೆ, ನಮ್ಮ ದಾಟಿಯಲ್ಲಿ ನಾವು ಹೇಳುತ್ತೇವೆ. ಈ ಒಂದು ತಿದ್ದುಪಡಿಯನ್ನು ತರಬೇಕೆಂದು ಅವರೇ ಹೇಳುತ್ತಿದ್ದರು ಮತ್ತು ಆ ರೀತಿ ಏಪ್ರಿಲ್ ತಿಂಗಳ ಮೊದಲವಾರದಲ್ಲಿ ತರಲಾಗುತ್ತದೆ ಎಂದು ಸರ್ಕಾರದವರು ಭರವಸೆ ಕೊಟ್ಟಾಗ ವಿರೋಧ ಪಕ್ಷದವರು ಹಿಡಿದ ನೆಲಬಿಟ್ಟು ಆಸನದಲ್ಲಿ ಕುಳಿತರು. ಕೊಟ್ಟ ವಚನದ ಪ್ರಕಾರ ಸರ್ಕಾರದವರು ಈಗ ಈ ತಿದ್ದುಪಡಿಯನ್ನು ಸಭೆಯಲ್ಲಿ ಮಂಡಿಸಿರುವಾಗ ಅವರವರಾಗಿ ತರುತ್ತಿದ್ದೀರಿ, ಲಕ್ಷಾಂತರ ಜನರ ಸಮಸ್ಯೆಗಳನ್ನು ಬಗೆಹರಿಸಲು ಈ ತಿದ್ದುಪಡಿಯಲ್ಲಿ ಸಾಕಷ್ಟು ಅವಕಾಶಗಳು ಇಲ್ಲ ಎಂದು ಹೇಳಿದರೆ ಅದಕ್ಕೆ ಏನು ಎಂದು ಹೇಳಬೇಕೋ ನನಗೆ ಅರ್ಥವಾಗಲಿಲ್ಲ. ಭೂ ಕಂದಾಯದ ಪ್ರಶ್ನೆ ಜನರಿಗೆ ಅರ್ಥವಾಗಿಲ್ಲ ಎನ್ನುವ ಕಾರಣವನ್ನು ಇಟ್ಟುಕೊಂಡು ವಿರೋಧಪಕ್ಷದವರು ಈ ಒಂದು ನಿಲುವನ್ನು ತಳೆಯುತ್ತಿದ್ದಾರೆ. ಮತ್ತು ಜನರಿಗೂ ಕೂಡ ತಿದ್ಯಿರುದ್ಧವಾದ ಅಭಿಪ್ರಾಯವನ್ನು ಹೇಳುವುದಕ್ಕೆ ಹೊರಟಿದ್ದಾರೆ. ಸರ್ಕಾರದವರು ಯಾವ ರೀತಿ ತಿದ್ದುಪಡಿಯನ್ನು ತರುತ್ತೇವೆಂದು ಹೇಳಿದ್ದರೋ ಅದೇ ರೀತಿ ತಂದಿದ್ದಾರೆ. ಸ್ಪಷ್ಟವಾದ ರೀತಿಯಲ್ಲಿ ತಂದಿದ್ದಾರೆ. ಎಷ್ಟು ಸಮಗ್ರ ವಾಗಿ ತರಬೇಕಾಗಿತ್ತೋ ಅಷ್ಟೇ ಸಮಗ್ರವಾಗಿ ತಂದಿದ್ದಾರೆ. ಸೆಕ್ಷನ್ ಬೈ ಸೆಕ್ಷನ್ ತಿದ್ದುಪಡಿಮಾಡಿ ಬಿಲ್ಲನ್ನು ತರುತ್ತೇವೆಂಬ ಭರವಸೆಯನ್ನು ಸರ್ಕಾರದವರು ಕೊಟ್ಟಿರಲಿಲ್ಲ. ಕೊಟ್ಟಿರುವ ಭರವಸೆಯ ಪ್ರಕಾರ ಈಗ ತಿದ್ದುಪಡಿಯನ್ನು ತಂದಿದ್ದಾರೆ. ಶ್ರೀ ಮಾನ್ ಚೆನ್ನಬಸಪ್ಪನವರು ರೈತರು ಕೊಡುತ್ತಿರುವ ಕಂದಾಯ ರೆಂಟೇ ಅಥವಾ ತೆರಿಗೆಯೇ ಎಂದು ಕೇಳಿದರು. ಮಾನ್ಯ ಸದಸ್ಯರಲ್ಲಿ ಒಂದು ವಿಷಯವನ್ನು ವಿನಯಪೂರ್ವಕವಾಗಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಇದು ಒಂದು ಯಕ್ಷ ಪ್ರಶ್ನೆಯಾಗಿದೆ. ಇದನ್ನು ಯಾರೂ ತೀರ್ಮಾನ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಇದನ್ನು ತೀರ್ಮಾನ ಮಾಡಲು Indian Taxation Enquiry Committee 1924-1926—ಅವರಿಗೆ ವಹಿಸಿದಾಗ ಅವರಿಗೂ ಕೂಡ ಉತ್ತರ ಕೊಡುವುದಕ್ಕೆ ಆಗಲಿಲ್ಲ. ಪ್ರಸಿದ್ಧ ಅರ್ಥಶಾಸ್ತ್ರಜ್ಞ ಶ್ರೀ Baden Powel ಅವರು Rent Assessment in British India ಎಂಬ ಪುಸ್ತಕದಲ್ಲಿ "We are not able to solve the problem whether it is rent or whether it is tax" ಎಂದು ಹೇಳಿದ್ದಾರೆ. ಅಲ್ಲೂ ಕೂಡ ಒಮ್ಮತದ ಅಭಿಪ್ರಾಯ ಬಂದಿಲ್ಲ. ನಿರ್ದಿಷ್ಟವಾಗಿ ರೆಂಟೇ ಅಥವಾ ತೆರಿಗೆಯೇ ಎಂದು ನಿರ್ಧರಿಸುವುದಕ್ಕೆ ಸಾಧ್ಯವಾಗಿಲ್ಲ.

ಶ್ರೀ ಎಚ್. ಎಂ. ಚೆನ್ನಬಸಪ್ಪ —ರೈತನನ್ನು ಹಣಕೊಡಬೇಕೆಂದು ಕೇಳಿದಾಗ ಏತಕ್ಕೋಸ್ಕರ ಕೊಡಬೇಕು, ಇದು ಏನು ಲೂಟಿಯೇ, ತೆರಿಗೆಯೇ, ಕಂದಾಯವೇ, ಅಥವಾ ಗೇಣಿಯೇ ಎನ್ನುವುದನ್ನು ಹೇಳುವುದಕ್ಕೆ ಈ ಸರ್ಕಾರಕ್ಕೆ ಶಕ್ತಿ ಇಲ್ಲದಿದ್ದರೆ ಈ ಸರ್ಕಾರವಾದರೂ ಕೂಡ ಇರುವುದಕ್ಕೆ ರಾಯಕ್ಕೇ ಎನ್ನುವ ಪ್ರಶ್ನೆ ಬರುತ್ತದೆ. ಪ್ರಜಾಪ್ರಭುತ್ವದಲ್ಲಿ ಒಬ್ಬ ಮನುಷ್ಯನ ಹತ್ತಿರ ಹಣ ಕೇಳಬೇಕಾದರೆ ಕಾರಣಗಳನ್ನು ಕೊಡಬೇಕಾಗುತ್ತದೆ. ಈ ಸ್ವರೂಪದ ಗೇಣಿ, ಈ ಸ್ವರೂಪದ ತೆರಿಗೆ ಕೊಡಬೇಕೆಂದು ಕೇಳುವುದು ಸಾಧುವಾದುದು. ಮತ್ತು ಅದು ಒಂದು ಕ್ರಮ. ಮತ್ತು ಕಾನೂನಿಗೆ ಅನುಗುಣವಾದುದು. ಅದು ಬಿಟ್ಟು ಇದು ಯಕ್ಷ ಪ್ರಶ್ನೆ ಎಂದು ಹೇಳಿದರೆ, ಅದು ನಮಗೆ ಯಕ್ಷ ಪ್ರಶ್ನೆಯಾಗಿರಬಹುದೇ ಹೊರತು .....

ಶ್ರೀ ಡಿ. ಎಂ. ಸಿದ್ದಯ್ಯ.—ತಾವು ಕೂಡ ದೊಡ್ಡ ಜಮೀನ್‌ದಾರರಾಗಿದ್ದೀರಿ. ತಾವೂ ಕೂಡ ಕಂದಾಯವನ್ನು ಕೊಟ್ಟುಕೊಂಡು ಬಂದಿದ್ದೀರಿ. ನೀವು ಯಾವ ರೀತಿ ಕೊಟ್ಟಿರಿ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಒಂದು ಮಾತಿನಲ್ಲಿ ಹೇಳುತ್ತೇನೆ. ಹಿಂದೆ ರಾಜಮಹಾ ರಾಜರುಗಳು ತಮ್ಮ ಸೌಕರ್ಯಕ್ಕೋಸ್ಕರವಾಗಿ ತಮ್ಮ ಪಾಲಿಗೆ ಇಷ್ಟಿಷ್ಟು ಕೊಡಬೇಕೆಂದು ಮುಗ್ಧ ರಾದ ಜನರ ಹತ್ತಿರ ವಸೂಲಿಮಾಡಿಕೊಂಡು ಬಂದಿದ್ದರು. ಅದನ್ನೇ ನಾವು ಮತ್ತು ನೀವು ಮುಂದು

ವರಿಸಿಕೊಂಡು ಬಂದು ಈ ಜನರನ್ನು ಶೋಷಣೆ ಮಾಡಿಕೊಂಡು ಬಂದಿದ್ದೇವೆ. ಇನ್ನು ಮುಂದೆ ಇದು ಇರಬಾರದು. ಕೋಟ್ಯಾಂತರ ಜನ ಮೂಕ ಪ್ರಾಣಿಗಳನ್ನು ಈ ಮೂಲಕ ಶೋಷಣೆ ಮಾಡುವುದು ಬೇಡ. ಈಗ ಅನೇಕ ವಿಷಯಗಳು ರೂಪಾಂತರ ಹೊಂದಿವೆ. ಅವೇ ರೀತಿ ಕಂದಾಯವೂ ಕೂಡ ರೂಪಾಂತರ ಹೊಂದಬೇಕು. ಈಗ ಅಧಿಕಾರ ನಿಮ್ಮ ಕೈಯಲ್ಲಿ ಇದೆ. ಆದಕಾರಣ ಇದನ್ನು ರೂಪಾಂತರ ಮಾಡುವ ಅವಕಾಶವನ್ನು ಬಿಡಬೇಡಿ ಎಂದು ನಾನು ಹೇಳುತ್ತಿರುವುದು.

ಶ್ರೀ ಡಿ. ಎಂ. ಸಿದ್ದಯ್ಯ.—ಈ ಒಂದು ಜಟಿಲ ಪ್ರಶ್ನೆಯನ್ನು ಬಗೆಹರಿಸಲು ತಾವು ಅಡಳಿತ ಪಕ್ಷದೊಡನೆ ಸಹಕರಿಸಿದರೆ ಬಹಳ ಅನುಕೂಲವಾಗುತ್ತದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಒಂದು ಯಕ್ಷ ಪ್ರಶ್ನೆಯನ್ನು ಬಗೆಹರಿಸಲು ಸಹಾಯ ಮಾಡಿ ಎಂದು ನಮ್ಮನ್ನು ಸರ್ಕಾರದವರು ಕೇಳಿದರೆ ಸಹಾಯ ಮಾಡುವುದಕ್ಕೆ ಸಿದ್ಧರಾಗಿದ್ದೇವೆ. ಈ ಪ್ರಶ್ನೆಯನ್ನು ಯಾವ ರೀತಿ ಬಿಡಿಸಬೇಕು ಎಂಬ ಬಗ್ಗೆ ನಾನು ನಾಳೆ ಮಾತನಾಡುತ್ತೇನೆ.

ಶ್ರೀ ಎಲ್. ಶ್ರೀಕಂಠಯ್ಯ.—ಇದು ಯಕ್ಷ ಪ್ರಶ್ನೆ ಏನೂ ಅಲ್ಲ, ಸರ್ಕಾರಕ್ಕೆ ಹಣಬೇಕು, ಅದಕ್ಕೆ ಈ ರೂಪದಿಂದ ವಸೂಲಿ ಮಾಡುತ್ತಿದ್ದಾರೆ.

ಶ್ರೀ ಕೆ. ಎಚ್. ಶ್ರೀನಿವಾಸ್.—1924ರಲ್ಲಿ ಟ್ಯಾಕ್ಷೇಷನ್ ಎನ್‌ಕ್ವೈರಿ ಕಮಿಟಿಯವರು ಇದರ ಬಗ್ಗೆ ಯಾವುದೇ ನಿರ್ದಿಷ್ಟವಾದ ಉತ್ತರವನ್ನು ಕೊಡುವುದಕ್ಕೆ ಸಾಧ್ಯವಿಲ್ಲ ಎನ್ನುತಕ್ಕ ಮಾತನ್ನು ಹೇಳಿದ್ದಾರೆ. ಇದಕ್ಕೆ ಯಾವ ಯಾವ ಕಾರಣಗಳಿವೆ ಎನ್ನುವುದನ್ನು ಇಲ್ಲಿ ವಿವರವಾಗಿ ಹೇಳಬೇಕಾದರೆ ನನಗೆ ನಾಲ್ಕೈದು ತಾಸುಗಳು ಬೇಕಾಗುತ್ತವೆ. ಇಂತಹ ತೆರಿಗೆಯ ರಚನೆ ನೀತಿ ಬಗ್ಗೆ ಕೆಲವರು ಗೇಣ್ ಎಂದು ಕರೆಯಬೇಕೇ, ಇಲ್ಲವೇ ತೆರಿಗೆ ಎಂದು ಕರೆಯಬೇಕೇ, ಇವರ ಬಗ್ಗೆ ಉತ್ತರವೇನು ಎಂದು ಕೇಳಿದರು. ಇದಕ್ಕೆ ಅಂತಹ ಉತ್ತರ ಕೊಡಬೇಕಾದ ಅಗತ್ಯ ವಿಲ್ಲ. ಯಾವುದೇ ತೆರಿಗೆ ವಿಧಾಯಕ ಮಾಡಬೇಕಾದರೂ ಅದಕ್ಕೆ ನಾಲ್ಕು ವಿಧವಾದ ಕ್ಯಾನನ್ಸ್ ಆಫ್ ಟ್ಯಾಕ್ಸೇಷನ್ ಇರುತ್ತವೆ. ಒಂದನೇದು, ಸರ್ಟಂಟಿ, ಎರಡನೇದು, ಕನ್‌ವೀನಿಯನ್ಸ್, ಮೂರನೇದು ಎಕಾನಮಿ ಮತ್ತು ನಾಲ್ಕನೇದು ಎಬಿಲಿಟಿ. ದೇಶದಲ್ಲಿ ರ್ಯಾಂಡು ರೆವಿನ್ಯೂ ಬಗ್ಗೆ ಒಂದು ಪೆಷಿನರಿ ಇಟ್ಟುಕೊಂಡು ಕಂದಾಯವನ್ನು ವಸೂಲು ಮಾಡುತ್ತಿದ್ದಾರೆ. ಈ ಅಧಿಕಾರಿಗಳು ರ್ಯಾಂಡು ರೆವಿನ್ಯೂ ವಸೂಲು ಅಲ್ಲದೇ ಇತರ ಹುದ್ದೆಗಳನ್ನೂ ಮಾಡುತ್ತಿದ್ದಾರೆ. ಹಿಂದೆ ಕಂದಾಯವನ್ನು ಅರ್‌ಬಿಟ್ರರಿಯಾಗಿ ನಿಗದಿ ಮಾಡುತ್ತಿದ್ದಾರೆ ಎಂದಾಗ ಅದನ್ನು ಎಬಿಲಿಟಿ ಮೇಲೆ ನಿರ್ಧಾರ ಮಾಡುವ ಸಲುವಾಗಿ ಮೊಘಲರು ಪರ್ಷಕ್ಕೊಮ್ಮೆ ಸರ್ವೆ ಮಾಡಬೇಕು ಎಂದು ಸರಕಾರ ತೀರ್ಮಾನಿಸಿ ಅದೇ ಪ್ರಕಾರ ಸರ್ವೇ ಸೆಟಲ್‌ಮೆಂಟು ಮಾಡುತ್ತಾ ಬರುತ್ತಿದ್ದಾರೆ. ಸರ್ವೇ ಸೆಟರ್ ಮೆಂಟು ಮಾಡುವ ಉದ್ದೇಶ ಯಾವುದೇ ಒಂದು ರೀತಿಯಾಗಿ ತೆರಿಗೆಯನ್ನು ಹೆಚ್ಚು ಮಾಡಬೇಕು ಎಂದಲ್ಲ. ಹಾಗೆ ಹೇಳುವುದಕ್ಕೆ ಯಾವ ಬೇಸಿನ್ನೂ ಇಲ್ಲ. ಹಿಂದಿನಿಂದ ನಡೆದುಕೊಂಡು ಬಂದಿರುವ ಕಂದಾಯವನ್ನು ರದ್ದುಮಾಡಕ್ಕದ್ದು ಸರಿಯಲ್ಲ. ರದ್ದು ಮಾಡುವ ಅವಶ್ಯಕತೆ ಬಂದಂಥ ಕಾಲದಲ್ಲಿ ಅದಕ್ಕೆ ಬದಲಾಗಿ ಅಗ್ರಿಕಲ್ಚರ್ ಇನ್‌ಕಂ ಟ್ಯಾಕ್ಸ್ ಎಂದು ಹಾಕಬೇಕಾಗಿ ಬರುತ್ತದೆ. ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ತಂದು ಜನಗಳ ಮೇಲೆ ಹಾಕಿದರೆ ಇದರಿಂದ ಕರ ಕೊಡುವವರೂ ಕಡಿಮೆಯಾಗುತ್ತಾರೆ. ಇಲ್ಲಿ ಇರುವ ಪ್ರಶ್ನೆ ಕಂದಾಯವನ್ನು ರದ್ದು ಮಾಡಬೇಕೇ ಎನ್ನುವುದು. ಅದಕ್ಕೆ ಯಾವ ಪ್ರಬಲವಾದ ಕಾರಣಗಳೂ ಇವೆ ಎಂದು ನಮಗೆ ಕಂಡು ಬರಲಿಲ್ಲ. ಕಂದಾಯವನ್ನು ಇರುವ ಹಾಗೇ ಮುಂದುವರಿಸಿಕೊಂಡು ಬರಲಿಕ್ಕೆ ಹೋದರೆ ರಚನ ಭ್ರಷ್ಟ ಸರಕಾರದವರು ಎಂದು ಹೇಳುತ್ತಾರೆ. 1972ರಲ್ಲಿ ಚುನಾವಣೆಗಳು ಬರುತ್ತವೆ ಎಂದು ಇಲ್ಲಿ ಶ್ರೀಮಾನ್ ಗೋಪಾಲಗೌಡರು ಹೇಳಿದರು. ಚುನಾವಣೆ ಎನ್ನುವುದು ಕೇವಲ ಕಾಂಗ್ರೆಸ್ಸು ಪಕ್ಷ ಒಂದಕ್ಕೆ ನಡೆಯುವುದಿಲ್ಲ. ಚುನಾವಣೆಯಲ್ಲಿ ವಿರೋಧ ಪಕ್ಷದವರೂ ಬರುತ್ತಾರೆ. 1972ರ ಚುನಾವಣೆಯಲ್ಲಿ ಜನರ ಮುಂದೆ ಹೋದಾಗ ಸರಕಾರದವರು ಏನೇನು ಮಾಡಿದ್ದಾರೆ ನೀವೇನು ಮಾಡಿದ್ದೀರಿ ಎನ್ನುವುದನ್ನೆಲ್ಲಾ ವಿಮರ್ಶೆ ಮಾಡುವ ಜನ ಇದ್ದಾರೆ. ಇದರಂತೆ ವಿಮರ್ಶೆ ಮಾಡಿ ಅವರು ವೋಟು ಕೊಡುತ್ತಾರೆ. ನಾವು, ನೀವು ಎಲ್ಲರೂ ಚುನಾವಣೆಗೆ ಬರುತ್ತೇವೆ ಎಂದು ಹೇಳಬಹುದಾಗಿತ್ತು. ಅದುದರಿಂದ ನಾವು ರಚನ ಭ್ರಷ್ಟರಾಗಿದ್ದೇವೆ ಎನ್ನುವ ಮಾತನ್ನು ಇಲ್ಲಿ ಹೇಳುವುದು ಸರಿಯಲ್ಲ. ಇದು ಸಂಪೂರ್ಣವಾಗಿ ಸತ್ಯಕ್ಕೆ ದೂರವಾದ ವಿಚಾರ ಎಂದು ಇಲ್ಲಿ ಸ್ಪಷ್ಟಪಡಿಸಬಯಸುತ್ತೇನೆ. ಏನು ಭರವಸೆಗಳನ್ನು ಕೊಟ್ಟಿದ್ದರೋ ಅಂತಹ ಭರವಸೆಗಳನ್ನು ಸರಕಾರ ಈ ತಿದ್ದುಪಡಿ ಮಸೂದೆ ಮೂಲಕ ಈಡೇರಿಸಿದ್ದಾರೆ.

(ಶ್ರೀ ಕೆ. ಎಚ್. ಶ್ರೀನಿವಾಸ)

ವಿರೋಧ ಪಕ್ಷದ ನಾಯಕರು ಇಲ್ಲಿ ಇನ್ನೊಂದು ವಿಚಾರ ಹೇಳಿದರು. ನಮ್ಮಲ್ಲಿ ಯಾವ ರೆಕ್ಕೆ ಪತ್ರಗಳೂ ಇಲ್ಲ ಎಂದು ಟೀಕೆ ಮಾಡಿದರು. ನಮ್ಮಲ್ಲಿ ಎಷ್ಟು ರೆಕ್ಕೆ ಪತ್ರಗಳು ಇರಬೇಕೋ ಅವೆರಾ್ಲ ಇವೆ. ಇದರಂತೆ ಜನರಿಗೆ ನೋಟೀಸುಗಳೂ ಹೋಗುತ್ತವೆ. ಅದರಲ್ಲಿ ರೆಕ್ಕೆಗಳನ್ನೂ ನಮೂದಿಸಿ ಕಳುಹಿಸುತ್ತಾರೆ. ಇದರಲ್ಲೇನು ರೋಷ ಇಲ್ಲ. ಇವೊತ್ತು ಕಂದಾಯ ಇರಬೇಕೇ ಬೇಡವೇ ಮತ್ತು ರೈತರಿಂದ ಕಂದಾಯವನ್ನು ವಸೂಲು ಮಾಡುವಾಗ ಅವರಿಗೆ ಬೇಕಾದಷ್ಟು ಕರುಕುಳಗಳು ಆಗುತ್ತಿವೆ ಎಂದು ಶ್ರೀಮಾನ್ ಗೋಪಾಲಗೌಡರು ಇಲ್ಲಿ ಸುದೀರ್ಘವಾದ ಭಾಷಣವನ್ನು ಮಾಡಿದರು. ಆದರೆ ನಾನು ಅವರ ಭಾಷಣದ ಬಗ್ಗೆ ಇಲ್ಲಿ ಹೆಚ್ಚಾಗಿ ಟೀಕೆ ಮಾಡಲು ಬಯಸುವುದಿಲ್ಲ. ಅವರು ಮೂಲಭೂತವಾಗಿ ಈ ದೇಶದಲ್ಲಿರುವ ದೀನ ದಲಿತರಾಗಿರುವ ಜನಕ್ಕೆ ಅನುಕೂಲ ಮಾಡಿಕೊಡಬೇಕು ಎಂದು ಇಲ್ಲಿ ತರ್ಕ ಬದ್ಧವಾದ ಭಾಷಣ ಮಾಡಿದ್ದನ್ನು ನಾವು ಕೇಳಿದ್ದೇವೆ.

ಆದರೆ ನನ್ನ ಒಂದೇ ಒಂದು ಸಂದೇಹ ಏನೆಂದರೆ ಅವರ ಭಾಷಣಕ್ಕೂ ನಮ್ಮ ಸಭೆಯು ಮುಂದಿರತಕ್ಕ ತಿದ್ದುಪಡಿ ಮಸೂದೆಗೂ ಏನಾದರೂ ಸಂಬಂಧ ಇದೆಯೇ ಎಂದು. ಶ್ರೀಮಾನ್ ಗೋಪಾಲಗೌಡರ ಭಾಷಣಕ್ಕೆ ನಾನು ಟೀಕೆಟಿಪ್ಪಣಿ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಒಂದು ಪತ್ರಿಕೆಯಲ್ಲಿ ಅವರ ಭಾಷಣದ ಬಗ್ಗೆ ಏನೋಂದು ಸಣ್ಣ ಪ್ಯಾರಾ ನನ್ನ ಗಮನಕ್ಕೆ ಬಂತೋ ಅದನ್ನು ಮಾತ್ರ ಇಲ್ಲಿ ಓದುತ್ತೇನೆ. ಅದು ಹೀಗಿದೆ —

> "The long-winding speech of Mr. Gopala Gowda, SSP leader—the only speaker of the day—however failed to throw any significant points except his characterstic sarcastic digs at the Government sending peels of laughter acr ss the thinly—attended House."

ಮೂಲಭೂತವಾದ ಪ್ರಶ್ನೆ ಎತ್ತಿದ್ದಾರೆ. ಅವರು ಎತ್ತಿದ ಪ್ರಶ್ನೆಗೂ ನಮ್ಮ ಮುಂದೆ ಇರುವ ತಿದ್ದುಪಡಿಗೂ ಸಂಬಂಧವನ್ನು ಕಲ್ಪಿಸುವುದು ಅತ್ಯಂತ ಕಷ್ಟಸಾಧ್ಯವಾದ ವಿಚಾರ ಎಂದು ತಮ್ಮ ಮೂಲಕ ಈ ಸಭೆಗೆ ವಿನಂತಿ ಮಾಡಿಕೊಳ್ಳುತ್ತೇನೆ.

ಇಷ್ಟು ಮಾತ್ರ ಹೇಳುತ್ತೇನೆ. ಸರ್ಕಾರದವರು ಈ ಸರ್ವೆ ಸೆಟಲ್‌ಮೆಂಟನ್ನು ಪುನಃ ಮಾಡಬೇಕೆಂದು, ಒಂದು ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದಾರೆ; ಒಂದು ಸದುದ್ದೇಶದಿಂದ ಈ ಅಮೆಂಡ್‌ಮೆಂಟನ್ನು ತಂದಿದ್ದಾರೆ. ಈವೊತ್ತು ಎಲ್ಲೆಲ್ಲಿ ಜಾಸ್ತಿ, ಎಲ್ಲೆಲ್ಲಿ ಕಡಿಮೆ ಎನ್ನುವುದನ್ನು ಯಾವ ಆಧಾರದ ಮೇಲೆ ನಿರ್ದಿಷ್ಟ ಪಡಿಸುತ್ತಾರೆ ಎನ್ನುವುದಕ್ಕೆ ಸರ್ವೆ ಅಂಡ್ ಸೆಟಲ್‌ಮೆಂಟ್ ಪ್ರಿನ್ಸಿಪಲ್‌ಗಳು ಇವೆ. ಆ ಪ್ರಿನ್ಸಿಪಲ್‌ಗಳು ಪೂರ್ತಿ ವೈಜ್ಞಾನಿಕವಲ್ಲದಿರಬಹುದು. ಆದರೆ ಅವು ಅವೈಜ್ಞಾನಿಕವೇನೂ ಅಲ್ಲ. ಸರ್ವೆ ಅಂಡ್ ಸೆಟಲ್‌ಮೆಂಟ್ ಮಾಡುವುದಕ್ಕೆ ಡಿಸ್ಕ್ರಿಷನ್ ಪಾತ್ರ ಬಹಳಮಟ್ಟಿಗೆ ಇದೆ. ಎಷ್ಟೇ ಪ್ರಿನ್ಸಿಪಲ್‌ಗಳನ್ನು ಅಪ್ಲೈ ಮಾಡಿದರೂ, ಗೋಪಾಲಗೌಡರು ತುದಿ ಪ್ಯಾರಾದಲ್ಲಿ ಏನು ಹೇಳುತ್ತಾರೆ ಎಂದರೆ ಸರ್ವೇಯರ ಪಾತ್ರವೇ ಬಹಳ ಮಹತ್ವವಾಗಿದ್ದು ಕೊಂಡಿದೆ ಅನ್ನುತ್ತಾರೆ. ಒಂದು ಜೋನ್‌ನಲ್ಲಿ ಅಥವಾ ಒಂದು ಕ್ಷೇತ್ರದಲ್ಲಿ ಎಲ್ಲೆಲ್ಲಿ ರೀಸೆಟಲ್‌ಮೆಂಟ್ ಆರ್ಡರ್ ಮಾಡಬಹುದು ಎಂದರೆ, ಎಲ್ಲೆಲ್ಲಿ ಕಂದಾಯ 100 ಕ್ಕೆ 100 ರಷ್ಟು, ಅಂದರೆ ಒಂದಕ್ಕೆ 2 ಪಟ್ಟು ಜಾಸ್ತಿಯಾಗಿದೆಯೋ ಅಲ್ಲಿ ಪುನಃ ಸರ್ವೆ ಅಂಡ್ ಸೆಟಲ್‌ಮೆಂಟ್ ಮಾಡಬೇಕು ಅನ್ನತಕ್ಕಂಥಾದ್ದು ಸರ್ಕಾರದ ಅಂತರಂಗದಲ್ಲಿರಬೇಕಾದ ವಿಚಾರ. ಮಾನ್ಯ ರೆವಿನ್ಯೂ ಸಚಿವರು ಈ ರೀಸೆಟಲ್‌ಮೆಂಟ್ ಪುನಃ ಮಾಡುವಾಗ ಎತ್ತಿಯೂ ಈಗಿರುವುದಕ್ಕಿಂತ ಎರಡುಪಟ್ಟು ಜಾಸ್ತಿಯಾಗದಂತೆ ಸರ್ಕಾರ ಎಚ್ಚರಿಕೆ ವಹಿಸುತ್ತದೆ ಎಂಬ ನಿರ್ದಿಷ್ಟವಾದ ಉತ್ತರವನ್ನು ಕೊಡಬೇಕು. ರೀಸೆಟಲ್‌ಮೆಂಟ್ ಆರ್ಡರ್ ಮಾಡಿದಾಗಲೂ ಸಹ ಪ್ರಿನ್ಸಿಪಲ್‌ಗಳನ್ನು ಅಮೆಂಡ್‌ಮಾಡುವುದಕ್ಕೆ ಸಾಧ್ಯ ಇದೆ. ಎಷ್ಟೇ ಪ್ರಿನ್ಸಿಪಲ್‌ಗಳಿದ್ದರೂ ಮೇಲಿಂದ ಕೆಳಗೆ, ಕೆಳಗಿಂದ ಮೇಲಕ್ಕೆ ಹಾಕುವುದಾದರೆ ಅವು ಪ್ರಯೋಜನವಾಗುವುದಿಲ್ಲ. ರೆವಿನ್ಯೂ ಸೆಟಲ್‌ಮೆಂಟ್ ಪ್ರಿನ್ಸಿಪಲ್‌ಗಳ ಪ್ರಕಾರ ಕನ್‌ಕ್ಲೂಷನ್‌ಗೆ ಬರಬೇಕಾದರೆ ಸ್ಯಾಂಡರ್ಡ್ ರೇಟುಗಳನ್ನು ನಿರ್ಧರಿಸಬೇಕಾಗಿದ್ದರೆ ಇಂಥದೇ ತೀರ್ಮಾನಕ್ಕೆ ಬರುವುದಿಲ್ಲ ಎಂದು ಹೇಗೆ ಹೇಳುವುದು? ಕಂದಾಯದ ಪ್ರಮಾಣ ಒಂದಕ್ಕೆ ಎರಡು ಪಟ್ಟು ಜಾಸ್ತಿಯಾಗದೆ ಇರುವಂತೆ ಯಾವ ಗ್ಯಾರಂಟಿ. ಈ ಒಂದು ಪ್ರಶ್ನೆಯನ್ನು ರೆವಿನ್ಯೂ ಸಚಿವರಿಗೆ ಕೇಳಲು ಬಯಸುತ್ತೇನೆ. ಹೇಗೆ ಮಾಡಬೇಕು ಅನ್ನುವುದು ಅವರಿಗೆ ಬಿಟ್ಟ ವಿಚಾರ. ಈ ಸಭೆಗೆ ಹಾಗೂ ರೆವಿನ್ಯೂ ಸಚಿವರಿಗೆ ನನಗಿಂತಲೂ ಚೆನ್ನಾಗಿ ಗೊತ್ತಿದೆ. ರೀಸೆಟಲ್‌ಮೆಂಟ್ ಮಾಡುವುದಕ್ಕೆ

ಪುನಃ ಎಲ್ಲೆಲ್ಲಿ ಆರ್ಡರ್ ಮಾಡುತ್ತಾರೋ ಅಲ್ಲಿ ಭೂಕಂದಾಯ ಹೆಚ್ಚುವರಿ ಈಗಿರುವುದಕ್ಕಿಂತ ಎರಡು ಪಟ್ಟು ಜಾಸ್ತಿಯಾಗುವ ಸಂದರ್ಭ ಬಂದರೆ ಈ ಪ್ರಾವಿಷನ್‌ನಲ್ಲಿ ನಿರೀಕ್ಷಿಸಿದಂಥ ಪರಿಣಾಮ ಬರುವುದಿಲ್ಲ. ಎಲ್ಲೆಲ್ಲಿ ಆರ್ಡರ್ ಮಾಡುತ್ತಾರೆ, ಅಲ್ಲಲ್ಲಿ ನಿರೀಕ್ಷಿಸಿದ ಪರಿಣಾಮ ಬರುವ ರೀತಿಯಲ್ಲಿ ಅನಕ್ಕೆ ಪಹಸಿ, ಕ್ರಮವನ್ನು ಯೋಚಿಸಬೇಕಾದುದು ಸರ್ಕಾರದ ಜವಾಬ್ದಾರಿ.

ಜನರ ಭಾವನೆಯಾದರೂ ಕಂದಾಯವನ್ನು ತೆಗೆದುಹಾಕಿ ಎಂಬ ವಿಚಾರ ಅವರಲ್ಲಿ ಆಸ್ಪಿದ್ದಂತಿಲ್ಲ. ಒಂದಕ್ಕೆ ಎರಡಕ್ಕಿಂತ ಮೇಲೆ ವಿಧಿಸುವುದು ಸರಿಯಲ್ಲ. ಪುನಃ ರಿವಿಜನ್ ಸೆಟಲ್‌ಮೆಂಟ್ ಮಾಡುವಾಗ ಎಲ್ಲಿಯೂ ಕೂಡ ಒಂದಕ್ಕೆ ಎರಡಕ್ಕಿಂತಲೂ ಜಾಸ್ತಿಯಾಗದ ರೀತಿಯಲ್ಲಿ ಮಾಡಬೇಕು. ಇದು ಆಗದೆ ಹೋದರೆ ಮಾತ್ರ, ರೀಸೆಟಲ್‌ಮೆಂಟ್ ಆರ್ಡರ್ ಮಾಡಿದರೂ ಸಹ, ಜನರು ನಿರೀಕ್ಷಿಸಿದಂಥ ಪರಿಹಾರವನ್ನು ಒದಗಿಸಿದಂತಾಗುವುದಿಲ್ಲವೆಂದು ರೆವಿನ್ಯೂ ಸಚಿವರ ಗಮನಕ್ಕೆ ತರುತ್ತೇನೆ. ಸರಕಾರ ಸಮಗ್ರ ತಿದ್ದುಪಡಿ ಮಸೂದೆ ತರುವುದಾಗಿ ಆಶ್ವಾಸನೆ ನೀಡಿತ್ತೇ ವಿನಾ ಭೂಕಂದಾಯದ ಬಗ್ಗೆ ಇವತ್ತಿನವರೆಗೆ ಈ ರೆವಿನ್ಯೂ ಸಚಿವರೇ ಆಗಲಿ, ಹಿಂದಿದ್ದ ರೆವಿನ್ಯೂ ಸಚಿವರೇ ಆಗಲಿ ಸಮಗ್ರ ವಿಧೇಯಕ ತರುವುದಾಗಿ ಆಶ್ವಾಸನೆ ನೀಡಿ ಅದನ್ನು ಈಡೇರಿಸಬೇ ಇದ್ದರೆ, ಈಡೇರಿಸುವ ವಿಚಾರ ಮಾಡಬಹುದಾಗಿತ್ತು. ಸರ್ಕಾರದವರು ಏನು ಆಶ್ವಾಸನೆ ಕೊಟ್ಟಿದ್ದರೋ ಅದನ್ನು ಈ ತಿದ್ದುಪಡಿ ಮಸೂದೆಯಿಂದ ಈಡೇರಿಸುತ್ತಿದ್ದಾರೆ. ಈ ಮಸೂದೆಯಿಂದ ಏನು ಅಧಿಕಾರವನ್ನು ಸರ್ಕಾರದವರು ತೆಗೆದುಕೊಂಡಿದ್ದಾರೋ ಅದನ್ನು ಒಳ್ಳೆಯ ಸದುದ್ದೇಶದಿಂದ ಕಾರ್ಯಗತ ಮಾಡಿ ಜನರಿಗೆ ಪರಿಹಾರ ಒದಗಿಸುತ್ತಾರೆಂಬ ನಂಬಿಕೆ ಇದೆ. ವಿರೋಧಪಕ್ಷದ ಸ್ನೇಹಿತರೂ ಈ ತಿದ್ದುಪಡಿಯಿಂದ ಸಮರ್ಥವಾದ ಪರಿಹಾರವನ್ನು ಕೈಕೊಳ್ಳಬಹುದೆಂದು ಮನಗಾಣಲೇಬೇಕು. ವಿರೋಧ ಪಕ್ಷದಲ್ಲೂ ಬುದ್ಧಿವಂತರೂ, ಶಕ್ತಿವಂತರೂ ಇದ್ದಾರೆ. ಅವರಿಗೂ ಸೂಕ್ತ ಪರಿಹಾರ ಕ್ರಮಗಳನ್ನು ಸರ್ಕಾರದವರು ಕೈಗೊಳ್ಳದೇ ಇರುವುದಿಲ್ಲವೆಂದು ಗೊತ್ತಿದೆ. ಈ ಮಸೂದೆ ಇದೇ ಅಧಿವೇಶನದಲ್ಲಿ ಅಂಗೀಕಾರವಾದರೆ, ಅವರು ಜನತೆಯ ಮುಂದೆ ಏನು ಈ ಒಂದು ಕಂದಾಯದ ಸಮಸ್ಯೆಯನ್ನು ಅದ್ಯತಾಕಾರವಾಗಿ ಎತ್ತಿ, ಸರ್ಕಾರದ ವಿಫಲತೆಯನ್ನು ಜನರ ಮೇಲೆ ಅಧಿಕಾರುಗಳ ದಬ್ಬಾಳಿಕೆಯನ್ನೂ ಪ್ರತಿಪಾದಿಸುತ್ತಿದ್ದಾರೆ, ಆ ಅನ್ಯಾಯ ಮಾಯವಾದೀತೆಂಬ ಭಯ ವಿರೋಧಪಕ್ಷದವರಿಗೆ ಕಾಣಿಸುತ್ತಿದೆ. ಆದುದರಿಂದ ಆ ಭಯ ಬಿಟ್ಟು ಜನಗಳಿಗೆ ಅನುಕೂಲವಾಗುವ ಈ ತಿದ್ದುಪಡಿ ಮಸೂದೆಯನ್ನು ಸರ್ವಾನುಮತದಿಂದ ಅಂಗೀಕರಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಐ. ಸೋಮಶೇಖರಪ್ಪ.—ಈ ಸಭೆ 7 ಗಂಟೆಯವರೆಗೆ ಇದೆ. ಅರ್ಧಗಂಟೆ ಡಿಸ್ಕಷನ್ ಯಾವಾಗ ತೆಗೆದುಕೊಳ್ಳುತ್ತೀರಿ?

ಉಪಾಧ್ಯಕ್ಷರು.—ಈ ಸಭೆಯ ಕಾರ್ಯಕಲಾಪಗಳು ಮುಗಿದ ಮೇಲೆ ಅರ್ಧಗಂಟೆ ಡಿಸ್ಕಷನ್ ತೆಗೆದುಕೊಳ್ಳುತ್ತೇನೆ.

Sri B. P. KADAM (Karwar).—Sir, The Mysore Land Revenue (Second Amendment) Bill, 1969, is under discussion. It has only five Clauses and those seek a few changes, deletions and additions.

In Clause 2, the words "a part of a district comprising" found to be superfluous in Section 10 of the original Act, is sought to be deleted. We have no objection to this clause.

In Clause 3, one or two words are sought to be inserted after the designation of the Superintendent of Land Records and the Assistant Superintendent of of Land Records. This, of course, is something consequential.

Then by Clause 5, another Section, namely, Section 114-A, is sought to be inserted after Section 114 of the principal Act. As I read through the Clause to be inserted, I find that lot of discretion is given to the State Government. The Clause itself begins with the words "if at any time after the introduction of a settlement of land revenue". Regarding the time from which the land revenue is leviable also, there

(SRI B. P. KADAM)

is discretion. So, there is double discretion for the Government. So, in both the sub-clauses (a) and (b), there is discretion for the Government; there is more discretion in sub-clause (b). In sub-clause (c), of course, there are certain provisions for making abjustment of land revenue amount. This, of course, is consequential.

Then under the proposed new Sections 122A and 122B, certain efficers have to issue notice to the occupant of the land liable to pay land revenue specifying the extent of land, the class of such land, the standard rate applicable and the land revenue payable thereon.

Then under the new Section 122B, the Deputy Commissioner has certain powers. He may*suo motu* pass such orders as he deems fit.

Under sub-section (1) (ii), he has got the right to consider applications received from individuals. Then there is a proviso in sub-section (3) under which if any person is aggrieved by an order of the Deputy Commissioner, he can appeal to the Divisional Commissioner whose orders shall be final. Under the first proviso, there is another princplie laid down that an order cannot be passed by the Deputy Commissioner against an applicant without giving him a chance of being heard. This, of course, was not necessary. All that is contemplated under this amending bill is only a category of zones which may be taken up for revision settlement under clause 4. The persons affected will be intimated by notice; the Deputy Commissioner has got certain rights. That is all that is envisaged under this amening bill; nothing more and nothing less.

6-30 P.M.

The other day the Minister for Law and Parliamentary Affairs stated candidly that the Government would introduce a comprehensive bill for regularising the assessment of land revenue. This bill judged in the context of his assurance is extremely treading a very narrow path; it is not comprehensive, not broad-based and conveys no principles. Judged by all standards it carries the agricurists no further.

In order to understand certain fundamental principles of taxation, especiall about land revenue and land tenures, the old Land Revenue Act will have to be gone through. I shall do so as briefly as possible. The old notion of land being held on behalf of the Crown as the lessee of the Crown by the agriculturists or the ryots no longer holds good. Formerly, the land belonged to the Crown and the occupant was considered to be in charge of it only as a lessee and the consideration was land revenue. Those old principles are now, of course, exploded. Now, land belongs to the State, that means, to the public who are the virtual sovereign or popular sovereign and the consideration for it is a little tax. Judged in this context we have to see whether the levy of land revenue in its present form can be justified. The land revenue System

to as old as history itself. It is a source of revenue to the State Exchequer from the most ancient times. Even to the British rulers till 1930 it was the principal source of revenue. Only after about 1930 the sources changed to some extent. We have been stressing that the Government must have certain principles for levying land revenue. First is that the weaker sections must be exemped from land revenue. We do not hold that the land is held on behalf of the State; we hold that the land belongs to the public who are the ultimate sovereign. They hold it as a matter of right and exploit it to serve the country at large. The hon. member Sri Gopala Gowda has narrated the extent of holdings by so many sections. We have been stressing from the very beginning that the uneconomic holdings must be exempted, that people with less than 5 acres must be exempted because 5 acres cannot make an economic holding. For example, take the case of a man having 10 acres of dry land with alluvial soil and with heavy rainfall. Because of heavy rainfall, the manure will be washed away and so he cannot make his livelihood. Whereas a man with 3 or 4 acres of land having assured rainfall or irrigation facilities can have three crops and can have a bumper crop and can have a luxurious life. So, we must see how far uneconomic holdings should be given relief. So, the question arises whether the earlier survey settlements were carried out according to certain principles. At least in our parts the original survey settlement and the revisional survey settlement were based on certain principles. They considered so many factors such as water facilities, how much the land can grow, cost of cultivation, communications, prices, labour, etc. The former Survey Settlement Officers felt that they had a great sense of responsibility in this matter. For example, Col. Anderson did survey settlement in our part; then there is the survey settlement of Ankola by Sri Yenamadi. Then there were some other survey settlements by other British officers in Karwar and Kumta also. They were mostly Britishers but there were one or two Indians also and they followed certain principles.

They moved round-by and large, to all the localities. They moved on foot, on bullock carts and on horses. Now in the present era of 1960's there are a good deal of roads, but in the olden days there were no roads. Now we have also conveyances like cars, jeeps and what not. Judged by the facilities available then the efforts put in by those people of 1870 and 1910 were far, far superior to the efforts put in by the present day people with all facilities who have done survey settlement. The performance of the present day people is not only miserable but also shameful. One Mr. Gai undertook survey settlement in Karwar in 1964. You know how he did his work. He sat in an airy room of the Deputy Commissioner's office for 3 to 6 months and wrote a report recommending doubling and trebling of the assessment in certain areas without following any principle. In the olden days Col. Anderson and Mr. Mac Gregor toured the entire villages through jungles and forests on foot, or on bullock cart or on horses inspected every spot and did their job very thoroughly. The basis on which assessments were recommended in 1910

(SRI B. P. KADAM)

does not now hold good in many places because there have been lot of changes from 1910. Now on account of heavy rainfall the fertility of the land has been completely washed away or on account of manure put in the soil the fertility has gone down very much. In 1910 the assessment was recommended on the basis that the land is fit for sugar cane cultivation, but now the tanks have been silted up and the fertility of the soil also has gone down and sugar cane cannot be grown there. On the basis that sugar cane could be grown in 1910 the assessment was recommened at Rs. 6 to 7 per acre in Karwar Taluk, but now the condition of the land is such that not even paddy could be grown there. Only one crop could be grown and even then Mr. Gai has reccommended doubling and in certain places even trebling of the assessment. All this he has done without even visiting the spot but only sitting in the cosy room of the Deputy Commissioner's Office for 6 months. He has not followed any principle while making this recommendation. I challenge the propriety in making this recommendation to double or treble the assessment in such areas. It has also to be remembered that some of these lands are ravaged by wild animals in the interior forests of North Kanara. In the olden days the villagers had enough protection from the wild animals because the forest rules were not so regorous then, they were very liberal. People could carry gun and gun powder of English make. But now there are a good deal of restrictions. Now it is very difficult even to get a gun licence. If an agriculturist applies for a gun licence he will have to pay a good deal of dakshina to the village officer, the tahsildar and the Assistant Commissioner before his application is recommended for issue of licence and then he had to pay similar dakshina to the police also from the village police to the S. I. Now so much effort is required to be put in to get a gun licence. Nowadays it is difficult to get a good gun. Formerly there was lot of local manufacture, but now that has been prohibited. So now it is very difficult to escape from the ravages of wild animals. Formerly the Kanara Forest Privilege Rules were very liberal and people could escape from the ravages of wild animals by beating the jungle up to 3 to 4 miles from the belt of their fields.

Now, there is no provision. Last time, in 1954, when the Mysore Forest Act was discussed here, I myself had tabled a good deal of amendments, but they were not adopted by this House –I have no grouse. The privileges granted the districts of North Kanara by the British rulers to have not been carried out or respected by this Government. Sir, the tiger menace has gone up considerably. In the old days, we used to get cartridges and the cost of 10 cartridges was only a rupee in 1937. Now it is Rs. 15 each cartridge and Rs. 25 for 3" cartridges, and it is going up. Of course, we get cartridges from the Kirkee factory at Poona. But, the difficulty is, if we use them against a bore or a tiger, they do not explode. That way our Indian Cartridges are extremely non-violent. Under such circumstances, what should we do to drive the

these wild animals ? Government is not giving us any facility. They cannot be driven by mantras. When the crop is ripe during the season, people put certain fire in the night, because they cannot get gunpowder.

MR. DEPUTY SPEAKER:—Please conclude in five minutes, because we have to take up half-an-hour discussion at 7.00.

Sri B. P. KADAM.—Sir, I respectfully submit that it is not possible. I have not made up a single point yet. In fact, I do not speak much; I am one of the quiet persons.

I was just saying how the present survey and settlement that was carried out four years back is totally inconsistent. In our area it is double, treble and has risen still further. It is not based on any principle, Sir, survey and settlement must be bassed upon certain principles. They should consider the types of land for the purpose of assessment, such as fallow lands, waste lands, etc. There are water logged areas along the rivers, and then there are areas of assured rainfall. But the fertility is extremely poor, the soil being alluvial, the manure being washed off and small tanks being silted. On such lands, only one crop can be grown. Even if the rain is 120" every year, these lands are always useless. The late Sri Kurvey, when he came to North Kanara, said : "there is crop every year." but virtually famine conditions exist every year". What he meant was, there is assured rain-fall, there is crop, but famine conditions exist everywhere. The land is subjected to heavy rain-fall and even if we put 50 cartloads of manure per acre, it is washed off and nothing is left. So, the Government cannot have one yard-stick to say that the entire west coast is having good rain-fall. That would be a curse inflicting and calculated misery upon the people, if the Govenment were to think like that. Of course, there are certain areas, where two crops and even three crops can be grown. I have no objection to such lands being assessed more. If there are irrigation facilities and if there is assured irrigation, such lands can be taxed more. I request that a person, who has an economic holding and whose entire income is not more than Rs. 2,000 per annum-I take Rs. 2,000 as a reasonable figure for a family—must be exempted from all types of land assessment. One may have three, five or ten acres of land with assured rainfall and irrigation, where he could have two to three crops.

MR. DEPUTY SPEAKER :—The Hon. Member may continue his speech tommorrow. I call upon hon. member Sri I. Somashekarappa to raise half-hour discussion.

Half an Hour Discussions arising out of Replies given to Starred Questions 943 *re:* Bulldozers, Borewell machines and tractors in the state with Government.

† ಶ್ರೀ ಐ. ಸೋಮಶೇಖರಪ್ಪ (ಹೊಸನಗರ).—ಮಾನ್ಯ ಅಧ್ಯಕ್ಷರೇ ಶ್ರೀಮತಿ ನಾಗರತ್ನಮ್ಮ ಹರೇಮಠ್ ಅವರು ಕಳುಹಿಸಿದ್ದ 943ನೆಯ ಪ್ರಶ್ನೆಯ ಬಗ್ಗೆ ಅರ್ಧಗಂಟೆಯ ಚರ್ಚೆಗೆ ಕಾರಣವಾಕಾಶ

(ಶ್ರೀ ಐ. ಸೋಮಶೇಖರಪ್ಪ)

ಮಾಡಿಕೊಡಬೇ ೆಂದು ನಾನು ಅಧ್ಯಕ್ಷರಲ್ಲಿ ಪ್ರಾರ್ಥನೆ ಮಾಡಿಕೊಂಡಿದ್ದೆನು. ಮಾನ್ಯ ಅಧ್ಯಕ್ಷರು ದೊಡ್ಡ ಮನಸ್ಸು ಮಾಡಿ ಈ ಒಂದು ಚರ್ಚೆಗೆ ಈಗ ಅವಕಾಶ ಮಾಡಿಕೊಟ್ಟಿದ್ದಾರೆ.

7-00 P. M.

ನಮ್ಮ ರಾಜ್ಯದಲ್ಲಿರತಕ್ಕ ಬುಲ್‌ಡೋಜರ್‌ಸ್, ಟ್ರಾಕ್ಟರ್‌ಸ್, ಬ್ಲಾಸ್ಟರಿಂಗ್ ಮೆಷೀನ್‌ಗಳು, ಬೋರ್ ವೆಲ್ ಮಿಷನ್‌ಗಳ ವಿಚಾರದತ್ತ ಸರ್ಕಾರದವರ ಗಮನವನ್ನು ನಾನು ಸೆಳೆಯಲಿಚ್ಛಿಸುತ್ತೇನೆ. ಈ ದಿವಸ ಈ ಯಂತ್ರೋಪಕರಣಗಳು ನಿಜವಾಗಿಯೂ ರಾಜ್ಯದ ಹಿತದೃಷ್ಟಿಯಿಂದ, ಸರ್ಕಾರದವರ ಹಿತದೃಷ್ಟಿಯಿಂದ ಹಾಗೂ ರೈತರ ಹಿತದೃಷ್ಟಿಯಿಂದ ಯಾವ ರೀತಿ ಕೆಲಸಮಾಡುತ್ತಿವೆ ಅನ್ನುವುದನ್ನು ನಾನು ಈ ಮಾನ್ಯ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ನಮ್ಮ ರಾಜ್ಯದಲ್ಲಿ ಸುಮಾರು ವ್ಯವಸಾಯಕ್ಕೆ ಅನುಕೂಲವಾಗತಕ್ಕಂಥ ಜಮೀನು ಎರಡೂವರೆ ಕೋಟಿ ಎಕರೆಗಳಿದೆ. ಆ ಎರಡೂವರೆ ಕೋಟಿ ಎಕರೆ ಭೂಮಿಯಲ್ಲಿ ಸುಮಾರು 25 ಲಕ್ಷ ಎಕರೆ ನಿರಾವರಿಯಾಗತಕ್ಕ ಪ್ರದೇಶವಿದೆ. ನಮ್ಮ ರಾಜ್ಯದಲ್ಲಿರ್‌ಕ್ಕ ಇರಿಗೇಷನ್ ಪೊಟೆನ್ಶಿಯಾಲಿಟಿ ಎಷ್ಟಿದೆ ಎಂದರೆ ಅದು ಸುಮಾರು ಶೇಕಡ 26ರಷ್ಟಿದೆ ಎಂದು ಗೊತ್ತಾಗಿದೆ. ಅಂದರೆ ನಮ್ಮ ರಾಜ್ಯದಲ್ಲಿರತಕ್ಕ ನಾನ್ನೂ ಮತ್ತು ದೊಡ್ಡ ಎರಾ್ಲ ಕೆರೆಗಳನ್ನೂ ಕಟ್ಟಿ ಅವುಗಳಲ್ಲಿ ನೀರನ್ನು ತಡೆದರೆ ನಮ್ಮ ರಾಜ್ಯದಲ್ಲಿ ಇರಿಗೇಷನ್ ಪೊಟೆನ್‌ಷಿಯಲಿಟಿ ಶೇಕಡ 26 ರಷ್ಟು ಆಗುತ್ತದೆಂದು ಹೇಳುತ್ತಾರೆ. ಅದಕ್ಕಾಗಿ ನಾವಿನ್ನೂ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕಾಗಿದೆ. ಇನ್ನು ಇದರ ಜೊತೆಗೆ ನೀರಾವರಿ ಬೇಸಾಯಕ್ಕೆ ಅನ್‌ಟ್ಯಾಪ್‌ಡ್ ವಾಟರ್ ರಿಸೋರ್ಸ್‌ನನ್ನು ಅಂದರೆ ಸಬ್‌ಸಾಯಿಲ್ ವಾಟರನ್ನು ಪಡೆದು ಅದರಿಂದ ನಮ್ಮ ಬೇಸಾಯವನ್ನು ಅಭಿವೃದ್ಧಿ ಮಾಡಬೇಕಾಗಿದೆ. ಇದಕ್ಕೆ ನಮ್ಮ ವ್ಯವಸಾಯದ ಇಲಾಖೆಯವರು ತೀವ್ರ ಕ್ರಮವನ್ನು ಕೈಗೊಳ್ಳಬೇಕು. ಆದರೆ ನಮ್ಮ ವ್ಯವಸಾಯದ ಇಲಾಖೆಯವರು ಈ ಸಬ್‌ಸಾಯಿಲ್ ವಾಟರ್ ಮೂಲಕ ಇರಿಗೇಷನ್ ಪೊಟೆನ್‌ಷಿಯಲಿಟಿಯನ್ನು ಕೈಗೊಂಡಿಲ್ಲ ಎಂದು ನಾನು ಬಹಳ ದುಃಖದಿಂದ ಹೇಳಬೇಕಾಗಿದೆ. ನಮ್ಮ ವ್ಯವಸಾಯ ಹೆಚ್ಚಿಸತಕ್ಕ ಮಾರ್ಗದಲ್ಲಿ ಏನೇನೂ ಕ್ರಮಗಳನ್ನು ಇಲಾಖೆಯ ಮುಖ್ಯ ಗುರಿ ರೈತರಿಗೆ ಒಳ್ಳೆಯ ಉತ್ತಮ ಬೀಜಗಳನ್ನು ಒದಗಿಸುವುದು ರಾಸಾಯನಿಕ ಗೊಬ್ಬರವನ್ನು ಒದಗಿಸುವುದು ಜಮೀನುಗಳಿಗೆ ಹೆಚ್ಚಿನ ನೀರಾವರಿ ಅನುಕೂಲತೆಗಳನ್ನು ಕಲ್ಪಿಸುವುದು ಮತ್ತು ಎಲ್ಲೆಲ್ಲಿ ಭೂಮಿ ಸಮತಳವಾಗಿಲ್ಲವೋ ಅಲ್ಲಿ ಭೂಮಿಯನ್ನು ಸಮತಳ ಮಾಡಿಕೊಡುವುದು ಇವು ಬಹಳ ಮುಖ್ಯವಾದ ಕಾರ್ಯಗಳು. ಆದರೆ ಈ ಕಾರ್ಯಗಳನ್ನು ಸಾಧಿಸುವುದರಲ್ಲಿ ನಮ್ಮ ವ್ಯವಸಾಯದ ಇಲಾಖೆ ಎಷ್ಟರಮಟ್ಟಿಗೆ ಸಫಲವಾಗಿದೆ ಎಂಬುದನ್ನು ಕೆಲವು ಅಂಕಿ ಅಂಶಗಳನ್ನು ಇಟ್ಟು ಕೊಂಡು ನೋಡೋಣ. ಆ ದಿವಸ ಮಾನ್ಯ ಸಚಿವರು ಈ ಪ್ರಶ್ನೆಗೆ ಉತ್ತರವನ್ನು ಕೊಡುತ್ತಾ ನಮ್ಮಲ್ಲಿ 97 ಬುಲ್‌ಡೋಜರ್‌ಗಳಿವೆ, 60 ಬೋರ್‌ವೆಲ್ ಮಿಷೀನ್‌ಗಳಿವೆ, 45 ಟ್ರಾಕ್ಟರುಗಳಿವೆ, 40 ಬ್ಲಾಸ್ಟಿಂಗ್ ಮಿಷಿನ್ ಗಳಿವೆ ಎಂದು ಹೇಳಿದ್ದರು. ಇಷ್ಟೂ ನಮ್ಮ ವ್ಯವಸಾಯದ ಇಲಾಖೆಯ ಸುಪರ್ದಿನಲ್ಲಿವೆ ಎಂಬುದಾಗಿ ಹೇಳಿದ್ದಾರೆ. ನಮ್ಮಲ್ಲಿರತಕ್ಕ 97 ಬುಲ್‌ಡೋಜರುಗಳು ಇಲ್ಲಿ ಎಷ್ಟು ಕೆಲಸ ಮಾಡಿವೆ ಎಂಬುದನ್ನು ನೋಡುವುದಾದರೆ 1966-67ರಲ್ಲಿ 9261 ಎಕರೆಗಳಷ್ಟು ಭೂಮಿಯನ್ನು ಸಮತಳ ಮಾಡಿವೆ. ಅನಂತರ 1967-68 ರಲ್ಲಿ 10982 ಎಕರೆಗಳನ್ನು ಸಮತಳ ಮಾಡಿವೆ. ಅಂದರೆ ನಮ್ಮ ವ್ಯವಸಾಯದ ಇಲಾಖೆಯಲ್ಲಿ ರಜಾ ದಿನಗಳನ್ನು ಕಳೆದು ಹಾಗೂ ರಿಪೇರಿಯ ಬಗ್ಗೆ ಹಿಡಿದ ದಿನಗಳನ್ನು ಕೈಬಿಟ್ಟು ಇನ್ನು ವರ್ಷದಲ್ಲಿ ಕನಿಷ್ಟ 300 ದಿನಗಳು ವರ್ಕಿಂಗ್ ಡೇಸ್ ಎಂದು ಇಟ್ಟುಕೊಂಡಾಗ್ಯೂ ಇವು ಒಂದು ತಿಂಗಳಲ್ಲಿ 300 ಎಕರೆಗಳನ್ನು ಸಮತಳ ಮಾಡಿದಂತೆ ಆಯಿತು. ಅಂದರೆ ಸರಾಸರಿ ಮೂರು ದಿನಕ್ಕೆ ಒಂದು ಎಕರೆ ಭೂಮಿಯನ್ನು ಸಮತಳ ಮಾಡಿದಂತಾಯಿತು. ನಮ್ಮ ಬುಲ್‌ಡೋಜರುಗಳು ಮತ್ತು ವ್ಯವಸಾಯದ ಇಲಾಖೆ ಎಷ್ಟು ಎಫಿಸಿಯೆಂಟಾಗಿ ಕೆಲಸಮಾಡಿವೆ ಎಂಬುದನ್ನು ಇದು ಎತ್ತಿ ಹಿಡಿಯುತ್ತದೆ. ಒಂದು ಎಕರೆ ಭೂಮಿಯನ್ನು ಸಮತಳ ಮಾಡುವುದಕ್ಕೆ 3 ದಿನಗಳನ್ನು ತೆಗೆದುಕೊಂಡರೆ ರೈತನಾಗಲೀ ರಾಜ್ಯವಾಗಲಿ ಉದ್ಧಾರವಾಗುತ್ತದೆಯೇ, ಎಂದು ಕೇಳುತ್ತಿದ್ದೇನೆ. ನಾನು ಇಲ್ಲಿ ಈಗ ಹೇಳುತ್ತಿರುವ ಅಂಕಿ ಅಂಶಗಳೆಲ್ಲಾ ನಮಗೆ ಸರ್ಕಾರದವರೇ ಒದಗಿಸಿರತಕ್ಕವುಗಳಾಗಿವೆ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ 97 ಬುಲ್‌ಡೋಜರುಗಳನ್ನು ಇಟ್ಟುಕೊಂಡು 92 ಸಾವಿರ ಎಕರೆ ಭೂಮಿಯನ್ನು ಸಮತಳ ಮಾಡಿದ್ದಾರೆ. ಅಂದರೆ ಅವುಗಳಿಂದ 5 ವರ್ಷಗಳ ಅವಧಿಯಲ್ಲಿ ಒಂದು ಲಕ್ಷ ಎಕರೆ ಕೂಡ ಸಮ ಮಾಡುವುದಕ್ಕೆ ಆಗಲಿಲ್ಲ ಎಂದ ಹಾಗಾಯಿತು. ಇದಿಷ್ಟೂ ನಮ್ಮ ಬುಲ್‌ಡೋಜರುಗಳ ಹಾಗೂ ವ್ಯವಸಾಯದ ಇಲಾಖೆಯ ದಕ್ಷತೆಯ ಬಗ್ಗೆ ಹೇಳಿದ್ದಾಯಿತು.

ಇನ್ನು ಬೋರ್‌ವೆಲ್‌ಗಳ ಮತ್ತು ಡ್ರಿಲ್ಲಿಂಗ್ ಮೆಷೀನ್‌ಗಳ ವಿಚಾರಕ್ಕೆ ಬಂದರೆ ಇವುಗಳ ಬಗ್ಗೆ ಸರ್ಕಾರದವರು ತಪ್ಪು ತಪ್ಪು ಅಂಕಿ ಅಂಶಗಳನ್ನು ಈ ಸಭೆಗೆ ಒದಗಿಸಿದ್ದಾರೆ. 1961–62ರಲ್ಲಿ 71 ಬಾವಿಗಳನ್ನು ತೆಗೆದಿದ್ದಾರೆಂದು ಹೇಳಿದ್ದಾರೆ. ಅದಾದನಂತರ 1967–68ಕ್ಕೆ ಶ್ರೀ ವೆಂಕಟಗಿರಿಯಪ್ಪನವರ ಪ್ರಶ್ನೆಗೆ ಮಾನ್ಯ ಸಚಿವರು ಒಂದು ಸಾರ್ತಿ 90 ಬಾವಿಗಳನ್ನು ತೆಗೆಸಲಾಗಿದೆ ಎಂದು ಹೇಳಿ ಮತ್ತೆ ಅದೇ ಸಾಲಿನಲ್ಲಿ ಅಂದರೆ 1967-68ರಲ್ಲಿ 97 ಬಾವಿಗಳನ್ನು ತೆಗೆಸಲಾಗಿದೆ ಎಂದು ಹೇಳಿದ್ದಾರೆ. ಹೀಗೆ ಮಂತ್ರಿಗಳು ಒಂದೊಂದು ಸಾರ್ತಿ ಒಂದೊಂದು ರೀತಿಯ ಉತ್ತರವನ್ನು ಓದಗಿಸಿದ್ದಾರೆ. ಶ್ರೀಮತಿ ನಾಗರತ್ನಮ್ಮನವರು ಕೇಳಿದ್ದ ಪ್ರಶ್ನೆಗೆ ಉತ್ತರ ಕೊಡುತ್ತಾ 71 ಬಾವಿಗಳನ್ನು ತೆಗೆಯಲಾಗಿದೆ ಎಂದು ಉತ್ತರ ಹೇಳಿದ್ದಾರೆ. ಅಂದರೆ ಶ್ರೀ ವೆಂಕಟಗಿರಿಯಪ್ಪನವರ ಪ್ರಶ್ನೆಗೆ ಹೇಳಿದಂತೆ 97 ಬಾವಿಗಳೆಂದಾಗ ಆ 27 ಬಾವಿಗಳು ಎಲ್ಲಿಂದ ಬಾದೂ ಆದವು? ಅವುಗಳನ್ನು ಎಲ್ಲಿಂದ ಮಾಯಾಮಂತ್ರ ಮಾಡಿ ಮಾಡಿಸಿದರು? ಹೀಗೆ ಸರ್ಕಾರದವರು ಕೊಡತಕ್ಕ ಅಂಕಿ ಅಂಶಗಳನ್ನು ಸದಸ್ಯರು ನಂಬಬೇಕೋ ನಂಬಬಾರದೋ ಅಥವಾ ಅವುಗಳನ್ನು ನಾವು ಒಂದು ಬೋಗಸ್ ಫಿಗರ್ಸ್ ಎಂದೂ ಭಾವಿಸಬೇಕೋ ಒಂದು ತಿಳಿಯುದಾಗಿದೆ. ಒಂದೊಂದು ಡ್ರಿಲ್ಲಿಂಗ್ ಯಂತ್ರವು ಒಂದು ವರ್ಷದಲ್ಲಿ ಒಂದೂವರೆ ಬಾವಿಯನ್ನು ತೆಗೆದಿದೆ. ಇದೇ ಯಂತ್ರಗಳು ಯಾರಾದರೂ ಖಾಸಗೀ ಜನರಲ್ಲಿದ್ದರೆ ಅವರು ಡ್ರೈವರುಗಳ ಕಂಡಕ್ಟರ ಹಾಗೂ ಆಳುಗಳ ಸಂಬಳ ಸಾರಿಗೆಯನ್ನು ಕಳೆದು ಸಾವಿರಾರು ರೂಪಾಯಿಗಳ ಲಾಭ ಸಂಪಾದನೆಯನ್ನು ಮಾಡುತ್ತಿದ್ದರು. ಇತ್ತೀಚೆಗೆ ಸರ್ಕಾರದವರು ಪೋಲೆಂಡಿನಿಂದ 17 ಲಕ್ಷದ 70 ಸಾವಿರ ರೂಪಾಯಿಗಳನ್ನು ಕೊಟ್ಟು 4 ದೊಡ್ಡ ರಿಗ್ಸ್‌ಗಳನ್ನು ತರಿಸಿದ್ದಾರೆ. ಅವು ಎಲ್ಲ ಕೆಲಸಮಾಡುತ್ತಿವೆಯೋ ಗೊತ್ತಿಲ್ಲ. ಅಲ್ಲದೆ ಆ ಯಂತ್ರಗಳನ್ನು ನಡೆಸಬಲ್ಲ ಚೈತನ್ಯವುಳ್ಳ ಡ್ರೈವರುಗಳು ನಮ್ಮಲ್ಲಿದ್ದಾರೆಯೇ? ಅಂಥ ಸಾಮರ್ಥ್ಯವುಳ್ಳ ಜನರು ಇದ್ದಾರೆಂಬ ನಂಬಿಕೆ ನನಗಿಲ್ಲ. ಇನ್ನು ವೆಲ್ ಬೋರಿಂಗ ಮಿಷಿನ್‌ಗಳು ವ್ಯವಸಾಯದ ಇಲಾಖೆಯ ಸುಪರ್ದಿನಲ್ಲೂ ಮೈನಿಂಗ್ ಅಂಡ್ ಜಿಯಲಾಜಿಕಲ್ ಇಲಾಖೆಯಲ್ಲೂ ಮತ್ತು ಹೆಲ್ತ್ ಇಲಾಖೆಯಲ್ಲೂ ಇರುತ್ತವೆ. ಹೀಗೆ ಇವುಗಳನ್ನು ಅಲ್ಲಲ್ಲಿ ಇಡುವುದಕ್ಕೆ ಬದಲಾಗಿ ಎಲ್ಲಾ ಯಂತ್ರಗಳನ್ನೂ ಒಂದು ಕಡೆಯಲ್ಲಿ ಒಂದು ಇಲಾಖೆಯ ಸುಪರ್ದಿನಲ್ಲಿ ಇಲ್ಲವೆ ಒಂದು ಕಾರ್ಪೊರೇಷನ್ ಮಾಡಿ ಅಲ್ಲಿ ಇವುಗಳನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ಇಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಹೀಗೆ ಇವುಗಳನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ಇಡದೆ ಇದ್ದ ಕಾರಣ 15 ವರ್ಷಗಳಿಂದ ಕೆಲಸ ಏನೇನೂ ಸಮರ್ಪಕವಾಗಿ ನಡೆದಿಲ್ಲ. ನಮ್ಮಲ್ಲಿ ಇರತಕ್ಕ ಟ್ರಾಕ್ಟರುಗಳ ಸಂಖ್ಯೆ ಬಹಳವಾಗಿ ಕಂಡರೂ ಅವುಗಳಲ್ಲಿ ಆರೋಗ್ಯವಾಗಿ ಕೆಲಸಕ್ಕೆ ಯೋಗ್ಯವಾಗಿರತಕ್ಕ ಯಂತ್ರಗಳೆಷ್ಟು ಎಂಬುದು ಮುಖ್ಯ. ದಿವಸಕ್ಕೆ ಈ ಟ್ರಾಕ್ಟರುಗಳು 2—3 ಎಕರೆಗಳನ್ನು ಉತ್ತರೆ ಅವುಗಳನ್ನು ಸುಧಾರಿಸುವುದಕ್ಕೆ ನಮ್ಮ ರಾಜ್ಯದ ಬಡ ರೈತರಿಂದ ಸಾಧ್ಯವೇ ಎಂಬುದನ್ನು ನಾವು ಆಲೋಚನೆ ಮಾಡಬೇಕಾಗಿದೆ. ಈ ಟ್ರಾಕ್ಟರುಗಳನ್ನು ಈ ದಿವಸ ಬಾಡಿಗೆಗೆ ಕೊಡಲಾಗುತ್ತಿದೆ ಎಂದು ಹೇಳಿದ್ದಾರೆ. ಒಂದೊಂದು ತಾಲ್ಲೂಕಿನಲ್ಲಿ 20—25 ಟ್ರಾಕ್ಟರುಗಳನ್ನು ಇಟ್ಟಿದ್ದರೆ ಅಲ್ಲಿ ಸಣ್ಣ ಮತ್ತು ದೊಡ್ಡ ರೈತರಿಗೆ ಅನುಕೂಲವಾಗಬಹುದು. ಈ ದಿವಸ ಆಂಧ್ರದಲ್ಲಿ ನೂರಕ್ಕೆ 40 ಎಕರೆ ತರಿ ಇದೆ. ತಮಿಳು ನಾಡಿನಲ್ಲಿ 26 ಪರ್ಸೆಂಟಿದೆ. ಅವರ ಮಟ್ಟಕ್ಕೆ ಬರಬೇಕಾದರೆ, ನಾವು ಇನ್ನೂ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ ನಮ್ಮಲ್ಲಿ ಬ್ಲಾಸ್ಟಿಂಗ್ ಮಿಷನ್‌ಗಳೂ ಮತ್ತು ಬೋರ್‌ವೆಲ್ ಯಂತ್ರಗಳಿದ್ದಾಗ್ಗೂ ವ್ಯವಸಾಯದ ಇಲಾಖೆ ದಕ್ಷತೆಯಿಂದ ಕೆಲಸ ಮಾಡುತ್ತಿಲ್ಲ. ಅಂದರೆ ವ್ಯವಸಾಯದ ಇಲಾಖೆಯಲ್ಲಿರತಕ್ಕ ಇಂಜಿನಿಯರಿಂಗ್ ಸೆಕ್ಷನ್ ದಕ್ಷತೆಯಿಂದ ಕೆಲಸ ಮಾಡುತ್ತಿಲ್ಲ.

ನಮ್ಮ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನ ಒಂದು ಇಂಜನಿಯರಿಂಗ್ ಸೆಕ್ಷನ್ ಎಷ್ಟರಮಟ್ಟಿಗೆ ದಕ್ಷತೆಯಿಂದ ಕೆಲಸ ಮಾಡುತ್ತಿದೆಯೆಂಬುದು ಅಂಕಿ ಅಂಶಗಳಿಂದಲೇ ಗೊತ್ತಾಗುತ್ತದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ನಿಜವಾಗಿ ತೀವ್ರ ಗಮನ ಹರಿಸಬೇಕು. ಈ ಇಲಾಖೆಯಲ್ಲಿರುವ ಇಂಜಿನಿಯರಿಂಗ್ ಶಾಖೆಗೆ ಒಬ್ಬ ಜಾಯಿಂಟ್ ಡೈರೆಕ್ಟರ್ ಇದ್ದಾರೆ. ಅಲ್ಲಿ ಜವಾನರು, ಟೈಪಿಸ್ಟ್‌ಗಳು ಎಲ್ಲರೂ ಇದ್ದಾರೆ. ಆಪರೇಟರ್ಸ್ ಇದ್ದಾರೆ. ಜೀಪ್ಸ್ ಇವೆ. ಅಲ್ಲಿ ಇವತ್ತು 10 ಲಕ್ಷ 60 ಸಾವಿರ ರೂಪಾಯಿಗಳನ್ನು ಅಲ್ಲಿನ ಸಿಬ್ಬಂದಿಗಾಗಿ ಖರ್ಚು ಮಾಡುತ್ತಿದ್ದಾರೆ. ಸರ್ಕಾರಕ್ಕೆ ಒಂದು ಬಾವಿ ತೆಗೆಯುವುದಕ್ಕೆ ಎಷ್ಟು ಖರ್ಚು ಬೀಳುತ್ತದೆ? ಆ ಹಣವನ್ನು ಈಗ ಸಿಬ್ಬಂದಿಗೆ ಕೊಡುವ ಹಣದಿಂದ ಅಥವಾ ಡಿಪ್ರಿಸಿಯೇಷನ್‌ನಿಂದ ತೆಗೆದುಕೊಂಡು ಈ ಬಾವಿ ಕೆಲಸ ಮಾಡಬಹುದು. ಒಂದು ಎಕರೆ ಭೂಮಿ ಸಾಗುವಳಿ ಮಾಡಬೇಕಾದರೆ ಎಷ್ಟು ರೂಪಾಯಿಗಳು ಖರ್ಚಾಗುತ್ತದೆ ಎನ್ನುವುದನ್ನು ಉತ್ತರ ಕೊಡುವಾಗ ಹೇಳಬೇಕು. ಸಿಬ್ಬಂದಿ ಖರ್ಚು, ಮೆಷನರಿ ಡಿಪ್ರಿಸಿಯೇಷನ್ ಎಷ್ಟು ಬರುತ್ತದೆಂಬುದನ್ನು ಯೋಜನೆ ಮಾಡಿ. ಒಂದು ಬೋರ್‌ವೆಲ್ ತೆಗೆಯಬೇಕಾದರೆ ಎಷ್ಟು ಖರ್ಚು ಮಾಡುತ್ತಾರೆಂಬುದನ್ನು ಯೋಜನೆ ಮಾಡಬೇಕು. ಇವರಿಗಿಂತ ಖಾಸಗೀ ಸಂಸ್ಥೆಗಳು ಎಷ್ಟೋ ಚೆನ್ನಾಗಿ ಕೆಲಸ

(ಶ್ರೀ ಐ. ಸೋಮಶೇಖರಪ್ಪ)

ಮಾಡುತ್ತವೆ. ಹಾಗಿರುವಾಗ ಇದಕ್ಕಾಗಿ ಒಂದು ಕಾರ್ಪೋರೇಷನ್ ಮಾಡಿದರೆ, ಅದು ಚೆನ್ನಾಗಿ ಕೆಲಸ ಮಾಡದೆ ದಿವಾಳಿಯಾಗುತ್ತದೆ ಎಂದು ಹೇಳಿದರೆ ಹೇಗೆ?

ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ಈ ಇಲಾಖೆಯಲ್ಲಿರತಕ್ಕ ಒಬ್ಬ ಜಾಯಿಂಟ್ ಡೈರೆಕ್ಟರ್ ಸತ್ಯವಂತ ಹಾಗೂ ನೀತಿವಂತನಾಗಿ ಬಹುದು. ಆದರೆ ಇವರು ಲಂಚಕೋರರು ಇರಬಹುದು. ದಯವಿಟ್ಟು ಈ ಇಲಾಖೆಯಲ್ಲಿ ಅಧಿಕಾರಿಗಳನ್ನು ಬಹಳ ವರ್ಷಗಳವರೆಗೆ ಇಡಬೇಡಿ. ಇವರನ್ನು ಇಲ್ಲಿಟ್ಟರೆ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ಇವರನ್ನು ಇಲ್ಲಿಂದ ವರ್ಗ ಮಾಡಬೇಕು. ದಕ್ಷ ಅಧಿಕಾರಿಗಳನ್ನು ದಯವಿಟ್ಟು ಇಲ್ಲಿಗೆ ತಂದುಕೊಡಿ. ಡ್ರಿಲಿಂಗ್ ಮೆಷಿನ್ಸ್ ಮತ್ತು ಬೋರ್‌ವೆಲ್ಸ್ ಗಳನ್ನು ಅಗ್ರಿಕಲ್ಚರಲ್ ಅಂಡ್ ಇಂಡಸ್ಟ್ರಿಯಲ್ ಕಾರ್ಪೊರೇಷನ್ ಮುಖಾಂತರ ಪಡೆದು ಪಬ್ಲಿಕ್ ಸೆಕ್ಟರ್‌ನಲ್ಲಿ ಒಂದು ಕಾರ್ಪೊರೇಷನ್ ಮಾಡಿ, ಇದರ ಅಡಿಟ್ಸ್ ವರ್ಗಾವಣೆ ಮಾಡುವುದಾದರೆ, ಸಬ್ ಸಾಯಿರ್ ಪಾಟರ್ ಟ್ಯಾಪ್ ಮಾಡಿ ಕೋಲಾರ, ತುಮಕೂರು, ಶಿವಮೊಗ್ಗಾ, ಮತ್ತು ಇನ್ನೂ ಕೆಲವು ಭಾಗಗಳಲ್ಲಿ ಬೋರ್‌ವೆಲ್‌ಗಳನ್ನು ತೆಗೆಯುವ ಮೂಲಕ, ಜನರಿಗೆ ಸಹಾಯ ಮಾಡುವುದಲ್ಲದೆ ಬುಲ್‌ಡೋಜರುಗಳನ್ನೂ ಮತ್ತು, ಕನಿಷ್ಠಪಕ್ಷ 25 ಟ್ರಾಕ್ಟರುಗಳನ್ನು ಪ್ರತಿಯೊಂದು ತಾಲ್ಲೂಕಿಗೂ ಜಾಗ್ರತೆ ಒದಗಿಸಬೇಕೆಂದು ಹೇಳಿ, ಸರ್ಕಾರವು ಈ ರಾಜ್ಯದ ಕಲ್ಯಾಣ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ಸೋಮಶೇಖರಪ್ಪನವರು ಅರ್ಧಗಂಟೆ ಚರ್ಚೆಗೆ ಅವಕಾಶ ತೆಗೆದುಕೊಂಡು ಬೋರ್‌ವೆಲ್ ಮತ್ತು ಬ್ಲಾಸ್ಟಿಂಗ್ ಮೆಷಿನ್‌ಗಳಿಂದ ಭೂಮಿಯಲ್ಲಿರತಕ್ಕ ನೀರನ್ನು ತೆಗೆದುಕೊಳ್ಳುವುದಕ್ಕೋಸ್ಕರ ಆ ಯಂತ್ರಗಳನ್ನು ನಡೆಸುವಂಥ ಅಗ್ರಿಕಲ್‌ಚರಲ್ ಇಂಜಿನಿಯರಿಂಗ್ ಪದವಿ ಅವರ ಬಗ್ಗೆ ಕೆಲವು ಮುಖ್ಯ ವಿಷಯಗಳನ್ನು ಈ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಈ ಇಲಾಖೆಯಲ್ಲಿ ಎಷ್ಟು ಮೆಷಿನ್ನುಗಳಿವೆಯೋ ಅಷ್ಟೂ ಕೂಡ ಕೆಲಸ ಮಾಡುತ್ತಿವೆ. ಆದರೆ ಅವರ ಬಗ್ಗೆ ಈ ದಿವಸ ಇನ್ನು ಯಾವುದಾದರೂ ಪ್ರೈವೇಟ್ ಕಾರ್ಪೊರೇಷನ್ನಿನವರು ಸ್ವಂತವಾಗಿ ಇವರು ಮಾಡುವ ರೀತಿಯಲ್ಲಿ ನಡೆಸಿದ್ದರೆ ಆ ಕಂಪನಿ ಮುಳುಗಿ ಹೋಗುತ್ತಿತ್ತು. ಆದರೆ ಸರ್ಕಾರದವರು ಅಲ್ಲಿ ಖರ್ಚು ಮಾಡುವಂಥ ಹಣಕ್ಕೆ ಏನೂ ತೊಕ್ಕವಿಲ್ಲ. ಇದು ಯಾರದೂ ಸ್ವಂತ ಹಣವಲ್ಲ. ಏನೋ ತಂದಾಯ, ಸರ್ವೆ ಸೆಟಲ್‌ಮೆಂಟ್‌ನಲ್ಲಿ ಜಾಸ್ತಿ ಮಾಡಿದರೆ ಆಯಿತು, ಹಣ ಕರೆಕ್ಷನ್ ಆಗುತ್ತದೆ, ಯಾರೋ ಖರ್ಚು ಮಾಡುತ್ತಾರೆ, ಎಂದು ಇವರು ಹೇಳಬಹುದು. ಮುಖ್ಯ ಸಮಸ್ಯೆ ಏನಿದೆಯೆಂದರೆ, ಅಂಡರ್‌ಗ್ರೌಂಡ್ ವಾಟರನ್ನು ಎಕ್ಸ್‌ಪ್ಲಾಯಿಟ್ ಮಾಡುವುದು. ಇದು ಮೂಲಭೂತವಾದ ಹಾಗೂ ಬಹು ಮುಖ್ಯವಾದ ಪ್ರಶ್ನೆ. ಕೋಲಾರ, ಬೆಂಗಳೂರು ಮತ್ತು ತುಮಕೂರು ಮತ್ತು ಇತರ ಕೆಲವು ಜಿಲ್ಲೆಗಳಲ್ಲಿ ಮೇಜರ್ ಇರಿಗೇಷನ್ನಿಗೆ ಏನೂ ಅವಕಾಶವಿಲ್ಲ, ಮಧ್ಯಮ ಇರಿಗೇಷನ್ನಿಗೂ ಅವಕಾಶವಿಲ್ಲ. ಲಿಟಲ್ ಮೈನರ್ ಇರಿಗೇಷನ್ನುಗಳನ್ನು ಎಕ್ಸ್‌ಪ್ಯಾಂಡ್ ಮಾಡುವುದಕ್ಕೂ ಸಹ ಅವಕಾಶವಿಲ್ಲ. ಅಲ್ಲಿರುವ ಅವಕಾಶ ಎಂದರೆ ಬೋರ್‌ವೆಲ್ ಮತ್ತು ಬ್ಲಾಸ್ಟಿಂಗ್ ಯಂತ್ರಗಳ ಸಹಾಯದಿಂದ ಬಾವಿಗಳನ್ನು ತೆಗೆದು ನೀರನ್ನು ಉಪಯೋಗ ಮಾಡುವುದು. ಸರ್ಕಾರದವರು ಇದಕ್ಕಾಗಿ ಕೆಲವು ಮೆಷಿನ್ನುಗಳನ್ನು ಇಟ್ಟಿದ್ದೇವೆಂದು ಹೇಳಿದರೆ, ಅವು ಏನೇನೂ ಸಾಲದು. ಕೋಲಾರದ ಪರಿಸ್ಥಿತಿಯನ್ನು ತೆಗೆದುಕೊಂಡರೆ ಈ ಬೋರ್‌ವೆಲ್ ಮೆಷಿನ್ನುಗಳಿಗೆ ಮತ್ತು ಬ್ಲಾಸ್ಟಿಂಗ್ ಮೆಷಿನ್ನುಗಳಿಗೆ ಸುಮಾರು ಒಂದು ಸಾವಿರ ಅರ್ಜಿಗಳು ಕೋಲಾರ ಅಸಿಸ್ಟೆಂಟ್ ಇಂಜಿನಿಯರ್ ಆಫೀಸಿನಲ್ಲಿವೆ. ಅವರಿಗೆ ಕೊಟ್ಟರು, ಇವರಿಗೆ ಕೊಟ್ಟರು, ನಮಗೆ ಕೊಟ್ಟಿಲ್ಲವೆಂಬುದಾಗಿ ದಿನವೂ ಅಲ್ಲಿ ತಕರಾರು ಇದೆ. ಸುಮ್ಮನೆ ಬಕಾನುರನ ಹೊಟ್ಟೆಗೆ ಮೂರು ಕಾಸು ಮಜ್ಜಿಗೆ ಕೊಟ್ಟ ಹಾಗೆ ಆಗಿದೆ. ಆದ್ದರಿಂದ ನಾವು 20 ಮೆಷಿನ್ನುಗಳನ್ನು ಮಾತ್ರ ಇಟ್ಟಿದ್ದೇವೆಂದು ಸರ್ಕಾರದವರು ಹೇಳಬಾರದು. ಏನಾಗಿ ಶಕ್ತ ಇಲ್ಲವಿದ್ದರೆ, ಸರ್ಕಾರ ದಿವಾಳಿಯಾಗುವ ಹಾಗೆ ಇದ್ದರೆ, ಈ ಇಲಾಖೆಯನ್ನು ಮುಚ್ಚಿ. ಬಹಳ ಸಂತೋಷ. ಇದು ಬಹಳ ಮುಖ್ಯ ಪ್ರಶ್ನೆ. ಅದರಲ್ಲಿಯೂ ಈ ಯಂತ್ರಗಳು ಸಾಕಷ್ಟು ಇಲ್ಲದಿದ್ದರೆ ನಿಜವಾಗಿಯೂ ಬೆಂಗಳೂರು ಮತ್ತು ಕೋಲಾರ ಪ್ರದೇಶಗಳಲ್ಲಿ ವ್ಯವಸಾಯವನ್ನು ಯಶಸ್ವಿಯಾಗಿ ಮಾಡುವುದಕ್ಕೆ ಸಾಧ್ಯವಿಲ್ಲ. ಕನಿಷ್ಠ ಪಕ್ಷ ಸರ್ಕಾರದವರು 400 ಬ್ಲಾಸ್ಟಿಂಗ್ ಮೆಷಿನ್ನುಗಳಿವೆ ಎಂಬುದಾಗಿ ಹೇಳಿದರೂ ನಮ್ಮ ರಾಜ್ಯಕ್ಕೆ ಇನ್ನು 200 ಮೆಷಿನ್ನುಗಳನ್ನು ತರಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಒಂದೊಂದು ತಾಲ್ಲೂಕಿನಲ್ಲಿ 2-3 ಬೋರ್‌ವೆಲ್ ಮೆಷಿನ್ನುಗಳನ್ನು ಮತ್ತು ಬ್ಲಾಸ್ಟಿಂಗ್ ಮೆಷಿನ್ನುಗಳನ್ನು ಕೊಡಬೇಕು. ಇಲ್ಲದೇ ಹೋದರೆ ನೂರಾರು ಜನರು ಯಾವಾಗಲೂ ಆಫೀಸುಗಳ ಮುಂದೆ ಇರುತ್ತಾರೆ. ಒಂದು ವೇಳೆ ಏನಾದರೂ ದೊಡ್ಡ ಮನುಷ್ಯರು ಎಂದು ಅವರಿಗೆ ಕೊಟ್ಟರೆ, ದೊಡ್ಡ ದೊಡ್ಡ ಜಮೀನ್ದಾರರಿಗೆ

ಕೊಟ್ಟರೆ, ಖಂಡಿತವಾಗಿ ತಕರಾರು ಯಾವಾಗಲೂ ಇದ್ದೇ ಇರುತ್ತದೆ. ಆದ್ದರಿಂದ ದಯವಿಟ್ಟು ಸಂಬಂಧಪಟ್ಟ ಮಂತ್ರಿಗಳು ಇದನ್ನು ತಲೆಗೆ ಹಚ್ಚಿಕೊಳ್ಳಬೇಕು. ಏಕೆಂದರೆ ಈ ಸಮಸ್ಯೆ ಬಹಳ ಮುಖ್ಯವಾದುದು ಎಂಬುದಾಗಿ ತಿಳಿದುಕೊಂಡು ಹೆಚ್ಚು ಹೆಚ್ಚಾಗಿ ಬೋರ್‌ವೆಲ್ ಮತ್ತು ಬ್ಲಾಸ್ಟಿಂಗ್ ಮೆಷಿನ್ನುಗಳನ್ನು ನಮ್ಮ ರಾಜ್ಯದ ಪ್ರತಿಯೊಂದು ತಾಲ್ಲೂಕಿಗೆ ಒದಗಿಸಿಕೊಡಬೇಕು. ಇಂತಹ ಯೋಜನೆಗಳನ್ನು ಅವಲಂಬಿಸಿರತಕ್ಕ ಕೋಲಾರ ಮತ್ತು ಇತರ ಜಿಲ್ಲೆಗಳಿಗೆ ಈ ಮೆಷಿನ್‌ಗಳನ್ನು ಒದಗಿಸಿ ನಿಜವಾಗಿಯೂ ನೀರಿಗೋಸ್ಕರ ಹಾಹಾಕಾರ ಪಡುತ್ತಿರುವ ಜನಗಳಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಹಾಗೂ ಈ ಇಲಾಖೆ ದಕ್ಷತೆಯಿಂದ ಕೆಲಸ ಮಾಡುವುದಕ್ಕೆ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅವನ್ನು ತೆಗೆದುಕೊಳ್ಳಬೇಕೆಂದು ಈ ಸಂಬಂಧದಲ್ಲಿ ನಾನು ಮಂತ್ರಿಗಳಿಗೆ ತಿಳಿಸಬಯಸುತ್ತೇನೆ.

† ಶ್ರೀ ಎನ್. ಎ. ಚನ್ನೇಗೌಡ (ಹೊಸಕೋಟೆ).—ಅಧ್ಯಕ್ಷರೇ, ಸರ್ಕಾರದ ವತಿಯಿಂದ ಇರತಕ್ಕ ಬುಲ್‌ಡೋಜರ್ಸ್ ಮತ್ತು ಟ್ರಾಕ್ಟರ್ಸ್ ಮತ್ತು ಬೋರ್‌ವೆಲ್ ಮೆಷಿನ್ನುಗಳ ಬಗ್ಗೆ ಮಾನ್ಯ ಸದಸ್ಯರಾದಂಥ ಶ್ರೀ ಸೋಮಶೇಖರಪ್ಪನವರು ಅರ್ಧ ಗಂಟೆ ವೇಳೆ ಪ್ರಶ್ನೆಗಳನ್ನು ಹಾಕಿ ಸರ್ಕಾರದ ಉತ್ತರದ ಬಗ್ಗೆ ಕೆಲವು ವಿಷಯಗಳನ್ನು ಹೇಳಿದರು. ನಾನಾದರೂ ಶ್ರೀ ಸೋಮಶೇಖರಪ್ಪನವರಿಗಾಗಲೀ, ಅಥವಾ ಮಾನ್ಯ ಶ್ರೀ ವೆಂಕಟಗಿರಿಯಪ್ಪನವರಿಗಾಗಲೀ ಕೆಲವು ವಿಷಯಗಳನು ಹೇಳಬೇಕಾಗಿದೆ. ಅವರು ಬಾವಿಗಳನ್ನು ತೆಗೆಯುವ ಯಂತ್ರಗಳನ್ನು ಪಡೆದು ಅವನ್ನು ಸರ್ಕಾರದ ವತಿಯಿಂದ ನಡೆಸಿದರೆ ಅದರಲ್ಲಿ ನಷ್ಟವಾಗಿ ರೈತರಿಗೆ ಏನೂ ಉಪಯೋಗವಾಗುತ್ತಾ ಇಲ್ಲವೆಂದು ಹೇಳಿದರು. ಅದನ್ನು ಪ್ರೈವೇಟ್‌ಸವರಿಗೆ ಕೊಡಬೇಕು ಎನ್ನುವ ರೀತಿಯಲ್ಲಿ ಹೇಳಿದರು. ಆದರೆ ಅವರಿಗೇ ಕೊಡಿ ಎಂದು ಹೇಳಲಿಲ್ಲ. ಸರ್ಕಾರದ ಉದ್ದೇಶ ಒಂದು ಟ್ರಾಕ್ಟರ್ ಆಗಲಿ, ಬುಲ್‌ಡೋಜರ್ ಆಗಲೀ, ಬ್ಲಾಸ್ಟಿಂಗ್ ಮೆಷಿನ್ ಆಗಲೀ ಇಟ್ಟುಕೊಳ್ಳದೇ ಇರುವ ಜನಸಾಮಾನ್ಯರಿಗೆ ಅನುಕೂಲವಾಗಬೇಕೆಂಬುದು ಆಗಿದೆ. ಆದರೆ ಇವುಗಳಿಂದ ಜನಗಳಿಗೆ ಉಪಯೋಗವಾಗುವ ಹಾಗೆ ಈ ವ್ಯವಸಾಯ ಇಲಾಖೆ ಬೆಳೆದಿಲ್ಲ. ಆ ರೀತಿ ಈ ಇಲಾಖೆಯನ್ನು ಇಟ್ಟಿದ್ದೀರಿ. ಇವರ ವಶದಲ್ಲಿರತಕ್ಕ ಬುಲ್‌ಡೋಜರ್ಸ್ ಎಷ್ಟು ಎಂಬುದನ್ನು ನೋಡಬೇಕು. ನಮ್ಮ ಸಂಸ್ಥಾನದಲ್ಲಿ ಬುಲ್‌ಡೋಜರ್ಸ್ 47, ಟ್ರಾಕ್ಟರ್ಸ್ 46, ಬೋರ್‌ವೆಲ್ ಮೆಷಿನ್ಸ್ 22 ಇರತಕ್ಕ ವಿಷಯಗಳನ್ನು ಪ್ರಸ್ತಾಪಿಸಿದರು. ನನಗೆ ತಿಳಿದಮಟ್ಟಿಗೆ ನಾನು ಆ ವಿಷಯವನ್ನು ಸಂಬಂಧಪಟ್ಟ ಇರಾಖೆಯನ್ನು ಕೇಳಿದ್ದರಲ್ಲಿ, ಮಂತ್ರಿಗಳನ್ನು ವಿಚಾರಿಸಿದ್ದರಲ್ಲಿ 34 ಬುಲ್‌ಡೋಜರ್ಸ್ ಅನ್‌ಸರ್ವಿಸಬಲ್, ಡಿಸ್‌ಪೋಜ್ ಮಾಡಬೇಕು ಎಂದು ಹೇಳುತ್ತಾರೆ. ಅಂದ ಮೇಲೆ ಕೇವಲ 66 ಬುಲ್‌ಡೋಜರ್ಸ್ ಮಾತ್ರ ಉಳಿದಿರುತ್ತವೆ. ಆದರೆ ನಮ್ಮಾರು ಒಂದು ಲಕ್ಷ ಎಕರೆ ಸಾಗು ಮಾಡುವುದಕ್ಕಾಗಲಿಲ್ಲವೆಂದು ಮಾನ್ಯ ಶ್ರೀ ಸೋಮಶೇಖರಪ್ಪನವರು ಹೇಳಿದರು. 1966–67ನೇ ಸಾಲಿನಲ್ಲಿ ಇವರ ಹತ್ತಿರ ಇರತಕ್ಕ ಬುಲ್‌ಡೋಜರ್ ಮತ್ತು ಟ್ರಾಕ್ಟರ್‌ಗಳಿಂದ 10,062 ಎಕರೆಗಳೂ, ಮತ್ತು 1967–68ರಲ್ಲಿ 12,150 ಮತ್ತು 7,226 ಎಕರೆಗಳಷ್ಟು ಸಮ ಮಾಡಿದ್ದಾರೆಂದು ಅಂಕಿ ಅಂಶ ಸಿಕ್ಕಿದೆ.

ಟ್ರಾಕ್ಟರುಗಳು ಮತ್ತು ಬುಲ್‌ಡೋಜರುಗಳು ರೈತರಿಗೆ ಸಾಕಷ್ಟು ದೊರೆಯುತ್ತಿಲ್ಲ. ಮತ್ತು ಈಗ ಎಲ್ಲೆಲ್ಲಿ ಟ್ರಾಕ್ಟರು ಮತ್ತು ಬುಲ್‌ಡೋಜರುಗಳನ್ನು ಸರ್ಕಾರದವರು ರೈತರಿಗೆ ಒದಗಿಸಿದ್ದಾರೆಯೋ ಅಲ್ಲ ಕೆಲವು ತಾಂತ್ರಿಕ ತೊಂದರೆಗಳು ಬಂದಿವೆ. ಸರಿಯಾದ ತಾಂತ್ರಿಕ ಕೆಲಸಗಾರರು ಸಿಕ್ಕದೆ ತೊಂದರೆಯಾಗಿದೆ. ಇದಕ್ಕೆ ಯಾರನ್ನು ಜವಾಬ್ದಾರರನ್ನು ಮಾಡುವುದು ? ಸಂಬಂಧಪಟ್ಟ ಇರಾಖೆಯ ಅಧಿಕಾರಿಗಳಾಗಲೀ, ಮಂತ್ರಿಗಳಾಗಲೀ ಇದರ ಜವಾಬ್ದಾರಿಯನ್ನು ತೆಗೆದುಕೊಂಡು ತಾಂತ್ರಿಕ ತರಬೇತಿಯನ್ನು ಪಡೆದಿರತಕ್ಕ ಕೆಲಸಗಾರರನ್ನು ಪಡೆದು ರೈತರಿಗೆ ಬೇಕಾದಾಗ ಟ್ರಾಕ್ಟರ್ ಮತ್ತು ಬುಲ್‌ಡೋಜರುಗಳ ಕೆಲಸಕ್ಕೆ ಮತ್ತು ರಿಪೇರಿ ಇತ್ಯಾದಿಗಳಿಗೆ ಅವರನ್ನು ಕಳುಹಿಸಲು ವ್ಯವಸ್ಥೆ ಮಾಡಬೇಕು. ಈ ಬಗ್ಗೆ ಸರ್ಕಾರದವರು ಮುಂಜಾಗ್ರತೆ ಕ್ರಮವನ್ನು ತೆಗೆದುಕೊಂಡು, ಅದಕ್ಕೆ ಹೆಚ್ಚಿನ ಗಮನ ಕೊಡಬೇಕೆಂದು ನಾನು ಹೇಳಬಯಸುತ್ತೇನೆ. ಮುಖ್ಯವಾಗಿ ವ್ಯವಸಾಯಕ್ಕೆ ಸಂಬಂಧಪಟ್ಟ ವಿಷಯದಲ್ಲಿ ಈಗಿರತಕ್ಕ ವ್ಯವಸಾಯ ಇಲಾಖೆಯ ಮೂಲಕ ಆಗತಕ್ಕಂಥಾದ್ದನ್ನು ಬೇರೆ ಇಲಾಖೆಗೆ ವಹಿಸಬೇಕು ಎಂದು ಹೇಳಿದರೆ ಅದನ್ನು ನಾನು ಒಪ್ಪುವುದಿಲ್ಲ. ಜಿಯಾಲಜಿಕಲ್ ಸರ್ವೆ ಡಿಪಾರ್ಟ್‌ಮೆಂಟ್ ಬೆಂಗಳೂರು ಜಿಲ್ಲೆಯಲ್ಲಿರತಕ್ಕದ್ದು ಎಷ್ಟರಮಟ್ಟಿಗೆ ರೈತರಿಗೆ ಸಹಾಯಕವಾಗಿದೆ ಎಂಬುದರ ಬಗ್ಗೆ ಅನೇಕರು ಅನುಭವವನ್ನು ಪಡೆದಿದ್ದಾರೆ. ಅವರು ವೆಲ್‌ಬೋರಿಂಗ್ ರಿಗ್ಸ್ ಇಟ್ಟುಕೊಂಡು ವ್ಯವಸಾಯಕ್ಕೆ ಹೆಚ್ಚಿಗೆ ಅನುಕೂಲ ಆಗಿಲ್ಲ. ವ್ಯವಸಾಯಕ್ಕೆ ಅವುಗಳಿಂದ ಹೆಚ್ಚಿನ ಲಾಭ ದೊರಕಿಲ್ಲ ಎಂದೂ ಮಾನ್ಯ ಸದಸ್ಯರು ಹೇಳಿದ್ದಾರೆ. ವ್ಯವಸಾಯ ಇಲಾಖೆಯಲ್ಲಿಯೂ ಕೂಡ ಹೆಚ್ಚಿಗೆ ಟ್ರಾಕ್ಟರು, ಬುಲ್ಡೋಜರುಗಳು ಮತ್ತು ರಿಗ್ಸ್ ಇದ್ದರೂ ಕೂಡ ಅವುಗಳಿಗೆ ಬೇಕಾದ ಎಕ್ವಿಪ್‌ಮೆಂಟ್‌ಗಳು ಮತ್ತು ತಾಂತ್ರಿಕ ಕೆಲಸಗಾರರು, ಸ್ಪೇರ್ ಪಾರ್ಟ್ಸ್‌ಗಳು

(ಶ್ರೀ ಎನ್. ಎ. ಚನ್ನೇಗೌಡ)

ಸರಿಯಾಗಿ ಸಿಕ್ಕುವೆ ಇರುವುದರಿಂದ ಟ್ರಾ್ಯಕ್ಟರು, ಬಲ್ಕೋಜರುಗಳು, ಮತ್ತು ರಿಗ್ಸ್‌ಗಳನ್ನು ರೈತರಿಗೆ ಸರಿಯಾಗಿ ಒದಗಿಸುವುದಕ್ಕೆ ಆಗುತ್ತಾ ಇಲ್ಲ. ಸ್ಪೇರ್‌ಪಾರ್ಟ್ಸುಗಳು ಪರದೇಶದಿಂದ ಬರಬೇಕಾಗಿರುವುದರಿಂದ ಸ್ವಲ್ಪ ತೊಂದರೆಯಾಗಿದೆ. ನಾವು ವ್ಯವಸಾಯ ಇಲಾಖೆಯ ಬೇಡಿಕೆಯ ಮೇರೆ ಮಾತನಾಡುವಾಗ ಈ ವಿಷಯವನ್ನು ಹೇಳಿದ್ದೇನೆ. ಮಾನ್ಯ ಮಂತ್ರಿಗಳೂ ಸಹ ಈ ಬಗ್ಗೆ ಬಹಳ ಕಷ್ಟಪಟ್ಟಿದ್ದಾರೆ. ಅದಕ್ಕಾಗಿ ನಾನು ಅವರಿಗೆ ನನ್ನ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಈ ಒಂದು ಕೆಲಸ ಬಹಳ ಕಷ್ಟ ಇದೆ. ಬೆಂಗಳೂರು ಜಿಲ್ಲೆಯಲ್ಲಿ 22 ರಿಗ್ಸ್ ಇವೆ. ಒಟ್ಟು ಮೈಸೂರು ಸಂಸ್ಥಾನದಲ್ಲಿ 119 ರಿಗ್ಸ್‌ಗಳು ಇವೆ. ಅವುಗಳಿಂದ ಅನೇಕ ಬಾವಿಗಳನ್ನು ನಮ್ಮ ರಾಜ್ಯದಲ್ಲಿ ತೆಗೆದಿದ್ದಾರೆ. ಕೋಲಾರ ಜಿಲ್ಲೆಯಲ್ಲಿ ರಿಗ್ಸ್‌ಗಳಿಂದ 800 ಬಾವಿಗಳನ್ನು ತೆಗೆದಿದ್ದಾರೆ. ಇನ್ನೂ ಹೆಚ್ಚಿಗೆ ರಿಗ್ಸ್ ಬೇಕಾಗುತ್ತದೆ ಎಂದು ಶ್ರೀಮಾನ್ ವೆಂಕಟರಿಯಪ್ಪನವರೂ ಹೇಳಿದ್ದಾರೆ. ತುಮಕೂರು, ಕೋಲಾರ, ಜಿಲ್ಲೆಗಳಲ್ಲಿ ಹೆಚ್ಚಿಗೆ ನೀರಾವರಿ ಬಾವಿಗಳನ್ನು ಮಾಡುವುದಕ್ಕೆ ಅವಕಾಶ ಇದೆ ಎಂದು ನಾನು ಸರ್ಕಾರಕ್ಕೆ ತಿಳಿಸಬಯಸುತ್ತೇನೆ. ಬಾವಿಗಳನ್ನು ತೆಗೆಯುವುದಕ್ಕೆ ಮುಂಚೆ ಜಿಯರಾಪಿಕಲ್ ಸರ್ವೇ ಮಾಡಿ ನಂತರ ಬಾವಿಯನ್ನು ತೆಗೆಸಬೇಕು.

ಅಗ್ರಿಕಲ್‌ಚರ್ ಕಾಲೇಜಿನಲ್ಲಿ ಒಬ್ಬರು ವಿದ್ಯಾರ್ಥಿ ಇದ್ದಾರೆ, ಅವರು ಒಳ್ಳೆಯ ಕೆಲಸಗಾರರು. ಅವರಿಗೆ ಒಳ್ಳೆಯ ತಾಂತ್ರಿಕ ಜ್ಞಾನವೂ ಇದೆ. ಅವರನ್ನು ಬೇರೆ ಕಡೆ ಕಳುಹಿಸಕೂಡದು. ಈ ಬಗ್ಗೆ ನಾನು ಮಾನ್ಯ ಮಂತ್ರಿಗಳಲ್ಲಿಯೂ ಕೂಡ ಮಾತನಾಡಿದ್ದೇನೆ. ಆ ವಿದ್ಯಾರ್ಥಿ ಪಾಸಿದ್ದಾರೆ ಅವರು ಒಳ್ಳೆಯ ಎಕ್ಸ್‌ಪರ್ಟ್ ಆಗಿದ್ದಾರೆ. ಆದ್ದರಿಂದ ಅವರ ಸೇವೆಯನ್ನು ಹೆಚ್ಚಿಗೆ ಪಡೆದುಕೊಂಡು ಈ ಇಲಾಖೆಯಲ್ಲಿ ಇರತಕ್ಕ ನ್ಯೂನತೆಗಳನ್ನು ನಿರಿಪಡಿಸಬೇಕು. ರಿಗ್ಸ್‌ಗಳನ್ನು ಹೆಚ್ಚಿಗೆ ತರಿಸಿ ರೈತರಿಗೆ ಒದಗಿಸಬೇಕು. ಬ್ಲಾಸ್ಟರಿಂಗ್ ಮಿಷನ್ಸ್, ಟ್ರಾ್ಯಕ್ಟರುಗಳು ಮತ್ತು ಬುಲ್ಡೋಜರುಗಳು ಇವುಗಳಿಂದ ರೈತರಿಗೆ ಅನುಕೂಲ ಇದೆ. ಆದ್ದರಿಂದ ಅವುಗಳನ್ನು ರೈತರಿಗೆ ಸರಿಯಾಗಿ ಒದಗಿಸುವ ವ್ಯವಸ್ಥೆಯನ್ನು ಮಾಡಬೇಕು. ವ್ಯವಸಾಯ ಇಲಾಖೆಯಲ್ಲಿರತಕ್ಕ ಲೋಪದೋಷಗಳನ್ನು ನಿರಿಪಡಿಸಬೇಕು. ಈ ಟ್ರಾ್ಯಕ್ಟರು, ಬುಲ್ಡೋಜರುಗಳು, ಬ್ಲಾಸ್ಟರಿಂಗ್ ಮೆಷಿನ್‌ಗಳು, ರಿಗ್ಸ್‌ಗಳು ಇವುಗಳನ್ನು ರೈತರಿಗೆ ಒದಗಿಸುವ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು. ಮತ್ತು ಅವುಗಳ ಕೆಲಸಕ್ಕೆ ಬೇಕಾದಂತಹ ತ್ರಾಂತಿಕ ಕೆಲಸಗಾರರು ಮತ್ತು ಬಿಡಿ ಭಾಗಗಳನ್ನೂ ಒದಗಿಸುವ ವ್ಯವಸ್ಥೆಯನ್ನು ಮಾಡಬೇಕು. ಅವುಗಳ ಸಹಾಯದಿಂದ ರೈತರು ಹೆಚ್ಚು ಹೆಚ್ಚು ಬಾವಿಗಳನ್ನು ತೆಗೆಯುವುದಕ್ಕೆ ಸರ್ಕಾರದವರು ಸಹಾಯಮಾಡಿ ನೀರಾವರಿ ಪರ್ಸೆಂಟೇಜ್ ಹೆಚ್ಚುಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಇದರಿಂದ ಆಹಾರ ಉತ್ಪಾದನೆಯನ್ನು ಜಾಸ್ತಿಮಾಡಿ ಸಾಧ್ಯವಾದಮಟ್ಟಿಗೆ ಆಹಾರದ ಅಭಾವವನ್ನೂಕೂಡ ಕಡಿಮೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇಷ್ಟುಹೇಳಿ ಈ ಪ್ರಸ್ತಾಪ ಮಾಡುವುದಕ್ಕೆ ಅಧ್ಯಕ್ಷರು ಅವಕಾಶ ಕೊಟ್ಟ ದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ :—ಸನ್ಮಾನ್ಯ ಸಭಾಧ್ಯಕ್ಷರೇ, ಈಗಾಗಲೇ ಈ ಅರ್ಧಘಂಟೆಯ ಚರ್ಚೆಯಲ್ಲಿ ನಮ್ಮಪಕ್ಕದ ಜಿಲ್ಲೆಯವರೇ ಆಗಿರತಕ್ಕ ಶ್ರೀಮಾನ್ ಸೋಮಶೇಖರಪ್ಪನವರು ಬುಲ್ಡೋಜರುಗಳು ಟ್ರಾ್ಯಕ್ಟರುಗಳು ಮತ್ತು ವೆರ್‌ಬೋರಿಂಗ್ ಮೆಷಿನ್‌ಗಳು ಯಾವರೀತಿ ಕೆಲಸ ಮಾಡುತ್ತವೆ ಎನ್ನುವ ವಿಚಾರದಲ್ಲಿ ಮಾತನಾಡಿದ್ದಾರೆ. ಈಗ ಮಲೆನಾಡಿನಲ್ಲಿ ಈ ವೆರ್‌ಬೋರಿಂಗ್ ಮೆಷಿನ್‌ನ ಅವಶ್ಯಕತೆ ಇಲ್ಲಿಯವರೆಗೂ ಕಂಡು ಬಂದಿರಲಿಲ್ಲ. ಮಲೆನಾಡಿನಲ್ಲಿ 280 ಇಂಚು ಮಳೆ ಬೀಳುತ್ತಿತ್ತು. ಆದ್ದರಿಂದ ಯಾವರೀತಿಯ ತೊಂದರೆಯೂಕೂಡ ನಗುತ್ತಾ ಇರಲಿ. ಅಲ್ಲಿ ಹಿಂದೆ ಏನು ಮಳೆ ಬೀಳುತ್ತಿತ್ತೋ ಆದರಲ್ಲಿ ಈಗ ಅರ್ಧಕ್ಕಿಂತ ಕಡಿಮೆಯಾಗಿದೆ. ಆದ್ದರಿಂದ ಅಲ್ಲಿ ನೀರಿನ ತೊಂದರೆಯಾಗಿರುವುದರಿಂದ ಬಾವಿಗಳನ್ನು ತೋಡಲು ಎಲ್ಲರೂ ವೆರ್‌ಬೋರಿಂಗ್ ಮೆಷಿನ್ ಬೇಕು ಎಂದು ಕೇಳುತ್ತಿದ್ದಾರೆ. ಇದರಿಂದಾಗಿ ಆ ವೆರ್‌ಬೋರಿಂಗ್ ಮೆಷಿನ್‌ಗಳ ಅವಶ್ಯಕತೆ ಹೆಚ್ಚಾಗಿದೆ ಎನ್ನತಕ್ಕಂಥ ವಿಚಾರವನ್ನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ನಾನು ಇಷ್ಟಪಡುತ್ತೇನೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ವೆರ್‌ಬೋರಿಂಗ್ ಮೆಷಿನ್ ಒಂದೂ ಕೆಲಸಮಾಡುತ್ತಿಲ್ಲ ಎಂದು ನಾನು ಅಧ್ಯಕ್ಷರ ಮುಖಾಂತರ ಸಂಬಂಧಪಟ್ಟ ವ್ಯವಸಾಯ ಇಲಾಖೆಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತೇನೆ. ನಮ್ಮ ಸ್ನೇಹಿತರು ಈಗಾಗಲೇ ಹೇಳಿದ್ದಾರೆ. ವ್ಯವಸಾಯ ಇಲಾಖೆಯಲ್ಲಿ 45 ಟ್ರಾ್ಯಕ್ಟರುಗಳು ಇವೆ. ಬುಲ್ಡೋಜರುಗಳು 97 ಇವೆ. ವೆರ್‌ಬೋರಿಂಗ್ ಮೆಷಿನ್‌ಗಳು 60 ಇವೆ. ಆದರೆ ಇವು ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟು ಕೆಲಸಮಾಡುತ್ತವೆ ಎನ್ನತಕ್ಕಂಥಾದ್ದನ್ನು ಮಾನ್ಯ ಮಂತ್ರಿಗಳು ಉತ್ತರಕೊಡುವಾಗ ತಿಳಿಸಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಕೆಲಸಮಾಡದೆ ಐಡರ್ ಆಗಿರತಕ್ಕ ಟ್ರಾ್ಯಕ್ಟರುಗಳು ಒಂದು ಎಂದು ಕೊಟ್ಟಿದ್ದಾರೆ. 12 ಬುಲ್ಡೋಜರುಗಳು ಕೆಲಸಮಾಡುತ್ತಿಲ್ಲ ಎಂದು ಕೊಟ್ಟಿದ್ದಾರೆ. ವೆರ್ ಬೋರಿಂಗ್ ಮೆಷಿನ್‌ಗಳು 6 ಕೆಲಸ ಮಾಡುತ್ತಿಲ್ಲ ಎಂದು ರಿಪೋರ್ಟಿನಲ್ಲಿ ಸರ್ಕಾರದವರು ಕೊಟ್ಟಿದ್ದಾರೆ. ಈ ಮೆಷಿನ್‌ಗಳು ಇದ್ದೂ ಕೆಲಸಕ್ಕೆ ಬಾರದೆ ಹೋಗಿರುವ ವಿಚಾರದಲ್ಲಿ ನಾನು ಒಂದು ಮಾತು ಹೇಳುತ್ತೇನೆ. ಸರ್ಕಾರದವರು ಮೆಷಿನರಿಗಳನ್ನು ತರಿಸತಕ್ಕಂಥಾದ್ದು ಹೆಚ್ಚು ಅಲ್ಲ. ಅವುಗಳನ್ನು ಸರಿಯಾದ ರೀತಿಯಲ್ಲಿ ಮೇಂಟೇನ್ ಮಾಡಿಕೊಂಡು ಹೋಗತಕ್ಕಂಥಾದ್ದು ಅವರ ಆದ್ಯಕರ್ತವ್ಯ.

7-30 P.M.

ಈ ಬುಲ್ಡೋಜರ್‌ಗಳನ್ನು ತರಿಸುವುದಕ್ಕೆ ಮೊದಲು ಅವುಗಳನ್ನು ನೋಡಿಕೊಳ್ಳುವಂತಹ ತಜ್ಞರನ್ನು ತಯಾರು ಮಾಡಬೇಕು. ತಜ್ಞರು ಇಲ್ಲದಿರುವುದರಿಂದ ಈ ರೀತಿ ಮೆಷಿನ್‌ಗಳು ಕೆಟ್ಟು ನಿಂತಿವೆ ಎಂದು ಸಂಬಂದಪಟ್ಟ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ಮಲೆನಾಡಿನ ಅನೇಕ ಹಳ್ಳಿಗಳಲ್ಲಿರುವ ಬಾವಿಗಳಲ್ಲಿ ನೀರು ಇಲ್ಲದೆ ಜನರಿಗೆ ಕುಡಿಯುವುದಕ್ಕೆ ನೀರು ಇಲ್ಲದೆ ತೊಂದರೆ ಪಡುತ್ತಿದ್ದಾರೆ. ಬಾವಿಗಳನ್ನು ಆಳಪಡಿಸುವ ಶಕ್ತಿ ಆ ಜನರಿಗೆ ಇಲ್ಲವಾಗಿದೆ. ಸರ್ಕಾರದವರ ಬಳಿ ಬಾವಿ ಕೊರೆಯುವ ಯಂತ್ರಗಳು ಬೇಕಾದಷ್ಟು ಇವೆ. ಇವುಗಳ ಜೊತೆಗೆ ಬ್ಲಾಸ್ಟಿಂಗ್ ಮಿಷಿನ್‌ಗಳು ಸಹ ಇದ್ದರೆ ಬಹಳ ಚೆನ್ನಾಗಿ ಕೆಲಸ ಮಾಡುವುದಕ್ಕೆ ಅವಕಾಶವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಇವತ್ತಿನ ದಿವಸ ನಮ್ಮ ಜಿಲ್ಲೆಯಲ್ಲಿ ಬುಲ್ಡೋಜರ್‌ಗಳು ಆಗಲಿ, ಬಾವಿ ಕೊರೆಯುವ ಯಂತ್ರಗಳಾಗಲೀ, ಟ್ರಾ್ಯಕ್ಟರ್‌ಗಳಾಗಲೀ ಕೆಲಸ ಮಾಡುತ್ತಿಲ್ಲ. ಈ ವಿಚಾರವನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ಈಗಾಗಲೇ ತಂದಿದ್ದೇನೆ.

ಶ್ರೀ ಬಿ. ವೆಂಕಟಗಿರಿಯಪ್ಪ :—ನಿಮ್ಮ ಜಿಲ್ಲೆಯಲ್ಲಿ ಮಳೆ ಜಾಸ್ತಿಯಾಗಿ ಆಗುತ್ತವೆ ಅಲ್ಲವೆ ?

ಶ್ರೀ ಪಿ. ಎಂ. ಶಾಸ್ತ್ರಿ :—ಇವತ್ತಿನ ದಿವಸ ನಮ್ಮ ಜಿಲ್ಲೆಯಲ್ಲಿ 250 ಇಂಚ್ ಮಳೆಯಾಗುತ್ತಿದ್ದ ಪ್ರದೇಶದಲ್ಲಿ 100 ಇಂಚ್ ಆಗುತ್ತದೆ, 40-50 ಇಂಚ್ ಮಳೆಯಾಗುತ್ತಿದ್ದ ಕಡೆ 15 ಇಂಚ್ ಆಗುತ್ತದೆ. ಈ ಕಾರಣದಿಂದ ಹಾಸನ ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಯಾವ ರೀತಿ ಸರ್ಕಾರದವರು ಕೆಲವೊಂದು ಮಿಷನ್‌ಗಳನ್ನು ಒದಗಿಸಿದ್ದಾರೋ ಅದೇ ರೀತಿ ನಮ್ಮ ಜಿಲ್ಲೆಗೂ ಒದಗಿಸಬೇಕೆಂದು ಕೇಳುತ್ತಿರುವುದು. ರೈತರ ಉಪಯೋಗಕ್ಕಾಗಿ ತರಿಸಿದಂಥ ಈ ಯಂತ್ರಗಳು ಮಿಸ್-ಯೂಸ್ ಆಗುತ್ತವೆ. ಅಂದರೆ ದೊಡ್ಡ ದೊಡ್ಡ ಕಂಪನಿಗಳವರಿಗೆ ಬಾವಿ ತೆಗೆಯುವುದಕ್ಕೆ ಸರ್ಕಾರದವರು ಕೊಡುತ್ತಿರುವುದು ಸರಿಯಲ್ಲ. ವ್ಯವಸಾಯಗಾರರ ಉಪಯೋಗಕ್ಕೆ ಮಾತ್ರ ಈ ಯಂತ್ರಗಳನ್ನು ಉಪಯೋಗಿಸಬೇಕೆಂದು ಸಂಬಂಧಪಟ್ಟ ಮಂತ್ರಿಗಳಲ್ಲಿ ಕೇಳಿಕೊಂಡು ನನಗೆ ಇಷ್ಟು ಕಾಲ ಮಾತಾಡುವುದಕ್ಕೆ ಅವಕಾಶ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ರಾಚಯ್ಯ (ವ್ಯವಸಾಯ ಇರಾಖೆಯ ಮಂತ್ರಿಗಳು).—ನನ್ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಸೋಮಶೇಖರಪ್ಪನವರು ಅರ್ಧಗಂಟೆಯ ಚರ್ಚೆಯನ್ನು ಮಾಡಿ ಆ ಮೂಲಕ ನನಗೆ ಒಂದು ಉಪಕಾರ ಮಾಡಿಕೊಟ್ಟಿದ್ದಾರೆ. ಅದಕ್ಕಾಗಿ ಅವರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಇದೇ ಸಭಾಯದಲ್ಲಿ ಇತರ ಮೂರು ಜನ ಮಾನ್ಯ ಸದಸ್ಯರುಗಳು ಕೂಡ ಚರ್ಚೆಯಲ್ಲಿ ಭಾಗವಹಿಸಿ ವ್ಯವಸಾಯದ ಇಂಜಿನಿಯರಿಂಗ್ ಇರಾಖೆಯಲ್ಲಿ ಕೆಲಸ ಮಾಡತಕ್ಕಂಥ ಬುಲ್ಡೋಜರ್‌ಗಳು, ಬಾವಿ ಕೊರೆಯುವ ಯಂತ್ರಗಳು, ಟ್ರಾ್ಯಕ್ಟರ್‌ಗಳು ಮತ್ತು ಬ್ಲಾಸ್ಟಿಂಗ್ ಯಂತ್ರಗಳು ಯಾವ ರೀತಿ ಕೆಲಸ ಮಾಡುತ್ತಿವೆ ಎಂಬುದನ್ನು ತಮ್ಮ ಭಾಷಣದಲ್ಲಿ ವ್ಯಕ್ತಪಡಿಸಿದ್ದಾರೆ. ಈ ಒಂದು ಡಿವಿಜನ್ ನಲ್ಲಿ ಯಾವ ತ್ವರಿತಗತಿಯಿಂದ ಕೆಲಸವಾಗಬೇಕಾಗಿತ್ತೋ ಆ ರೀತಿ ಆಗುತ್ತಿಲ್ಲ ಎಂಬುದು ಆ ಮಾನ್ಯ ಸದಸ್ಯರ ಮನಸ್ಸಿನಲ್ಲಿ ಇರಬಹುದು. ಈ ಯಂತ್ರಗಳಿಂದ ಆಗಬೇಕಾಗಿರತಕ್ಕಂಥ ಕೆಲಸಗಳು ಆಗಾಧವಾಗಿವೆ. ಮೈಸೂರು ಸಂಸ್ಥಾನದಲ್ಲಿ 100ಕ್ಕೆ 90 ಭಾಗ ಖುಷ್ಕಿ ಜಮೀನು ಇದೆ. ಈ ಜಮೀನಿನಲ್ಲಿರತಕ್ಕ ನೀರನ್ನು ಈ ಯಂತ್ರಗಳ ಸಹಾಯದಿಂದ ಉಪಯೋಗಿಸಿಕೊಂಡು ವ್ಯವಸಾಯವನ್ನು ಮಾಡುವುದಕ್ಕೆ ಯಾವ ಒಂದು ಯೋಜನೆಗಳನ್ನು ಸಹ ಸರ್ಕಾರದವರು ಹಾಕಿಕೊಂಡಿಲ್ಲ, ಈ ಬಗ್ಗೆ ವ್ಯವಸಾಯ ಇರಾಖೆ ವಿಫಲವಾಗಿದೆ ಎಂಬುದಾಗಿ ಶ್ರೀಮಾನ್ ಸೋಮಶೇಖರಪ್ಪನವರು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದರು. ಆಯವ್ಯಯದ ಅಂದಾಜಿನ ಚರ್ಚೆಯಲ್ಲಿ ಉತ್ತರ ಕೊಡುವಾಗ ಆಗಾಗ್ಗೆ ಕ್ಷಾಮಕ್ಕೆ ತುತ್ತಾಗುವ ಪ್ರದೇಶಗಳಲ್ಲಿ ಮತ್ತು ಡ್ರೈ ಏರಿಯಾಗಳಲ್ಲಿ ಈ ಯಂತ್ರಗಳ ಸಹಾಯದಿಂದ ನೀರನ್ನು ಉಪಯೋಗಿಸಿಕೊಂಡು ವ್ಯವಸಾಯ ಮಾಡುವ ಸಲುವಾಗಿ 280 ಕೋಟಿ ರೂಪಾಯಿಗಳ ಕೆಲವಾರು ಯೋಜನೆಗಳನ್ನು ತಯಾರು ಮಾಡಲಾಗಿದೆ, ಆ ಯೋಜನೆಗಳಲ್ಲಿ ಬಾವಿ ತೋಡಿಸುವುದು, ಪೈಪ್‌ಲೈನ್ ಇರಿಗೇಷನ್‌ಗಳನ್ನು ಕೈಗೊಳ್ಳುವುದು ಸೇರಿದೆ, ಆರ್ಥಿಕ

(ಶ್ರೀ ಬಿ. ರಾಚಯ್ಯ)

ಇರಾಖೆಯವರು ಈ ಕೆಲಸಕ್ಕಾಗಿ ಹಣ ಒದಗಿಸಿದಂತೆ ಕೆಲಸವನ್ನು ಮಾಡಿಕೊಂಡು ಬರಲಾಗುವುದು ಎಂದು ಹೇಳಲಾಗಿತ್ತು. ಈ ಕಾರಣದಿಂದ ಈ ಬಗ್ಗೆ ನಮ್ಮಲ್ಲಿ ಯಾವ ಒಂದು ಯೋಜನೆಗಳು ಇಲ್ಲ. ಎಂಬುದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಹಣ ಒದಗಿದಂತೆ ಈ ಯೋಜನೆಗಳನ್ನು ಮಾಡ ಬೇಕಾಗಿದೆ. ಇವತ್ತಿನ ದಿವನ ಕೃಷಿಗಾಗಿ, ನೀರಾವರಿಗಾಗಿ, ವಿದ್ಯುಚ್ಛಕ್ತಿ ಯೋಜನೆಗಳಿಗಾಗಿ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಲಾಗಿದೆ ಎಂಬುದನ್ನು ಒಪ್ಪಿಕೊಂಡರೂ ಕೂಡ ನಮ್ಮ ಇರಾಖೆಯ ದಾಹ ಎಷ್ಟು ಇದೆ ಎಂದರೆ ರಾಕ್ಷಸನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯನ್ನು ಕೊಟ್ಟಂತಾಗಿದೆ. 3 ತಿಂಗಳ ಹಿಂದೆ 37 ಬುಲ್‌ಡೋಜರ್‌ಗಳು ನಮ್ಮ ರಾಜ್ಯಕ್ಕೆ ಬಂದುವು. ಇನ್ನೂ 10 ಬುಲ್‌ಡೋಜರ್‌ಗಳು ಬರುವುದರಲ್ಲ ಇದೆ. ಕೆಲವು ಹಳೆಯ ಬುಲ್‌ಡೋಜರ್‌ಗಳು ನಮ್ಮಲ್ಲ ಇದ್ದವು. ಅವನ್ನು ತರಿಸಿ 25 ವರ್ಷಗಳಾಗಿದ್ದುದರಿಂದ ಆಗಾಗ್ಗೆ ರಿಪೇರಿಗಾಗಿ ಕಳಿಸ ಬೇಕಾಗಿತ್ತು. ಆ ಒಂದು ದೃಷ್ಟಿಯಿಂದ ಎಷ್ಟು ಕೆಲಸವನ್ನು ಮಾಡಬೇಕಾಗಿತ್ತೋ ಅಷ್ಟು ಕೆಲಸವನ್ನು ಈ ಹಳೆಯ ಯಂತ್ರಗಳಿಂದ ಮಾಡುವುದಕ್ಕೆ ಆಗಲಲ್ಲ. ಈಗ ಹೊಸದಾಗಿ 37 ಯಂತ್ರಗಳು ಬಂದಿರುವುದರಿಂದ ಕೆಲಸ ತ್ವರಿತವಾಗಿ ನಡೆಯುತ್ತಿದೆ. ಇನ್ನೂ 10 ಬುಲ್‌ಡೋಜರ್‌ಗಳು ಬರುವುದು ಇದೆ. ಈಗ 4 ದಿವಸಗಳ ಹಿಂದೆ ಕೇಂದ್ರದ ಕೃಷಿ ಮಂತ್ರಿಗಳು ರಷ್ಯಾದಿಂದ ಬರತಕ್ಕಂಥ 80 ಬುಲ್‌ಡೋಜರ್‌ಗಳನ್ನು ನಮ್ಮ ರಾಜ್ಯಕ್ಕೆ ಕೊಡಲು ಒಪ್ಪಿ ಅದಕ್ಕೆ ಬೇಕಾಗಿರ ತಕ್ಕಂಥ ಫಾರಿನ್ ಎಕ್ಸ್‌ಚೇಂಜನ್ನು ರಿಲೀಜ್ ಮಾಡಿಕೊಟ್ಟಿರುವ ಬಗ್ಗೆ ನಮಗೆ ತಿಳಿಸಿದ್ದಾರೆ. ಈಗ ಇರುವ ಬುಲ್‌ಡೋಜರ್‌ಗಳು ಮತ್ತು ಹೊಸದಾಗಿ ಬರುವ 80 ಬುಲ್‌ಡೋಜರ್‌ಗಳನ್ನು ಸೇರಿಸಿದರೂ ಕೂಡ ಪ್ರತಿ ಜಿಲ್ಲೆಯಿಂದ ಬರತಕ್ಕಂಥ ಬೇಡಿಕೆಗಳನ್ನು ಪೂರೈಸುವುದಕ್ಕೆ ಸಾಧ್ಯ ವಾಗುವುದಿಲ್ಲ. ಈ ಕಾರಣದಿಂದ ಇನ್ನೂ ಹೆಚ್ಚು ಹೆಚ್ಚಾಗಿ ಬುಲ್‌ಡೋಜರ್‌ಗಳನ್ನು ತರಿಸಿಕೊಳ್ಳ ಬೇಕಾಗಿ ಬರುತ್ತದೆ. ಈ ಇಂಜಿನಿಯರಿಂಗ್ ಇರಾಖೆಯವರಿಂದ ಸಾಕಷ್ಟು ಕೆಲಸ ತೆಗೆದುಕೊಳ್ಳ ಬೇಕೆಂದು ಮಾನ್ಯ ಸದಸ್ಯರು ಹೇಳಿದರು. ಆ ಬಗ್ಗೆ ಸಾಕಷ್ಟು ಗಮನವನ್ನು ಕೊಟ್ಟಿದ್ದೇವೆ. ನಾನು 5-6 ಸಾರಿ ವರ್ಕ್‌ಷಾಪ್‌ಗೆ ಹೋಗಿ ಯಾವ ಯಾವ ಯಂತ್ರಗಳು ಯಾವ ರೀತಿ ಕೆಲಸ ಮಾಡುತ್ತಿವೆ ಎಂಬುದನ್ನು ತಿಳಿದುಕೊಂಡಿದ್ದೇನೆ. ಈಗ ಹಳೆಯ ಕಥೆಯನ್ನೇ ಜ್ಞಾಪಿಸಿಕೊಂಡು ಇಂಜಿನಿಯರಿಂಗ್ ಇರಾಖೆಯಲ್ಲಿ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಹೇಳುವುದು ಸರಿಯಲ್ಲ. ಕಳೆದ ಡಿಸೆಂಬರ್‌ವರೆಗೆ 119 ಬಾವಿಗಳು ಆಗಿವೆ. ಇರಾಖೆಯಿಂದ ಬಂದಿರುವ ಅಂಕಿಅಂಶಗಳ ಪ್ರಕಾರ ಹಿಂದಿನ ವರ್ಷ ತೆಗೆಸಿದ 97 ಬಾವಿಗಳ ಪೈಕಿ 86 ಬಾವಿಗಳಲ್ಲಿ ತೃಪ್ತಿಕರವಾಗಿ ನೀರು ಬಂದಿದೆ.

ಇನ್ನು ಬುಲ್‌ಡೋಜರ್ ಬಗ್ಗೆ ಹೇಳುವುದಾದರೆ, 1956 ರಿಂದ 1961 ರವರೆಗೆ ಬುಲ್ ಡೋಜರ್‌ಗಳು 2,14,607 ಗಂಟೆಗಳವರೆಗೆ ಕೆಲಸ ಮಾಡಿ 53,651 ಎಕರೆ ಭೂಮಿಯನ್ನು ಸಮಪಾತ ಮಾಡಲಾಗಿದೆ. 1961 ರಿಂದ 1966 ರವರೆಗೆ 2,15,365 ಗಂಟೆಗಳ ಕೆಲಸ ಮಾಡಿ 53,841 ಎಕರೆಗಳಷ್ಟು ಭೂಮಿಯನ್ನು ಸಮಪಾತ ಮಾಡಲಾಗಿದೆ. 1966-67 ಮತ್ತು 1968ರ ಡಿಸೆಂಬರ್‌ವರೆಗೆ 29,438 ಎಕರೆಗಳಷ್ಟು ಭೂಮಿಯನ್ನು ಸಮಪಾತ ಮಾಡಲಾಗಿದೆ. ಇದಕ್ಕಿಂತ ಹೆಚ್ಚು ಕೆಲಸ ಮಾಡುವುದಕ್ಕಾಗಿಲ್ಲ. ಒಟ್ಟು 1,36,930 ಎಕರೆಗಳನ್ನು ಮಟ್ಟ ಮಾಡುವುದಕ್ಕೆ ಬುಲ್‌ಡೋಜರ್‌ಗಳು ಸಹಾಯ ಮಾಡಿವೆ ಎಂದು ತಮಗೆ ವರದಿಯ ಪ್ರಕಾರ ತಿಳಿಸುತ್ತಿದ್ದೇನೆ. ಆನೇಕರ್ ತಾಲ್ಲೂಕ್‌ನಲ್ಲಿ ಪ್ರಾಯೋಗಿಕವಾಗಿ ಎರಡು ಬ್ಲಾಸ್ಟಿಂಗ್ ಯೂನಿಟ್ಸ್‌ನ್ನು ಪ್ರಯೋಗ ಮಾಡಿದ್ದೇವೆ. 28-9-1968ರಿಂದ ಹೊಸದಾಗಿ 20 ಯೂನಿಟ್ಸ್‌ಗಳನ್ನು ಕೊಂಡುಕೊಂಡಿದ್ದೇವೆ. ಇದಕ್ಕೆ ಬೇಕಾಗಿರತಕ್ಕಂಥ ಕಂಪ್ರೋಲ್ ಕಮಾಡಿಟೀಸನ್ನು ನಮ್ಮ ತರಿಸಿಕೊಂಡು ಬ್ಲಾಸ್ಟಿಂಗ್ ಯೂನಿಟ್ಸ್‌ನ್ನು ಕೆಲವು ಕಡೆ ಪ್ರಯೋಗ ಮಾಡಲಾಗುತ್ತಿದೆ. ಕೋಲಾರ ಜಿಲ್ಲೆಯಲ್ಲಿ ಬಾವಿ ತೋಡುವಾಗ ಕಲ್ಲು ಸಿಗುತ್ತಿರುವುದರಿಂದ ಬ್ಲಾಸ್ಟಿಂಗ್ ಯೂನಿಟ್ ಒಂದು ವರವಾಗಿದೆ. 27-3-1969ರಲ್ಲಿ 30 ಬ್ಲಾಸ್ಟಿಂಗ್ ಯೂನಿಟ್‌ಗಳನ್ನು ಕೊಂಡುಕೊಳ್ಳುವುದಕ್ಕೆ ಮಂಜೂರಾತಿ ಕೊಟ್ಟಿದ್ದೇವೆ. 10ಕ್ಕೆ ಈಗಾಗಲೇ ಆರ್ಡರನ್ನು ಪ್ಲೇಸ್ ಮಾಡಿದ್ದೇವೆ. ಈಗ ಒಟ್ಟು ನಮ್ಮಲ್ಲಿ 52 ಯೂನಿಟ್‌ಗಳು ಇವೆ. ಮತ್ತೆ ಕೊಂಡುಕೊಳ್ಳುವುದಕ್ಕೆ ಯೋಚನೆ ಮಾಡಿದ್ದೇವೆ. ಆದರೆ ಸಂಬಂಧಪಟ್ಟ ಕಂಪನಿಯವರಲ್ಲಿ ರೆಡಿ ಸ್ಟಾಕ್ ಇಲ್ಲದಿರುವುದರಿಂದ ಅವರು ಸಪ್ಲೈ ಮಾಡುವ ಸ್ಥಿತಿಯಲ್ಲ ಇಲ್ಲ. ಕ್ಯಾಲಿಕ್ಸ್ ಟೈಪ್ ಆಫ್ ಇಂಡಿಜಿನಸ್ ರಿಗ್ಸ್‌ನ್ನು ಮುಂದಿನ ತಿಂಗಳೊಳಗೆ 55ನ್ನು ಕೊಂಡು ಕೊಳ್ಳಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಇದರಲ್ಲ 25ನ್ನು ಹೊರಗಡೆಯಿಂದ ತರಿಸಿಕೊಡ ಬೇಕೆಂದು ಕೇಂದ್ರ ಸರ್ಕಾರದವರನ್ನು ಕೇಳಿದ್ದೇವೆ. ಈಗ ಕೇಂದ್ರ ಸರ್ಕಾರದವರು 2ನ್ನು ಮಾತ್ರ ತರಿಸಿಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಮೂರನ್ನು ಇಂಡಿಯಾದಲ್ಲಿ ತಯಾರಾಗುವುದನ್ನೇ

ಕೊಂಡುಕೊಳ್ಳಬೇಕೆಂದು ಹೇಳಿದ್ದಾರೆ. ಕೇಂದ್ರದ ಉಪಪ್ರಧಾನಮಂತ್ರಿಗಳು ಬಿಹಾರ್‌ನಲ್ಲಿರತಕ್ಕ ನಕೆಂಡ್-ಹ್ಯಾಂಡ್ ಯಂತ್ರಗಳನ್ನು ತೆಗೆದುಕೊಳ್ಳುವಂತೆ ಹೇಳಿದ್ದಾರೆ. ಆದರೆ ಆ ಸರ್ಕಾರದವರು ಕೊಡುವ ಬಗ್ಗೆ ಇನ್ನೂ ಅನುಮತಿ ಕೊಟ್ಟಿಲ್ಲ. 20 ರಿಗ್ಸ್ ಯೂನಿಟ್‌ಗಳಾದರೂ ನಮಗೆ ಬಂದರೆ ಒಂದು ದಿವನದಲ್ಲಿ ಒಂದು ಬಾವಿಯನ್ನು ತೆಗೆಯುವುದಕ್ಕೆ ಅವಕಾಶವಾಗುತ್ತದೆ. ಈಗ ವ್ಯವಸಾಯದ ಇಂಜಿನಿಯರಿಂಗ್ ಇಲಾಖೆಯಲ್ಲಿ ಒಂದು, ಲೋಕೋಪಯೋಗಿ ಇಲಾಖೆಯಲ್ಲಿ ಒಂದು ಮತ್ತು ಜಿಯಲಾಜಿಕರ್ ಇಲಾಖೆಯಲ್ಲಿ ಒಂದು, ಈ ಪ್ರಕಾರ ಮೂರು ಯೂನಿಟ್‌ಗಳು ಇವೆ. ವ್ಯವಸಾಯದ ಇಂಜಿನಿಯರಿಂಗ್ ಇಲಾಖೆಯಲ್ಲಿರುವ ಯೂನಿಟ್ ಚೆನ್ನಾಗಿ ಕೆಲಸ ಮಾಡುತ್ತಿಲ್ಲವಾದ್ದರಿಂದ ಅದನ್ನು ಬೇರೆ ಇಲಾಖೆಗೆ ವರ್ಗ ಮಾಡಬೇಕೆಂದು ಶ್ರೀಮಾನ್ ಸೋಮಶೇಖರಪ್ಪನವರು ಹೇಳಿದರು. ಮದ್ರಾಸ್ ಮತ್ತು ಆಂಧ್ರದಲ್ಲಿರುವಂಥ ಯೂನಿಟ್‌ಗಳು ಯಾವ ರೀತಿ ಕೆಲಸ ಮಾಡುತ್ತಿವೆ ಎಂಬುದನ್ನು ಸಹ ನಾನು ತರಿಸಿಕೊಂಡು ನೋಡಿದ್ದೇವೆ. ನಮ್ಮಲ್ಲಿರುವ ಯೂನಿಟ್‌ಗಳು ನೆರೆ ರಾಜ್ಯಗಳಲ್ಲಿರುವ ಯೂನಿಟ್‌ಗಳಿಗಿಂತ ಚೆನ್ನಾಗಿ ಕೆಲಸ ಮಾಡುತ್ತಿವೆ. ಇದಕ್ಕೆ ಕೆಲವು ವಿವರಗಳನ್ನು ಕೊಡುತ್ತೇನೆ. 1967-68 ಮತ್ತು 1969ರ ಡಿಸೆಂಬರ್‌ವರೆಗೆ ಲೆಕ್ಕವನ್ನು ತೆಗೆದುಕೊಂಡರೆ, ಲೋಕೋಪಯೋಗಿ ಇಲಾಖೆಯಲ್ಲಿರುವ ಒಂದು ಮೆಷಿನ್‌ನಿಂದ ಆವರೇಜ್ ಒಂದು ವರ್ಷದಲ್ಲಿ 2. 5 ಬಾವಿಗಳು ಆಗಿವೆ. ಮೈನ್ಸ್ ಅಂಡ್ ಜಿಯಲಾಜಿಕರ್ ಇಲಾಖೆಯಲ್ಲಿರುವ ಮೆಷಿನ್‌ನಿಂದ ಆವರೇಜ್ ಒಂದು ವರ್ಷದಲ್ಲಿ 3.96 ಬಾವಿಗಳು ಆಗಿವೆ. ವ್ಯವಸಾಯದ ಇಂಜಿನಿಯರಿಂಗ್ ಇಲಾಖೆಯಲ್ಲಿರುವ ಮೆಷಿನ್‌ನಿಂದ ಆವರೇಜ್ ಒಂದು ವರ್ಷದಲ್ಲಿ 2. 65 ಬಾವಿಗಳು ಆಗಿವೆ. ಆವರೇಜ್ ಡೆಪ್ತ್ ತೆಗೆದುಕೊಂಡರೆ ಲೋಕೋಪಯೋಗಿ ಇಲಾಖೆಯಲ್ಲಿರುವ ಮಿಷನ್ 125 ಅಡಿಗಳವರೆಗೆ ಕೆಳಗೆ ಹೋಗಿದೆ ಮೈನ್ಸ್ ಅಂಡ್ ಜಿಯಾಲಜಿ ಇಲಾಖೆಯಲ್ಲಿರುವ ಮಿಷನ್ 100ರಿಂದ 110 ಅಡಿಗಳವರೆಗೆ ಕೆಳಗೆ ಹೋಗಿದೆ, ವ್ಯವಸಾಯದ ಇಂಜಿನಿಯರಿಂಗ್ ಇಲಾಖೆಯಲ್ಲಿರುವ ಮಿಷನ್ 120 ರಿಂದ 130 ಅಡಿಗಳವರೆಗೆ ಕೆಳಗೆ ಹೋಗಿದೆ. ಜಿಯಲಾಜಿಕರ್ ಇಲಾಖೆಯವರು ಈ ಬಗ್ಗೆ ಇನ್ನೂ ಸಂಶೋಧನೆ ನಡೆಸುತ್ತಿದ್ದಾರೆ. ರೈತರು ಬಾವಿ ತೋಡಿಸುವಾಗ 40-50 ಅಡಿಗಳ ನಂತರ ಕಲ್ಲು ಸಿಕ್ಕಿದಾಗ ಬಾವಿ ಕೊರೆಯುವ ಯಂತ್ರಗಳನ್ನು ಒದಗಿಸಬೇಕೆಂದು ವ್ಯವಸಾಯದ ಇಂಜಿನಿಯರಿಂಗ್ ಇಲಾಖೆಯವರನ್ನು ಕೇಳುತ್ತಿದ್ದಾರೆ. ಕಬ್ಬನ್‌ಪಾರ್ಕ್ ಮತ್ತು ನನ್ನ ಮನೆಯ ಕಾಂಪೌಂಡ್‌ನಲ್ಲಿ ತೆಗೆಸುತ್ತಿರುವ ಬಾವಿಗಳಲ್ಲಿ ಕಲ್ಲು ಸಿಕ್ಕಿರುವುದರಿಂದ ಈ ಯಂತ್ರವನ್ನು ಉಪಯೋಗಿಸಲಾಗುತ್ತಿದೆ. ದಿನಕ್ಕೆ ಎರಡು ಅಡಿಗಳಿಗಿಂತ ಕೆಳಗೆ ಹೋಗುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ಕಾರಣದಿಂದ ಕೆಲಸ ನಿಧಾನವಾಗುತ್ತಿದೆ. ಈಗ ಜಿಯಲಾಜಿಕಲ್ ಇಲಾಖೆಯವರ ಕೆಲಸವೇನೆಂದರೆ ಮೈನೂರು ಸಂಸ್ಥಾನದಲ್ಲಿ ಎಲ್ಲೆಲ್ಲಿ ಬಾವಿ ತೋಡಿದರೆ ನೀರು ಸಿಗುತ್ತದೆ ಎಂಬುದನ್ನು ಕಂಡುಹಿಡಿಯುವುದು. ಲೋಕೋಪಯೋಗಿ ಇಲಾಖೆಯವರ ಕೆಲಸವೇನೆಂದರೆ ಕುಡಿಯುವ ನೀರಿನ ಬಾವಿಗಳನ್ನು ತೋಡಿಸಿ ಕೊಡುವುದರ ಮೂಲಕ ಟ್ಯಾಂಕ್‌ಗಳನ್ನು ಕಟ್ಟಿಸಿ ಕೊಡುವುದು. ಅವರು ಕಂಟ್ರಾಕ್ಟರ್‌ಗಳ ಮೂಲಕ ಈ ಕೆಲಸವನ್ನು ಮಾಡಿಸುತ್ತಿದ್ದಾರೆ. ವ್ಯವಸಾಯದ ಇಂಜಿನಿಯರಿಂಗ್ ಇಲಾಖೆಯವರ ಕೆಲಸ ರೈತರಿಗೆ ಬಾವಿ ತೋಡಲು ಸಹಾಯ ಮಾಡುವುದು. ಇವರ ವಶದಲ್ಲಿರತಕ್ಕ ಯಂತ್ರವನ್ನು ಕಂಪನಿಯವರಿಗೆ ಬಾವಿ ತೋಡಿಸಿ ಕೊಳ್ಳಲು ಕೊಟ್ಟಿಲ್ಲ. ವ್ಯವಸಾಯದ ಉಪಯೋಗ ಕ್ಕಾಗಿ ಮಾತ್ರ ಬಾವಿ ತೋಡಿಸಲು ಉಪಯೋಗ ಮಾಡುತ್ತಿದ್ದಾರೆ. ಜಿಯಲಾಜಿಕಲ್ ಇಲಾಖೆಯಲ್ಲಿ ಸಂಶೋಧನೆಗಾಗಿ ಮೆಷಿನ್‌ಗಳು ಇವೆ. ಈಗ ನಾನು ಏನೇನು ಅವರೇಜ್ ಫಿಗರ್ಸ್ ಕೊಟ್ಟಿದ್ದೇನೋ ಅದು ತೃಪ್ತಿಕರವಾಗಿದೆ ಎಂದು ನಾನಾರೂ ಕೂಡ ತಿಳಿದುಕೊಂಡಿಲ್ಲ. ಇನ್ನೂ ಹೆಚ್ಚಿನ ಕೆಲಸವಾಗಬೇಕಾಗಿದೆ. ಆ ಇಲಾಖೆಯವರಿಗೆ ಇರುವ ತೊಂದರೆಗಳನ್ನು ತಿಳಿಸಬೇಕೆಂದು ಹೇಳಿದ್ದೇನೆ. ಈಗ ನಾವು ಲಾರಿಗಳನ್ನು ಕೊಂಡುಕೊಳ್ಳುವುದನ್ನು ತಡ ಮಾಡಿದ್ದೇವೆ. ಈ ಕೆಲಸ ಮಾಡಲು ಟ್ರೈನಿಂಗ್ ಆದ ಆಪರೇಟರ್‌ಗಳು ಬೇಕಾಗಿದ್ದಾರೆ. ಟ್ರೈನಿಂಗ್ ಕ್ಲಾಸ್ ಪ್ರಾರಂಭ ಮಾಡುವುದು ತಡವಾಯಿತು. ಇದಕ್ಕೆ ಕಾರಣಗಳು ಏನು ಎಂಬುದನ್ನು ಹೇಳಬೇಕಾಗಿಲ್ಲ. ಇಂತಹ ವಿಚಾರಗಳಲ್ಲಿ ಆರ್ಥಿಕ ಇಲಾಖೆಯವರು ಕೆಲವೊಂದು ಮಾಹಿತಿಗಳನ್ನು ಕೇಳುತ್ತಾರೆ. ಅವನ್ನೆಲ್ಲಾ ಒದಗಿಸಿಕೊಡಬೇಕಾಗುತ್ತದೆ. ಈ ಕಾರಣದಿಂದ ನಿಧಾನವಾಗುತ್ತದೆ. ಈಗ ಕೆಲವು ಬ್ಲಾಸ್ಟಿಂಗ್ ಯೂನಿಟ್‌ಗಳನ್ನು ಕೊಂಡುಕೊಂಡಿದ್ದೇವೆ. ಅದಕ್ಕೆ ಎಕ್ಸ್‌ಪ್ಲೋಸಿವ್‌ಗಳು ಬೇಕಾಗಿರುವುದರಿಂದ ಕಲ್ಕತ್ತಾದ ಕಂಚ್ರೋಲರ್ ಅವರಿಗೆ ಬರೆದು ತರಿಸಬೇಕಾಗಿದೆ. ಅದು ಬರುವವರೆಗೆ ತಡವಾಗುತ್ತದೆ. ಬ್ಲಾಸ್ಟಿಂಗ್ ಸಾಗಿಸಿಕೊಂಡು ಹೋಗಲು ಲಾರೀನ ಬೇಕಾಗಿವೆ. ಈ ದೃಷ್ಟಿಯಿಂದ ಎಷ್ಟು ವೇಗದಲ್ಲಿ ಕೆಲಸ ನಡೆಯ ಬೇಕಾಗಿತ್ತೋ ಅಷ್ಟು ವೇಗದಲ್ಲಿ ಕೆಲಸ ನಡೆಯುವುದಕ್ಕಾಗುವುದಿಲ್ಲ. ಅದಕ್ಕಾಗಿ ಅಲ್ಲಿರುವ ಸಿಬ್ಬಂದಿ ವರ್ಗದವರಿಗೆ ತರಬೇತಿ ಕೊಡುವುದಕ್ಕೆ, ಅವರ ಸಂಬಳಸಾರಿಗೆಗಳನ್ನು ಹೆಚ್ಚಿಸುವುದಕ್ಕೆ, ಅವರನ್ನು ಉತ್ತೇಜನ ಕೊಡುವುದಕ್ಕೆ ಎಲ್ಲಾ ವಿಷಯಗಳ ಬಗ್ಗೆ ಗಮನ ಕೊಟ್ಟಿದ್ದೇವೆ. ಈ ಒಂದು ವರ್ಷದಲ್ಲಿ ಕಳೆದ ವರ್ಷಕ್ಕಿಂತಲೂ

(ಶ್ರೀ ಬಿ. ರಾಚಯ್ಯ)

ಹೆಚ್ಚಿನ ಗಮನ ಕೊಟ್ಟಿದ್ದೇವೆ. ಮುಂದಿನ ಬಡ್ಜೆಟ್ ಅಧಿವೇಶನದವರೆಗೆ ಕಾದು ನೋಡಿ. ಅದರಲ್ಲಿ ಇನ್ನೂ ಹೆಚ್ಚು ಇಂಪ್ರೂವ್‌ಮೆಂಟ್ ಆಗುತ್ತದೆ. ಆವಾಗಲೂ ನಿಮ್ಮಿಂದ ಹೆಚ್ಚು ಟೀಕೆ ಟಿಪ್ಪಣಿಗಳು ಬಂದರೆ ಬಹಳ ಮಟ್ಟಿಗೆ ಸ್ವಾಗತಿಸುತ್ತೇನೆ. ಆದರೆ ಈಗ ಸ್ವಲ್ಪ ಕಾರಾವಕಾಶ ಕೇಳುತ್ತೇನೆ. ಈ ಇರಾಖೆಯಿಂದ ತೆಗೆದು ಬೇರೆ ಇರಾಖೆಗೆ ಕೊಡಿ ಎಂದರೆ ಅದರಿಂದ ನಮ್ಮ ಸಮಸ್ಯೆಯನ್ನು ಬಗೆ ಹರಿಸುವುದಕ್ಕಾಗುವುದಿಲ್ಲ. ಈಗ ಇರತಕ್ಕಂಥ ಸಮಸ್ಯೆ ಬ್ರಹಾದಾಕಾರದ ಸಮಸ್ಯೆ. ಇದನ್ನು ಇಂಪ್ರೂವ್ ಮಾಡುವುದಕ್ಕೆ ಹೆಚ್ಚು ಬೋರಿಂಗ ರಿಗ್ಸ್‌ಗಳನ್ನು ತರಿಸಬೇಕು. ಅದಕ್ಕೆ ಬೇಕಾಗಿರತಕಂಥ ಸಿಬ್ಬಂದಿ ವರ್ಗ ಕೊಡಬೇಕು. ಹಾಗೆ ಮಾಡದೇ ಒಂದೊಂದು ಇರಾಖೆಯನ್ನು ಕೈ ತೋರಿಸುತ್ತಾ ಹೋದರೆ ರೈತರಿಗೆ ಅನುಕೂಲವಾಗುವುದಿಲ್ಲ. ಅದಲ್ಲದೆ ವೈಯಕ್ತಿಕವಾಗಿ ಜಾಯಿಂಟ್ ಡೈರಕ್ಟರ್ ವಿಷಯದಲ್ಲಿ ಮಾತನಾಡಿ ಅವರನ್ನು ಬೇರೆ ಕಡೆ ವರ್ಗಮಾಡಬೇಕು ಎಂದು ಕೆಲವು ಸದಸ್ಯರು ಹೇಳಿದರು. ಅವರೇ ಬೇರೆಕಡೆ ವರ್ಗಮಾಡಿಕೊಡುವುದಕ್ಕೆ ಕೇಳಿದರು ಆದರೆ ನಾನುಒಂದು ಸೀಕ್ರೆಸಿಹೇಳುವುದಾದರೆ ಬುಲ್‌ಡೋಜರ್ಸ್‌ನ್ನು ಪರ್ಚೇಸ್ ಮಾಡುವ ನಂದರ್ಭದಲ್ಲಿ ಇದನ್ನು ಡೈರೆಕ್ಟ್ ಆಗಿ ತರಿಸೋಣವೇ ಆಥವಾ ಎಜೆನ್ಸಿ ಮುಖಾಂತರ ತರಿಸೋಣವೇ ಎನ್ನುವ ಪ್ರಶ್ನೆ ಬಂದಾಗ ಡೈರಕ್ಟ್ ಆಗಿ ಪರ್ಚೇಸ್ ಮಾಡುವುದು ಒಳ್ಳೆಯದು ಮತ್ತು ಗೌರ್ನಮೆಂಟು ಗೌರ್ನಮೆಂಟ್ ಅಕೌಂಟಿನಲ್ಲಿ ತರಿಸಿದರೆ ಒಳ್ಳೆಯದು, ಕಡಿಮೆ ದರ ಬೀಳುತ್ತದೆ ಎಂದು ಈ ರೀತಿ ಹೇಳಿದರು. ನಾನೂ ಪರೀಕ್ಷೆ ಮಾಡಿದ್ದೇನೆ. ಆ ರೀತಿ ಬುಲ್‌ಡೋಜರ್ಸ್‌ಗಳನ್ನು ಏಜೆನ್ಸಿ ಮುಖಾಂತರ ತರಿಸಿದ್ದೇ ಆಗಿದ್ದರೆ ಸರ್ಕಾರಕ್ಕೆ 15 ಸಾವಿರ ರೂಪಾಯಿ ನಷ್ಟವಾಗುತ್ತಿತ್ತು. ಕೆಲವು ಸದಸ್ಯರು ಈ ಇರಾಖೆ ಉದ್ಧಾರವಾಗಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಇದನ್ನು ನೋಡಿದರೆ ಆಫೀಸರ್ ದಕ್ಷತೆ ಏನು ಎನ್ನುವುದು ತೋರಿಸುತ್ತದೆ. The officer recommended that it should be taken on government to government account that shows the integrity of the officer. ಇದರಲ್ಲಿ ಏನು ಇದೆ ಅನ್ನುವುದನ್ನು ಅರ್ಥಮಾಡಿಕೊಳ್ಳಬೇಕು. ಈ ರೀತಿ ಇನ್ನೂ ಅನೇಕ ಸಂದರ್ಭದಲ್ಲಿ ಪರೀಕ್ಷೆ ಮಾಡುತ್ತಾ ಇದ್ದೇನೆ. ಈ ಇರಾಖೆಯಲ್ಲಿರುವ ಜಾಯಿಂಟ್ ಡೈರಕ್ಟರ್ ಡೈರೆಕ್ಟರ ಸಾಯಿರ್ ಕನೆಸರ್ವೇಷನ್ ಡೈರಕ್ಟರ್ ಇವರಿಂದ ಯಾವ ರೀತಿ ಕೆಲಸ ಕಾರ್ಯಗಳನ್ನು ತೆಗೆಸಿಕೊಳ್ಳಬೇಕು ಎನ್ನುವುದಕ್ಕೆ ನನಗಿನ್ನೂ ಒಂದು ವರ್ಷ ಅವಕಾಶ ಕೊಡಿ. ಅವರ ಹತ್ತಿರ ಹೇಗೆ ಕೆಲಸ ತೆಗೆಸಿಕೊಳ್ಳಬೇಕು ಎನ್ನುವುದು ನನ್ನ ಜವಾಬ್ದಾರಿ ಮತ್ತು ಈ ಇರಾಖೆಯನ್ನು ಹೇಗೆ ನಡೆಸಿಕೊಂಡು ಹೋಗಬೇಕು ಎನ್ನುವುದು ನನ್ನ ಕರ್ತವ್ಯವಾಗಿದೆ. ಯಾರೇ ಆಗಲಿ ಅವರ ಕೆಲಸ ಹೇಗಿದೆ ಎನುವುದನ್ನು ಜಡ್ಜ ಮಾಡುವುದು ನನ್ನ ಕರ್ತವ್ಯವಾಗಿದೆ. ಮೈಸೂರು ಪ್ರಾಂತದಲ್ಲಿ ಜಾತಿ ನೋಡಿ ಮುಖದ ಮೇರೆ ಮಸಿ ಬಳಿಯುತ್ತಾರೆ ಎನ್ನುವ ಲೆಕ್ಕಾಚಾರ ಈ ಪೊತ್ತು ನಡೆಯುತ್ತಾ ಇದೆ. ಇದಕ್ಕೆ ಅವಕಾಶ ಕೊಡಬೇಡಿ. ಈ ಇರಾಖೆಯಲ್ಲಿ ಇನ್ನೂ ಹೆಚ್ಚು ಕೆಲಸ ಕಾರ್ಯಗಳನ್ನು ನಡೆಸುವುದಕ್ಕೆ ಯಾರು ಯಾರು ಅಡ್ಡಿ ಮಾಡುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇವೆ. ಅದಕ್ಕೋಸ್ಕರ ಇನ್ನೊಂದು ವರ್ಷ ಅವಕಾಶ ಕೊಡಿ ಇಂಪ್ರೂವ್ ಮಾಡುವುದಕ್ಕೆ ಸರ್ವ ಪ್ರಯತ್ನವನ್ನೂ ಮಾಡುತ್ತೇನೆ ಮತ್ತು ಈ ಕೃಷಿ ಬಗ್ಗೆ ಚೆನ್ನಾಗಿ ಕೆಲಸ ಮಾಡಿ ರೈತರಿಗೆ ಅನುಕೂಲವಾಗುವುದಕ್ಕೆ ಏನೇನು ಕೆಲಸ ಕಾರ್ಯಗಳನ್ನು ಮಾಡಬೇಕೋ ಅದಕ್ಕೆ ನನ್ನ ಸರ್ವ ಪ್ರಯತ್ನವನ್ನೂ ಮಾಡುತ್ತೇನೆಂದು ಹೇಳಿ ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

Mr. DEPUTY SPEAKER.—The House will now adjourn and meet tomorrow at 1-00 P.M.

The House adjourned at fifty-five minutes past seven of the Clock to meet again at One of the Clock on Wednesday the 9th April 1969.

WD 12782—GPB—600—11-8-1969